ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಫೆಬ್ರವರಿ 10 ಸೋಮವಾರ 2025

ಸಂಪುಟ: 45 | ಸಂಚಿಕೆ: 293 | ಪುಟಗಳು: 10

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ರಾಜ್ಯ ಬಿಜೆಪಿ ಬಿಕ್ಕಟ್ಟು ಶಮನಕ್ಕೆ ಮುಂದಾದ ಹೈಕಮಾಂಡ್

ರಾಜ್ಯಾಧ್ಯಕ್ಷ ವಿಜಯೇಂದ್ರಗೆ ತುರ್ತು ದೆಹಲಿಗೆ ಬುಲಾವ್

ಭಿನ್ನಮತೀಯರೂ ದೆಹಲಿಗೆ ದೌಡು

ಬೆಂಗಳೂರು, ಫೆ.9– ದೆಹಲಿ ಫಲಿತಾಂಶ ಬಳಿಕ ರಾಜ್ಯ ಬಿಜೆಪಿ ಕಿತ್ತಾಟಕ್ಕೆ ಕೊನೆಗೂ ಹೈಕಮಾಂಡ್ ಮದ್ದು ಅರೆಯುವ ಸುಳಿವು ಕೊಟ್ಟಿದೆ. ದೆಹಲಿಗೆ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರಿಗೆ ತುರ್ತು ಬುಲಾವ್ ಕೊಟ್ಟು ವರಿಷ್ಠರು ಕರೆಸಿಕೊಂಡಿದ್ದಾರೆ. ಭಿನ್ನರೂ ಸಹ ದೆಹಲಿ ತಲುಪಲಿದ್ದು, ಹೈಕಮಾಂಡ್ ಮಧ್ಯಸ್ಥಿಕೆಯಲ್ಲಿ ಬಿಜೆಪಿ ಬಣ ವೀರರ ಸಂಧಾನ ಸಭೆ ಇದೆಯಾ ಎಂಬ ಕುತೂಹಲ ಮೂಡಿದೆ.


ವಿಜಯೇಂದ್ರ

ಒಂದು ಕಡೆ ದೆಹಲಿ ಚುನಾವಣೆ ಪ್ರಕ್ರಿಯೆ ಮುಗಿದಿದೆ. ಇನ್ನೊಂದು ಕಡೆ ರಾಜ್ಯ ಬಿಜೆಪಿ ಅಧ್ಯಕ್ಷರ ಆಯ್ಕೆ ಕಾಲ ಸಮೀಪವಾಗುತ್ತಿದೆ. ಈ ಬೆನ್ನಲ್ಲೇ ಬಿಜೆಪಿ ಮನೆಯಲ್ಲಿ ಚಟುವಟಿಕೆಗಳು ಗರಿಗೆದರಿವೆ. ಹೈಕಮಾಂಡ್ ಬುಲಾವ್ ಮೇರೆಗೆ ದಾವಣಗೆರೆ ಪ್ರವಾಸ ಮೊಟಕುಗೊಳಿಸಿ ದಿಢೀರನೇ ಬೆಂಗಳೂರಿನಿಂದ ದೆಹಲಿಗೆ ವಿಜಯೇಂದ್ರ ಹೊರಟಿದ್ದಾರೆ. ನಾಳೆ ವಿಜಯೇಂದ್ರ ಹೈಕಮಾಂಡ್ ನಾಯಕರ ಭೇಟಿ ಮಾಡಲಿದ್ದಾರೆ. ವಿಜಯೇಂದ್ರ ದೆಹಲಿಗೆ ದೌಡಾಯಿಸಿದ ಬೆನ್ನಲ್ಲೇ ಇಂದು ಯತ್ನಾಳ್ ತಂಡ ಸಹ ದೆಹಲಿಗೆ ಪ್ರಯಾಣಿಸಿದೆ. ನಾಳೆ ಕೇಂದ್ರ ಸಚಿವ ಸೋಮಣ್ಣ ನಿವಾಸದ ಕಾರ್ಯಕ್ರಮದಲ್ಲಿ ಭಾಗಿಯಾಗಿ ಬಳಿಕ ಹೈಕಮಾಂಡ್ ನಾಯಕರ ಭೇಟಿಗೂ ಭಿನ್ನರು ಪ್ರಯತ್ನ ನಡೆಸಲಿದ್ದಾರೆ.

ಒಂದೇ ದಿನ ವಿಜಯೇಂದ್ರ ಹಾಗೂ ಭಿನ್ನಮತೀಯರು ದೆಹಲಿಗೆ ಭೇಟಿ ಕೊಟ್ಟಿದ್ದಾರೆ. ಹೀಗಾಗಿ ಬಿಜೆಪಿಯಲ್ಲಿ ದೆಹಲಿ ವಿದ್ಯಮಾನಗಳು ತೀವ್ರ ಕುತೂಹಲ ಮೂಡಿಸಿದ್ದು, ಹೈಕಮಾಂಡ್ ತೀರ್ಮಾನ ಏನು ಅನ್ನೋದು ಗೊತ್ತಾಗಬೇಕಿದೆ.

ಮುಂದಿನ ಸಿಎಂ ರೇಸ್‌ನಲ್ಲಿ ನಾನು ಇದ್ದೇನೆ

ದಾವಣಗೆರೆ, ಫೆ.9– ಬಿಜೆಪಿಯ ರಾಜ್ಯ ಘಟಕದ ಅಧ್ಯಕ್ಷ ಹಾಗೂ ಮುಂದಿನ ಮುಖ್ಯಮಂತ್ರಿಯಾಗುವ ರೇಸ್‌ನಲ್ಲಿ ನಾನು ಇದ್ದೇನೆ. ನಾನು ಪಕ್ಷ ವಿರೋಧಿ ಚಟುವಟಿಕೆಯನ್ನು ಮಾಡಿಲ್ಲ ಎಂದು ಬಸನಗೌಡ ಪಾಟೀಲ್ ಯತ್ನಾಳ್ ಹೇಳಿದರು. ದಾವಣಗೆರೆಯಲ್ಲಿ ಭಾನುವಾರ ಮಾತನಾಡಿದ ಅವರು, ಭ್ರಷ್ಟ ಕುಟುಂಬದ ವಿರುದ್ಧ ಹೋರಾಟ ನಡೆಯಲಿದೆ. ಶ್ರೀರಾಮುಲು ಮಾತಿಗೆ ನನ್ನ ಬೆಂಬಲ ಇದೆ. ಕುಟುಂಬ ರಾಜಕಾರಣ ಹಾಗೂ ಭ್ರಷ್ಟಾಚಾರದ ವಿರುದ್ಧ ಹೋರಾಟ ಮುಂದುವರಿಯಲಿದೆ. ರಾಜ್ಯವನ್ನು ಭ್ರಷ್ಟಾಚಾರ ಮುಕ್ತ ಮಾಡುವ ಅಗತ್ಯವಿದೆ. ಇದಕ್ಕೆ ನಮ್ಮ ಪ್ರಯತ್ನ ಮಾಡುತ್ತಿದ್ದೇವೆ ಎಂದು ಹೇಳಿದರು. ರೈಲ್ವೆ ಖಾತೆ ರಾಜ್ಯ ಸಚಿವ ವಿ ಸೋಮಣ್ಣ ಅವರ ಗೃಹ ಪ್ರವೇಶವಿದೆ. ಅದಕ್ಕೆ ದೆಹಲಿಗೆ ಹೋಗುತ್ತಿದ್ದೇವೆ. ಪಕ್ಷದ ವರಿಷ್ಠರನ್ನು ಭೇಟಿ ಮಾಡಲಿದ್ದೇವೆ. ಕರ್ನಾಟಕವನ್ನು ಭ್ರಷ್ಟಾಚಾರದಿಂದ ಮುಕ್ತಗೊಳಿಸುವ ಪ್ರಯತ್ನ ಮಾಡುತ್ತಿದ್ದೇವೆ. ಅಲ್ಲದೆ ಕುಟುಂಬ ರಾಜಕಾರಣ ಹಾಗೂ ಭ್ರಷ್ಟಾಚಾರದ ವಿರುದ್ಧ ನಮ್ಮ ಹೋರಾಟ ಮುಂದುವರಿಯಲಿದೆ. ಇದೇ ವಿಚಾರವಾಗಿ ನಮ್ಮ ಪ್ರಯತ್ನ ನಡೆಯುತ್ತಿದೆ. ಪಕ್ಷದಲ್ಲಿ ಮೂಡಿರುವ ಒಡಕನ್ನು ಸರಿಮಾಡಬೇಕಿದೆ. ಇನ್ನು ಶ್ರೀರಾಮುಲು ಅವರ ಯಾತ್ರೆ ನಿರ್ಧಾರ ಸ್ವಾಗತಾರ್ಹ ಎಂದು ಹೇಳಿದ್ದಾರೆ.


ಯತ್ನಾಳ್

ಇತ್ತೀಚಿನ ದೆಹಲಿ ಭೇಟಿ ಬಗ್ಗೆ ಪ್ರತಿಕ್ರಿಯಿಸಿದ್ದ ಯತ್ನಾಳ್, ನಮಗೆ ಏನೂ ಅವಮಾನ ಆಗಿಲ್ಲ. ನಾವು ಇನ್ನೂ ಗಟ್ಟಿಯಾಗಿದ್ದೇವೆ. ನಾವು ವಿಜಯದ ಸಂಕೇತ ಇಟ್ಟುಕೊಂಡು ಬಂದಿದ್ದು, ವರಿಷ್ಠರು ಏನು ಹೇಳಬೇಕೋ ಹೇಳಿದ್ದಾರೆ. ಕೇಂದ್ರ ಬಿಜೆಪಿ ನಾಯಕರು ನಮ್ಮ ಸಮಸ್ಯೆಗೆ ಸ್ಪಂದಿಸಿದ್ದಾರೆ. ನಾವು ಅಲ್ಲಿ ಯಾರನ್ನು ಭೇಟಿಯಾದೆವು ಎಂಬುದನ್ನು ಗುಟ್ಟಾಗಿ ಇಡುವಂತೆ ಹೇಳಿದ್ದಾರೆ ಎಂದು ಯತ್ನಾಳ್ ತಿಳಿಸಿದ್ದಾರೆ.

ದೆಹಲಿ ಸಿಎಂ ಸ್ಥಾನಕ್ಕೆ ಅತಿಶಿ ರಾಜೀನಾಮೆ


ನವದೆಹಲಿ, ಫೆ.9– ವಿಧಾನಸಭೆ ಚುನಾವಣೆಯಲ್ಲಿ ಆಮ್ ಆದ್ಮಿ ಪಕ್ಷ (ಎಎಪಿ) ಹೀನಾಯ ಸೋಲನುಭವಿಸಿದ ಒಂದು ದಿನದ ನಂತರ ದೆಹಲಿ ಮುಖ್ಯಮಂತ್ರಿ ಅತಿಶಿ ಭಾನುವಾರ ಲೆಫ್ಟಿನೆಂಟ್ ಗವರ್ನರ್ ವಿಕೆ ಸಕ್ಸೇನಾ ಅವರಿಗೆ ರಾಜೀನಾಮೆ ನೀಡಿದ್ದಾರೆ.


ಅತಿಶಿ

ಕಲ್ಕಾಜಿ ಸ್ಥಾನದಲ್ಲಿ ಗೆಲುವು ಸಾಧಿಸಿರುವ ಅತಿಶಿ ಅವರು, ರಾಜ್ ನಿವಾಸದಲ್ಲಿ ಸಕ್ಸೇನಾ ಅವರಿಗೆ ರಾಜೀನಾಮೆ ಪತ್ರವನ್ನು ನೀಡಿದರು ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಬರೋಬ್ಬರಿ 27 ವರ್ಷಗಳ ನಂತರ ದೆಹಲಿಯಲ್ಲಿ ಬಿಜೆಪಿ ಅಧಿಕಾರಕ್ಕೆ ಮರಳಿದೆ. 70 ವಿಧಾನಸಭಾ ■6ನೇ ಪುಟಕ್ಕೆ

ಮಣಿಪುರ ಸಿಎಂ ಬಿರೇನ್ ಸಿಂಗ್ ರಾಜೀನಾಮೆ

ಇಂಫಾಲ್, ಫೆ.9– ಮಣಿಪುರ ಮುಖ್ಯಮಂತ್ರಿ ಬಿರೇನ್ ಸಿಂಗ್ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ. ಮಣಿಪುರ ರಾಜ್ಯಪಾಲ ಅಜಯ್ ಕುಮಾರ್ ಬಲ್ಲಾ ಭೇಟಿಯಾದ ಬಿರೇನ್ ಸಿಂಗ್ ರಾಜೀನಾಮೆ ಪತ್ರವನ್ನು ನೀಡಿದ್ದಾರೆ. ತಮ್ಮ ರಾಜೀನಾಮೆ ಪತ್ರದಲ್ಲಿ ಮಣಿಪುರ ಮುಖ್ಯಮಂತ್ರಿಯಾಗಿ ಸೇವೆ ಸಲ್ಲಿಸಲು ಅವಕಾಶ ಸಿಕ್ಕಿರುವುದಕ್ಕೆ ಧನ್ಯವಾದ ಹೇಳಿದ್ದಾರೆ. ಇದೇ ವೇಳೆ ಕೆಲ ಪ್ರಮುಖ ವಿಷಯಗಳನ್ನು ರಾಜೀನಾಮೆ ಪತ್ರದಲ್ಲಿ ಉಲ್ಲೇಖಿಸಿದ್ದಾರೆ. ಕೇಂದ್ರ ಸರ್ಕಾರ ಹಲವು ಯೋಜನೆಗಳನ್ನು ಮಣಿಪುರದಲ್ಲಿ ■6ನೇ ಪುಟಕ್ಕೆ


ಬಿರೇನ್ ಸಿಂಗ್

ತಿ.ನರಸೀಪುರದಲ್ಲಿ ಇಂದಿನಿಂದ ಕುಂಭಮೇಳ

■ಜಿಲ್ಲಾಧಿಕಾರಿಗಳಿಂದ ಸಿದ್ಧತೆ ಪರಿಶೀಲನೆ ■ಶಾಲಾ–ಕಾಲೇಜಿಗೆ ರಜೆ, ಉಚಿತ ಬಸ್ ವ್ಯವಸ್ಥೆ


ತ್ರಿವೇಣಿ ಸಂಗಮಕ್ಕೆ ಭಾನುವಾರ ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತರೆಡ್ಡಿ ಭೇಟಿ ನೀಡಿ, ಕುಂಭಮೇಳದ ಸಿದ್ಧತಾ ಕಾರ್ಯ ಪರಿಶೀಲಿಸಿದರು.

ತಿ.ನರಸೀಪುರ, ಫೆ.9– ನಾಳೆಯಿಂದ (ಫೆ.10) ಮೂರು ದಿನಗಳ ಕಾಲ ತ್ರಿವೇಣಿ ಸಂಗಮದಲ್ಲಿ ನಡೆಯುವ 13ನೇ ಕುಂಭಮೇಳಕ್ಕೆ ಜಿಲ್ಲಾಡಳಿತ ಸಕಲ ಸಿದ್ಧತೆ ಮಾಡಿಕೊಂಡಿದೆ ಎಂದು ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತರೆಡ್ಡಿ ತಿಳಿಸಿದರು.

ತ್ರಿವೇಣಿ ಸಂಗಮಕ್ಕೆ ಭಾನುವಾರ ಭೇಟಿ ನೀಡಿ ಸಿದ್ಧತಾ ಕಾರ್ಯ ಪರಿಶೀಲಿಸಿ ಮಾತನಾಡಿದ ಅವರು, ಕಳೆದ 3 ವರ್ಷದ ಹಿಂದೆ ಕೋವಿಡ್ ಇದ್ದ ಕಾರಣ ಕುಂಭಮೇಳ ನಡೆದಿರಲಿಲ್ಲ. ಹಾಗಾಗಿ ನಾಳೆಯಿಂದ ನಡೆಯುವ 13ನೇ ಕುಂಭಮೇಳಕ್ಕೆ ಹೆಚ್ಚಿನ ಭಕ್ತರು ಆಗಮಿಸುವ ನಿರೀಕ್ಷೆ ಹೊಂದಿದ್ದು, ಜಿಲ್ಲಾಡಳಿತ ಸಕಲ ಸಿದ್ಧತೆ ಮಾಡಿಕೊಂಡಿದೆ. ಹಾಗಾಗಿ ಕುಂಭಮೇಳಕ್ಕೆ ಬರುವ ಭಕ್ತರು ಯಾವುದೇ ಆತಂಕಕ್ಕೆ ಒಳಗಾಗದೇ ಮೇಳದಲ್ಲಿ ಭಾಗವಹಿಸಬಹುದಾಗಿದೆ ಎಂದರು. ಭಕ್ತರ ಅನುಕೂಲಕ್ಕಾಗಿ ಕುಂಭಮೇಳ ನಡೆಯುವ ತಿರುಮಕೂಡಲು ಕ್ಷೇತ್ರದಲ್ಲಿ ಪಾರ್ಕಿಂಗ್ ವ್ಯವಸ್ಥೆ, ಕ್ಯೂ ಸಿಸ್ಟಮ್, ಶೌಚಾಲಯ, ಕುಡಿಯುವ ನೀರು, ಬಟ್ಟೆ ಬದಲಿಸುವ ಕೊಠಡಿ, ಸ್ಯಾನಿಟೈಜೇಷನ್ ಆಸ್ಪತ್ರೆ ಸೇರಿದಂತೆ ಮೂಲಸೌಕರ್ಯಗಳನ್ನು ಕಲ್ಪಿಸಲಾಗಿದೆ. ಸರ್ಕಾರದ ವತಿಯಿಂದ ಊಟದ ವ್ಯವಸ್ಥೆ ಮಾಡಿಲ್ಲವಾದರೂ ವಿವಿಧ ಮಠಗಳು, ವಿವಿಧ ಸಂಘಟನೆಯವರು ಪ್ರಸಾದದ ವ್ಯವಸ್ಥೆ ಮಾಡಿದ್ದಾರೆ ಎಂದು ತಿಳಿಸಿದರು. ನಾಗ ಸಾಧುಗಳು, ಅಘೋರಿಗಳು ಬರುವ ಬಗ್ಗೆ ನಮಗೆ ಯಾವುದೇ ಮಾಹಿತಿ ಇಲ್ಲ. ಒಂದು ವೇಳೆ ಬಂದರೆ ಅವರಿಗೆ ಅಗತ್ಯ ವ್ಯವಸ್ಥೆ ಮಾಡಲಾಗುವುದು. ವಿವಿಧ ಜಿಲ್ಲೆಗಳಿಂದ ಅಪಾರ ಭಕ್ತರು ಮೇಳಕ್ಕೆ ಬರುವುದರಿಂದ ವಾಹನಗಳ ಪಾರ್ಕಿಂಗ್‌ಗೆ ಸೂಕ್ತವಾದ ವಿಶಾಲವಾದ ಜಾಗ ಗುರುತಿಸಿ ನಿಲುಗಡೆಗೆ ವ್ಯವಸ್ಥೆ ಮಾಡಲಾಗಿದೆ ಎಂದು ಮಾಹಿತಿ ನೀಡಿದರು.

ಉಚಿತ ಬಸ್ ವ್ಯವಸ್ಥೆ, ಶಾಲಾ–ಕಾಲೇಜಿಗೆ ರಜೆ: ಕುಂಭಮೇಳಕ್ಕೆ ಬರುವ ಭಕ್ತರಿಗೆ ಕೆಎಸ್ಆರ್‌ಟಿಸಿಯು ■6ನೇ ಪುಟಕ್ಕೆ

ಸರ್ಕಾರಿ ಕಾಲೇಜುಗಳಲ್ಲಿ ಉಪನ್ಯಾಸಕರ ವೃತ್ತಿಗೆ 50 ಲಕ್ಷ ಲಂಚ ನೀಡಬೇಕು

- ಉಪನ್ಯಾಸಕರ ಪರಿಸ್ಥಿತಿ ಶೋಚನೀಯ
- 94 ಲಕ್ಷ ವಿಮೆಗೆ ಸರ್ಕಾರ 3 ಲಕ್ಷ ನೀಡಿದೆ
- ಗ್ಯಾರಂಟಿ ಯೋಜನೆ ಆರ್ಥಿಕ ಅಶಿಸ್ತಿಗೆ ಕಾರಣ

ವಿಧಾನಪರಿಷತ್ ಸದಸ್ಯ ಕೆ.ವಿವೇಕಾನಂದ ಗಂಭೀರ ಆರೋಪ

ಮೈಸೂರು, ಫೆ.9(ಬಿಎಲ್‌ಯು)– ಸರ್ಕಾರಿ ಕಾಲೇಜುಗಳಲ್ಲಿ ಉಪನ್ಯಾಸಕ ವೃತ್ತಿ ಗಿಟ್ಟಿಸಲು 40 ರಿಂದ 50 ಲಕ್ಷ ರೂಪಾಯಿ ಲಂಚ ನೀಡಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ದಕ್ಷಿಣ ಶಿಕ್ಷಕರ ಕ್ಷೇತ್ರದಿಂದ ವಿಧಾನಪರಿಷತ್‌ಗೆ ಆಯ್ಕೆಯಾಗಿರುವ ಕೆ. ವಿವೇಕಾನಂದ ಗಂಭೀರ ಆರೋಪ ಮಾಡಿದ್ದಾರೆ. ಮೈಸೂರಿನ ಬನುಮಯ್ಯ ಕಾಲೇಜಿನಲ್ಲಿ ಇಂದು ಕರ್ನಾಟಕ ರಾಜ್ಯ ಅನುದಾನಿತ ಪದವಿ ಪೂರ್ವ ಕಾಲೇಜುಗಳ ನೌಕರರ ಸಂಘ ಆಯೋಜಿಸಿದ್ದ ವಿಭಾಗೀಯ ಸಮಾವೇಶ ಉದ್ಘಾಟಿಸಿ ಮಾತನಾಡಿದ ಅವರು, ಹಣವಿಲ್ಲದೆ ಉಪನ್ಯಾಸಕ ವೃತ್ತಿಗೆ ನೇಮಕಾತಿ ಸಾಧ್ಯವಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಇತ್ತೀಚಿನ ದಿನದಲ್ಲಿ ಅನುದಾನಿತ ಶಾಲಾ ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ದಾಖಲಾತಿ ಕಡಿಮೆಯಾಗಿದೆ. ಇದು ಸಹಜವಾಗಿಯೇ ಅನುದಾನಿತ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುವ ಉಪನ್ಯಾಸಕರಿಗೆ ತೊಂದರೆ ಆಗುತ್ತಿದೆ. ಕಡಿಮೆ ದಾಖಲಾತಿ ಇರುವ ಕಾಲೇಜುಗಳ ಉಪನ್ಯಾಸಕರನ್ನು ಬೇರೆಡೆ ವರ್ಗಾವಣೆ ಮಾಡುವುದಲ್ಲದೆ ನಿಗದಿತ ಸಮಯಕ್ಕೆ ವೇತನ ಕೂಡ ನೀಡದ ಪರಿಸ್ಥಿತಿ ಇದೆ ಎಂದು ವಿವೇಕಾನಂದ ಹೇಳಿದರು. ಈ ಮೂಲಕ ಅನುದಾನಿತ ಶಾಲಾ ಕಾಲೇಜುಗಳ ■6ನೇ ಪುಟಕ್ಕೆ



ಮೈಸೂರಿನ ಬನುಮಯ್ಯ ಕಾಲೇಜಿನಲ್ಲಿ ಭಾನುವಾರ ಕರ್ನಾಟಕ ರಾಜ್ಯ ಅನುದಾನಿತ ಪದವಿ ಪೂರ್ವ ಕಾಲೇಜುಗಳ ನೌಕರರ ಸಂಘ ಆಯೋಜಿಸಿದ್ದ ವಿಭಾಗೀಯ ಸಮಾವೇಶವನ್ನು ವಿಧಾನ ಪರಿಷತ್ ಸದಸ್ಯ ಕೆ.ವಿವೇಕಾನಂದ ಉದ್ಘಾಟಿಸಿದರು.

ಸರ್ಕಾರ ನಿರ್ಲಕ್ಷಿಸಿದರೆ ಉಪನ್ಯಾಸಕರ ಸರಣಿ ಸಾವಾಗುತ್ತದೆ

ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಉಪನ್ಯಾಸಕರ ಸಮಸ್ಯೆ ಶೀಘ್ರವೇ ಈಡೇರಿಸದಿದ್ದರೆ ಉಪನ್ಯಾಸಕರ ಸರಣಿ ಸಾವುಗಳಾಗುತ್ತದೆ ಎಂದು ಕರ್ನಾಟಕ ರಾಜ್ಯ ಅನುದಾನಿತ ಪದವಿ ಪೂರ್ವ ಕಾಲೇಜುಗಳ ನೌಕರರ ಸಂಘದ ಅಧ್ಯಕ್ಷ ಡಾ.ಎನ್.ಹರೀಶ್ ಎಚ್ಚರಿಸಿದರು. ರಾಜ್ಯ ಸರ್ಕಾರ ಜಾರಿಗೊಳಿಸಿದ 2024ರ ಅನುದಾನಿತ ಶಿಕ್ಷಣ ಮಸೂದೆ ಉಪನ್ಯಾಸಕರ ಪಾಲಿಗೆ ಮರಣ ಶಾಸನವಾಗಿದೆ. ಅನುದಾನಿತ ಕಾಲೇಜುಗಳಲ್ಲಿ ವಿದ್ಯಾರ್ಥಿಗಳು ಇಲ್ಲದಿದ್ದರೆ ಅಂತಹ ಕಾಲೇಜಿನ ಉಪನ್ಯಾಸಕರನ್ನು ಬೇರೆಡೆ ವರ್ಗಾವಣೆ ಮಾಡಲಾಗುತ್ತದೆ. ತರುವಾಯ ಏಳೆಂಟು ತಿಂಗಳು ಕಳೆದರೂ ವೇತನ ನೀಡುವುದಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಈ ಹಿನ್ನೆಲೆ ಕರ್ನಾಟಕದಲ್ಲಿರುವ 821 ಕಾಲೇಜಿನ ಅಧ್ಯಾಪಕರು ಸಂಘಟನಾ ಶಕ್ತಿಯಿಂದ ಹೋರಾಟ ಮಾಡಬೇಕು. ಇದರಿಂದ ಮಾತ್ರ ಸರ್ಕಾರ ನಮ್ಮ ಬೇಡಿಕೆ ಈಡೇರಿಸುತ್ತದೆ. ಇಲ್ಲವೆಂದರೆ ಉಪನ್ಯಾಸಕರ ಬೇಡಿಕೆಯನ್ನು ಸರ್ಕಾರ ಹಗುರವಾಗಿ ಪರಿಗಣಿಸುತ್ತದೆ. ಇದರಿಂದ ಉಪನ್ಯಾಸಕರು ಹಲವು ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು. ಅನುದಾನಿತ ಪದವಿ ಪೂರ್ವ ಕಾಲೇಜಿನ ಉಪನ್ಯಾಸಕರ 40 ಬೇಡಿಕೆಗಳಿದ್ದು, ಅವುಗಳನ್ನು ಸರ್ಕಾರ ಪರಿಹಾರ ಮಾಡಬೇಕು. ಇದರಲ್ಲಿ ಪ್ರಮುಖ ಬೇಡಿಕೆಗಳನ್ನು ಸರ್ಕಾರ ಈಡೇರಿಸದಿದ್ದರೆ ಉಪನ್ಯಾಸಕರು ಸರಣಿ ಸಾವಿಗೀಡಾಗಬೇಕಾದ ಪರಿಸ್ಥಿತಿ ನಿರ್ಮಾಣವಾಗುತ್ತದೆ ಎಂದು ಹರೀಶ್ ಹೇಳಿದರು.

ಕಟಕ್‌ನಲ್ಲಿ ರೋಹಿತ್ ಶರ್ಮಾ ಅಬ್ಬರದ ಶತಕ

ಇಂಗ್ಲೆಂಡ್ ವಿರುದ್ಧ ಏಕದಿನ ಸರಣಿ ಗೆದ್ದ ಭಾರತ



ಕಟಕ್, ಫೆ.9– ನಾಯಕ ರೋಹಿತ್ ಶರ್ಮಾ ಅವರ ಅಬ್ಬರದ ಶತಕ ಹಾಗೂ ಆಲ್‌ರೌಂಡರ್ ಜಡೇಜಾ ಅವರ ಸ್ಪಿನ್ ಮೋಡಿ ನೆರವಿನಿಂದ ಭಾರತ ಇಂಗ್ಲೆಂಡ್ ವಿರುದ್ಧ 4 ವಿಕೆಟ್‌ಗಳ ಭರ್ಜರಿ ಜಯ ಸಾಧಿಸಿದೆ. ಆ ಮೂಲಕ 3 ಪಂದ್ಯಗಳ ಏಕದಿನ ಸರಣಿಯಲ್ಲಿ 2–0 ಅಂತರದ ಮುನ್ನಡೆ ಸಾಧಿಸಿದ್ದು, ಇನ್ನೂ ಒಂದು ಪಂದ್ಯ ಬಾಕಿ ಇರುವಂತೆಯೇ ಸರಣಿಯನ್ನು ತನ್ನದಾಗಿಸಿಕೊಂಡಿದೆ.

ಇಲ್ಲಿನ ಬಾರಾಬತಿ ಕ್ರೀಡಾಂಗಣದಲ್ಲಿ ನಡೆದ ಸರಣಿಯ 2ನೇ ಪಂದ್ಯದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಇಂಗ್ಲೆಂಡ್ 49.5 ಓವರ್‌ಗಳಲ್ಲಿ 304 ರನ್‌ಗಳಿಗೆ ಆಲೌಟಾಯಿತು. ಈ ಗುರಿ ಬೆನ್ನತ್ತಿದ ಭಾರತ ಇನ್ನೂ 33 ಎಸೆತ ಬಾಕಿ ಇರುವಂತೆಯೇ 44.3 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 308 ರನ್ ಗಳಿಸಿ ಗೆಲುವಿನ ನಗೆ ಬೀರಿತು. ಭಾರತದ ಪರ ಇನ್ನಿಂಗ್ಸ್ ಆರಂಭಿಸಿದ ನಾಯಕ ರೋಹಿತ್ ಶರ್ಮಾ, ಶುಭಮನ್ ಗಿಲ್ ಆರಂಭದಿಂದಲೇ ಆಂಗ್ಲರನ್ನು ಬೆಂಡೆತ್ತಿದರು. ಅಲ್ಲದೇ ಮೊದಲ ವಿಕೆಟ್‌ಗೆ 136 ರನ್‌ಗಳ ಜೊತೆಯಾಟವಾಡುವ ಮೂಲಕ ತಂಡಕ್ಕೆ ಉತ್ತಮ ಅಡಿಪಾಯ ■6ನೇ ಪುಟಕ್ಕೆ

ಸಚಿನ್, ದ್ರಾವಿಡ್, ಗೇಲ್ ದಾಖಲೆ ಉಡೀಸ್

ಕಟಕ್: ಇಂಗ್ಲೆಂಡ್ ವಿರುದ್ಧದ 2ನೇ ಏಕದಿನ ಪಂದ್ಯದಲ್ಲಿ 76 ಎಸೆತಗಳಲ್ಲೇ ಭರ್ಜರಿ ಶತಕ ಸಿಡಿಸಿದ ನಾಯಕ ರೋಹಿತ್ ಶರ್ಮಾ ಹಲವು ದಾಖಲೆಗಳನ್ನು ಮುರಿದಿದ್ದಾರೆ.

ಕ್ರಿಸ್ ಗೇಲ್ ದಾಖಲೆ ಬ್ರೇಕ್: ಪಂದ್ಯದಲ್ಲಿ 7 ಸಿಕ್ಸರ್ ಸಿಡಿಸಿದ ರೋಹಿತ್ ಶರ್ಮಾ ಏಕದಿನದಲ್ಲಿ ಅತೀ ಹೆಚ್ಚು ಸಿಕ್ಸರ್ ಸಿಡಿಸಿದ 2ನೇ ಬ್ಯಾಟ್ಸ್‌ಮನ್ ಆಗಿ ಹೊರ ಹೊಮ್ಮಿದ್ದಾರೆ. ಸದ್ಯ ರೋಹಿತ್ ಶರ್ಮಾ 337 ಸಿಕ್ಸರ್ ಸಿಡಿಸಿದ್ದು, ಗೇಲ್ 331 ಸಿಕ್ಸರ್ ಬಾರಿಸಿದ್ದರು. ಆದರೆ ಈ ಪಟ್ಟಿಯಲ್ಲಿ ಪಾಕಿಸ್ತಾನದ ಶಾಹೀದ್ ಆಫ್ರಿದಿ 351 ಸಿಕ್ಸರ್‌ಗಳೊಂದಿಗೆ ಮೊದಲ ಸ್ಥಾನದಲ್ಲಿದ್ದಾರೆ.

ಸಚಿನ್ ದಾಖಲೆ ಉಡೀಸ್: ಪಂದ್ಯದಲ್ಲಿ ರೋಹಿತ್ ಶರ್ಮಾ ಸಚಿನ್ ತೆಂಡೂಲ್ಕರ್ ದಾಖಲೆ ಮುರಿದಿದ್ದಾರೆ. ಆರಂಭಿಕ ಬ್ಯಾಟ್ಸ್‌ಮನ್ ಆಗಿ ಎಲ್ಲಾ ಸ್ವರೂಪದ ಕ್ರಿಕೆಟ್‌ನಲ್ಲಿ ಅತೀ ಹೆಚ್ಚು ರನ್ ಗಳಿಸಿದ ಎರಡನೇ ಬ್ಯಾಟರ್ ಆಗಿ ದಾಖಲೆ ಬರೆದಿದ್ದಾರೆ. ರೋಹಿತ್ 343 ಪಂದ್ಯಗಳನ್ನು ಆಡಿ 45.22 ಸರಾಸರಿಯಲ್ಲಿ 15,402 ರನ್ ಗಳಿಸಿ, ಸಚಿನ್ ಅವರ ದಾಖಲೆ ಮುರಿದಿದ್ದಾರೆ. ತೆಂಡೂಲ್ಕರ್ 346 ಪಂದ್ಯಗಳಲ್ಲಿ 48.07 ಸರಾಸರಿಯಲ್ಲಿ 15,335 ರನ್ ಗಳಿಸಿದ್ದರು.

ದ್ರಾವಿಡ್ ಹಿಂದಿಕ್ಕಿದ ಹಿಟ್‌ಮ್ಯಾನ್: ರೋಹಿತ್ ಏಕದಿನ ಪಂದ್ಯಗಳಲ್ಲಿ ಅತಿ ಹೆಚ್ಚು ರನ್ ಗಳಿಸಿದವರ ಪಟ್ಟಿಯಲ್ಲಿ ಭಾರತದ ದಿಗ್ಗಜ ಬ್ಯಾಟ್ಸ್‌ಮನ್ ರಾಹುಲ್ ದ್ರಾವಿಡ್ ಅವರನ್ನು ಹಿಂದಿಕ್ಕಿದರು. ಇದೀಗ ಏಕದಿನ ಪಂದ್ಯಗಳಲ್ಲಿ ಭಾರತದ ಪರ ನಾಲ್ಕನೇ ಅತಿ ಹೆಚ್ಚು ರನ್ ಗಳಿಸಿದ ಬ್ಯಾಟರ್ ಎನಿಸಿಕೊಂಡರು. ಸದ್ಯ ಸಚಿನ್ ತೆಂಡೂಲ್ಕರ್, ವಿರಾಟ್ ಕೊಹ್ಲಿ ಮತ್ತು ಸೌರವ್ ಗಂಗೂಲಿ ಕ್ರಮವಾಗಿ 3 ಸ್ಥಾನಗಳಲ್ಲಿದ್ದು ಅವರ ನಂತರ ಹಿಟ್‌ಮ್ಯಾನ್ ಕಾಣಿಸಿಕೊಂಡಿದ್ದಾರೆ. ಎರಡನೇ ಪಂದ್ಯಕ್ಕೂ ಮುನ್ನ ರೋಹಿತ್ ಏಕದಿನ ಪಂದ್ಯಗಳಲ್ಲಿ 10,868 ರನ್ ಗಳಿಸಿದ್ದರು. ಪಂದ್ಯದಲ್ಲಿ 22 ರನ್ ಕಲೆ ಹಾಕುತ್ತಿದ್ದಂತೆ ದ್ರಾವಿಡ್ ಅವರನ್ನು ಹಿಂದಿಕ್ಕಿದರು.

ಹೆಚ್ಚು ರನ್ ಗಳಿಸಿದವರು

18426– ಸಚಿನ್ ತೆಂಡೂಲ್ಕರ್
13906 – ವಿರಾಟ್ ಕೊಹ್ಲಿ
11363 – ಸೌರವ್ ಗಂಗೂಲಿ
10,987 – ರೋಹಿತ್ ಶರ್ಮಾ
10889 – ರಾಹುಲ್ ದ್ರಾವಿಡ್

ಹಳೆ ಜಿಲ್ಲಾಧಿಕಾರಿ ಕಚೇರಿ ಕಟ್ಟಡ 'ಯೋಗ ಮ್ಯೂಸಿಯಂ' ಪ್ರಸ್ತಾಪ

ಮೈಸೂರು ಯೋಗ ಅಸೋಸಿಯೇಷನ್‌ನಿಂದ ಸಂಸದ ಯದುವೀರ್‌ಗೆ ಅಭಿನಂದನೆ



ಮೈಸೂರು ಯೋಗ ಅಸೋಸಿಯೇಷನ್ ವತಿಯಿಂದ ಸಂಸದ ಯದುವೀರ್ ಒಡೆಯರ್ ಅವರನ್ನು ಆತ್ಮೀಯವಾಗಿ ಅಭಿನಂದಿಸಲಾಯಿತು.

ಮೈಸೂರು, ಫೆ.9(ಎಸ್‌ಬಿಡಿ)– ಈ ಹಿಂದೆ ಜಿಲ್ಲಾಧಿಕಾರಿಗಳ ಕಚೇರಿಯಿದ್ದ ಪಾರಂಪರಿಕ ಕಟ್ಟಡವನ್ನು 'ಯೋಗ ಮ್ಯೂಸಿಯಂ' ಆಗಿ ಪರಿವರ್ತಿಸಬೇಕೆಂದು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುವ ಸಂಸದ ಯದುವೀರ್ ಅವರನ್ನು ಮೈಸೂರು ಯೋಗ ಅಸೋಸಿಯೇಷನ್ ವತಿಯಿಂದ ಅಭಿನಂದಿಸಲಾಯಿತು.

ಈ ವೇಳೆ ಯೋಗ ಅಸೋಸಿಯೇಷನ್ ಅವರ ಬೇಡಿಕೆಗಳಿಗೆ ಪ್ರತಿಕ್ರಿಯಿಸಿದ ಅವರು, ಪ್ರಾಚೀನ ಕಲೆಯಾದ ಯೋಗಕ್ಕೆ ನಮ್ಮ ಮೈಸೂರು ಮಹಾರಾಜರು ಹೆಚ್ಚು ಆದ್ಯತೆ ನೀಡಿದ್ದಾರೆ. ಪರಿಣಾಮ ಮೈಸೂರು ಯೋಗದ ರಾಜಧಾನಿ ಎಂಬಂತಾಗಿದೆ. ಈ ನಿಟ್ಟಿನಲ್ಲಿ ಮೈಸೂರಿನ ಹಳೆಯ ಜಿಲ್ಲಾಧಿಕಾರಿಗಳ ಕಚೇರಿಯನ್ನು 'ಯೋಗ ಮ್ಯೂಸಿಯಂ' ಆಗಿ ಪರಿವರ್ತಿಸಬೇಕು ಎಂದು ಪ್ರಸ್ತಾವನೆ ಸಲ್ಲಿಸಲಾಗಿದೆ. ಹಾಗೆಯೇ ಯೋಗ ಸಂಬಂಧಿತ ಕಾರ್ಯಕ್ರಮಗಳಿಗೆ ಸಹಕಾರ ನೀಡಲಾಗುವುದು ಎಂದು ಭರವಸೆ ನೀಡಿದರು.

ಮೈಸೂರಿನಲ್ಲಿ ಯೋಗ ವಿಶ್ವವಿದ್ಯಾನಿಲಯ ಸ್ಥಾಪನೆ, ಹಿರಿಯ ಯೋಗಾಚಾರ್ಯರಾದ ಕೃಷ್ಣಮಾಚಾರ್ಯರು ಹಾಗೂ ಪಟ್ಟಾಭಿ ಜೋಯಿಸರ ಪುತ್ಥಳಿ ನಿರ್ಮಾಣ. ಇಲ್ಲವೇ ರಸ್ತೆ ಅಥವಾ ವೃತ್ತಕ್ಕೆ ಅವರ ಹೆಸರು ನಾಮಕರಣ, ಶಾಲೆಗಳಲ್ಲಿ ಕಡ್ಡಾಯವಾಗಿ ಯೋಗ ಶಿಕ್ಷಣ, ಆರ್ಥಿಕವಾಗಿ ಹಿಂದುಳಿದ ಯೋಗ ಶಿಕ್ಷಕರಿಗೆ ಮಾಸಾಶನ, ಯೋಗ ಕ್ಷೇತ್ರದಲ್ಲಿ ಅದ್ವಿತೀಯ ಸಾಧನೆ ಮಾಡಿದ ನಿವೇಶನರಹಿತ ಯೋಗ ಶಿಕ್ಷಕರಿಗೆ ನಿವೇಶನ, ಮೈಸೂರು ಯೋಗ ಪರಂಪರೆಯ ಕೃತಿ ಪ್ರಕಟಣೆ ಸೇರಿದಂತೆ ನಿಮ್ಮೆಲ್ಲಾ ಮನವಿಗಳು ಸೂಕ್ತವಾಗಿದ್ದು, ಇವುಗಳ ಸಾಕಾರಗೊಳಿಸುವ ನಿಟ್ಟಿನಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ. ಹಾಗೆಯೇ ಮೈಸೂರು ಯೋಗ ರಾಜಧಾನಿಯಾಗಿ ಜಾಗತಿಕ ಮಟ್ಟದಲ್ಲಿ ಮತ್ತಷ್ಟು ಪ್ರಸಿದ್ಧಿಗೊಳಿಸುವ ನಿಟ್ಟಿನಲ್ಲಿ ತಜ್ಞರೊಂದಿಗೆ ಚರ್ಚಿಸಿ, ಕಾರ್ಯಕ್ರಮಗಳನ್ನು ರೂಪಿಸಲಾಗುವುದು ಎಂದು ತಿಳಿಸಿದರು.

ಅನೇಕ ಸಾಹಿತಿಗಳು ಪ್ರಬಂಧ ಸಾಹಿತ್ಯವನ್ನು ಗಟ್ಟಿಗೊಳಿಸಿದ್ದಾರೆ

ಬಿ.ಕೆ.ಮೀನಾಕ್ಷಿ ಅವರ ಮೂರು ಕೃತಿಗಳ ಲೋಕಾರ್ಪಣೆ ಸಮಾರಂಭದಲ್ಲಿ ಸಾಹಿತಿ ಪ್ರೊ.ಸಿ.ನಾಗಣ್ಣ ಅಭಿಮತ



ಮೈಸೂರಿನ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಂಸ್ಥೆಯ ಸಭಾಂಗಣದಲ್ಲಿ ಭಾನುವಾರ ನಡೆದ ಕಾರ್ಯಕ್ರಮದಲ್ಲಿ ಬಿ.ಕೆ.ಮೀನಾಕ್ಷಿ ಅವರ ಮೂರು ಕೃತಿಗಳನ್ನು ಸಂಸ್ಕೃತ ವಿದ್ವಾಂಸ ಡಾ.ಹೆಚ್.ವಿ.ನಾಗರಾಜರಾವ್ ಬಿಡುಗಡೆ ಮಾಡಿದರು.

ಮೈಸೂರು,ಫೆ.9(ಎಂಟಿವೈ)– ರಾಜ್ಯದಲ್ಲಿ ಕನ್ನಡ ಸಾಹಿತ್ಯದ ಹಲವು ಪ್ರಕಾರಗಳಿಗೆ ಶಕ್ತಿ ತುಂಬಿದ ಅನೇಕ ಸಾಹಿತಿಗಳು ಪ್ರಬಂಧ ಸಾಹಿತ್ಯವನ್ನು ಗಟ್ಟಿಯಾಗಿ ಬೆಳೆಸುವ ಮೂಲಕ ಸಾಹಿತ್ಯ ಲೋಕವನ್ನು ಮತ್ತಷ್ಟು ಆಳವಾಗಿ ಬೇರೂರುವಂತೆ ಶ್ರಮಿಸಿದ್ದಾರೆ ಎಂದು ಹಿರಿಯ ಸಾಹಿತಿ ಪ್ರೊ.ಸಿ.ನಾಗಣ್ಣ ಅಭಿಪ್ರಾಯಪಟ್ಟರು.

ಮೈಸೂರಿನ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಂಸ್ಥೆಯ ಸಭಾಂಗಣದಲ್ಲಿ ಹೊಯ್ಸಳ ಕನ್ನಡ ಸಂಘ, ಸವಿಗನ್ನಡ ಪತ್ರಿಕಾ ಬಳಗ ಭಾನುವಾರ ಆಯೋಜಿಸಿದ್ದ ಬಿ.ಕೆ.ಮೀನಾಕ್ಷಿ ಅವರ ಮೂರು ಕೃತಿಗಳ ಲೋಕಾರ್ಪಣೆ ಸಮಾರಂಭದಲ್ಲಿ 'ನಗುವಿನಿಬ್ಬನಿ ಮಿನುಗುತಿರಲಿ' ಪ್ರಬಂಧ ಸಂಕಲನವನ್ನು ಕುರಿತು ಮಾತನಾಡಿದ ಅವರು, ಇಪ್ಪತ್ತನೇ ಶತಮಾನದಲ್ಲಿ ಸಾಹಿತ್ಯ ಪ್ರಬಂಧ ಸಾಹಿತ್ಯ ಪ್ರಕಾರವನ್ನು ಚೈತನ್ಯಗೊಳಿಸಿದ ಸಾಹಿತಿಗಳ ಪಡೆಯಲ್ಲಿ ಪುತಿನ, ಕುವೆಂಪು, ದ.ರಾ.ಬೇಂದ್ರೆ, ಶಿವರಾಮ ಕಾರಂತ, ಎ.ಎನ್.ಮೂರ್ತಿರಾಯರು, ಗೊರೂರು ರಾಮಸ್ವಾಮಿ ಅಯ್ಯಂಗಾರ್, ನಾ.ಕಸ್ತೂರಿ, ವಿ.ಸೀತಾರಾಮಯ್ಯ, ಎಂ.ವಿ.ಸೀತಾರಾಮಯ್ಯ, ವಿ.ಕೃ.ಗೋಕಾಕ, ಹಾ.ಮಾ.ನಾಯಕ, ಎಂ.ಎಸ್.ಕಾಮತ್, ಶ್ರೀರಂಗ, ಎಚ್ಚೆಸ್ಕೆ, ತೀನಂಶ್ರೀ, ಸಿದ್ದವನಹಳ್ಳಿ ಕೃಷ್ಣ ಶರ್ಮ, ಹೆಚ್.ಎನ್.ನಾಗೇಗೌಡ ಮುಂತಾದವರನ್ನು ನೆನೆಯಬೇಕು ಎಂದರು.

ಮೀನಾಕ್ಷಿಯವರ ಬರಹಗಳ ಮೊತ್ತವನ್ನು ಗಮನಿಸಿದರೆ ಪ್ರಬಂಧ ಅವರ ಒಲವಿನ ಪ್ರಕಾರವೆಂದು ಸ್ಪಷ್ಟವಾಗುತ್ತದೆ. ದಶಕಗಳ ಕಾಲ ಚಿಕ್ಕ ಮಕ್ಕಳಿಗೆ ಪಾಠ ಹೇಳುತ್ತಲೇ ಬರಹವನ್ನು ಸೂಕ್ಷ್ಮಗೊಳಿಸಿಕೊಂಡಿರುವ ಅವರು, ತಮ್ಮ ವೃತ್ತಿ ಜೀವನದ ಅನುಭವಗಳನ್ನು ಯುಕ್ತವಾದ ರೀತಿಯಲ್ಲಿ ಹೆಕ್ಕಿ ತೆಗೆದು ಅವುಗಳನ್ನು ಸಮಯೋಚಿತವಾಗಿ ಸಂಯೋಜನೆಗೊಳಿಸಿ ತಮ್ಮ ಪ್ರಬಂಧಗಳಿಗೆ ಜೀವ ತುಂಬಿದ್ದಾರೆ ಎಂದು ಪ್ರಶಂಸಿಸಿದರು.

ಸದಾ ನಿಮ್ಮೊಂದಿಗೆ' ಅಂಕಣ ಬರಹಗಳನ್ನು ಕುರಿತು ಜೆಎಸ್‌ಎಸ್ ಮಹಾ ವಿದ್ಯಾಪೀಠದ ಪ್ರಕಟಣ ವಿಭಾಗದ ನಿರ್ದೇಶಕ ಪ್ರೊ.ಮರುಳದ ಮಲ್ಲಿಕಾರ್ಜುನ ಮಾತನಾಡಿ, ಇಲ್ಲಿರುವ ಲೇಖನಗಳು ಜ್ಞಾನದ ಜೊತೆಗೆ ವಿನಯವನ್ನು ಉದ್ದೀಪನಗೊಳಿಸುತ್ತವೆ. ಬಹುತೇಕ ಲೇಖನಗಳು ಪ್ರೀತಿ ಮೂಡಿಸುತ್ತವೆ. ಸಂದೇಶ ನೀಡುತ್ತವೆ ಎಂದರು.

'ಮೋನು ಮತ್ತು ಆನೆ'– ಮಕ್ಕಳ ಕಥಾ ಸಂಕಲನ ಕುರಿತು ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಮಾತನಾಡಿ, ಶಿಕ್ಷಕಿಯಾಗಿ ಕೆಲಸ ಮಾಡಿರುವ ಬಿ.ಕೆ.ಮೀನಾಕ್ಷಿ ಅವರಿಗೆ ಕಥನ ಶೈಲಿ ಸಿದ್ಧಿಸಿದೆ. ಮಕ್ಕಳಿಗೆ ಆಪ್ತವಾಗುವ ರೀತಿಯಲ್ಲಿ ಕಥೆಗಳನ್ನು ಕಟ್ಟಿಕೊಟ್ಟಿದ್ದಾರೆ. ಮಕ್ಕಳ ಜೊತೆಗೆ ಹಿರಿಯರಿಗೂ ನೈತಿಕತೆಯನ್ನು ಬೋಧಿಸುವ ಅಂಶಗಳು ಇಲ್ಲಿವೆ ಎಂದರು.

ಸಾನ್ನಿಧ್ಯ ವಹಿಸಿದ್ದ ವಹಿಸಿದ್ದ ಮೇಲುಕೋಟೆ ವಂಗೀಪುರದ ನಂಬೀಶದ ಶ್ರೀ ಇಳೈ ಆಳ್ವಾರ್ ಸ್ವಾಮೀಜಿ ಆಶೀರ್ವಚನ ನೀಡಿ, ಪ್ರಾಚ್ಯವಿದ್ಯಾ ಸಂಶೋಧನಾಲಯದಲ್ಲಿರುವ ಹಳೆಯ ಕಾಲದ ಓಲೆಗರಿ ಗ್ರಂಥಗಳನ್ನು ರಕ್ಷಿಸಬೇಕಾಗಿದೆ ಎಂದರು.

'ಮೋನು ಮತ್ತು ಆನೆ', 'ಸದಾ ನಿಮ್ಮೊಂದಿಗೆ' ಹಾಗೂ 'ನಗುವಿನಿಬ್ಬನಿ ಮಿನುಗುತಿರಲಿ' ಕೃತಿಗಳನ್ನು ಹಿರಿಯ. ಸಂಸ್ಕೃತ ವಿದ್ವಾಂಸ ಡಾ.ಹೆಚ್.ವಿ.ನಾಗರಾಜ ರಾವ್ ಬಿಡುಗಡೆ ಮಾಡಿದರು. ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್ ಅಧ್ಯಕ್ಷತೆ ವಹಿಸಿದ್ದರು. ಲೇಖಕಿ ಬಿ.ಕೆ.ಮೀನಾಕ್ಷಿ ಅವರು ತಮ್ಮ ಪ್ರೌಢಶಾಲಾ ಶಿಕ್ಷಕಿ ದಾವಣಗೆರೆಯ ಕಮಲಮ್ಮ ದಂಪತಿಗೆ ಗುರುವಂದನೆ ಸಲ್ಲಿಸಿದರು. ಪುಟಾಣಿ ಇಳಾ 'ಮೋನು ಮತ್ತು ಆನೆ' ಕತೆ ಹೇಳಿದರೆ, ಸಿ.ವಿ. ಧನ್ವ ಇಂಗ್ಲಿಷ್ ಕವನ ವಾಚಿಸಿದರು. ರಂಗನಾಥ್ ಮೈಸೂರು ಸ್ವಾಗತಿಸಿದರೆ, ವಿಜಯಲಕ್ಷ್ಮೀ ಪ್ರಾರ್ಥಿಸಿದರೆ, ಉಷಾ ನರಸಿಂಹನ್ ನಿರೂಪಿಸಿ, ಹೆಚ್.ನಿವೇದಿತಾ ವಂದಿಸಿದರು.



ಅಭಿನಂದನೆ....

ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕಿನ ಆಡಳಿತ ಮಂಡಳಿ ಚುನಾವಣೆಯಲ್ಲಿ ಬಕೆಟ್ ಚಿಹ್ನೆ ಮೂಲಕ ಸ್ಪರ್ಧಿಸಿ ಅತ್ಯಧಿಕ 5553 ಮತಗಳನ್ನು ಪಡೆದು ಜಯಗಳಿಸಿದ ಜೆ.ಯೋಗೇಶ್ (ಪಡುವಾರಹಳ್ಳಿ)ಅವರನ್ನು ಚಾಮರಾಜ ಕ್ಷೇತ್ರದ ಯುವ ಕಾಂಗ್ರೆಸ್‌ನ ಅಧ್ಯಕ್ಷ ನಿಶಾಂತ್ ಪಟೇಲ್ ಅಭಿನಂದಿಸಿದರು. ಈ ವೇಳೆ ಉಪಾಧ್ಯಕ್ಷ ದಿಲೀಪ್, ಗುತ್ತಿಗೆದಾರರಾದ ಕೃಪಾನಂದ, ಯುವ ಮುಖಂಡರಾದ ನಿತಿನ್ ಪುಟ್ಟಸ್ವಾಮಿ, ಭೀಮಳ್ಳಿ ವಿನೋದ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಇಂದು ಕೇರ್ಗಳ್ಳಿಯಲ್ಲಿ ಗ್ರಾಮದೇವತೆ ಮಾರಮ್ಮ ಪೂಜೆ

ಮೈಸೂರು,ಫೆ.9–ಮೈಸೂರು ತಾಲೂಕು ಕೇರ್ಗಳ್ಳಿ ಗ್ರಾಮದಲ್ಲಿ ನಾಳೆ (ಫೆ.10) ಗ್ರಾಮದೇವತೆ ಕೇರ್ಗಳ್ಳಿ ಮಾರಮ್ಮನವರ ಪೂಜೆಯನ್ನು ಏರ್ಪಡಿಸಲಾಗಿದೆ.

ಸೋಮವಾರ ಮಧ್ಯಾಹ್ನ 2 ಗಂಟೆಯಿಂದ ವಿಶೇಷ ಪೂಜೆಗಳು, ತಂಪು ಕೊಡುವ ಕಾರ್ಯಕ್ರಮಗಳು ನಡೆಯಲಿದ್ದು, ಸುತ್ತ–ಮುತ್ತಲಿನ ಗ್ರಾಮಗಳಾದ ಬಡಗಲಹುಂಡಿ, ಸಾಲುಂಡಿ, ರಾಮನಹುಂಡಿ, ನಂಜರಾಜಯ್ಯನ ಹುಂಡಿಯ ಸಾವಿರಾರು ಭಕ್ತರು ಪಾಲ್ಗೊಳ್ಳುವರು ಎಂದು ಗ್ರಾಮದ ಯಜಮಾನರು ತಿಳಿಸಿದ್ದಾರೆ.

ರಾತ್ರಿಯವರೆಗೂ ನಡೆಸುವ ಪೂಜಾ ಕಾರ್ಯಕ್ರಮದಲ್ಲಿ ಭಕ್ತಾದಿಗಳು, ತಂಬಿಟ್ಟು ಆರತಿ ಸೇರಿದಂತೆ ವಿವಿಧ ಪೂಜೆಗಳನ್ನು ನೆರವೇರಿಸಿ, ಗ್ರಾಮ ಮತ್ತು ಗ್ರಾಮಸ್ಥರಿಗೆ ಒಳಿತು ಮಾಡುವಂತೆ ಪ್ರಾರ್ಥನೆ ಸಲ್ಲಿಸುವರು ಎಂದು ಕೇರ್ಗಳ್ಳಿ ಗ್ರಾಪಂ ಮಾಜಿ ಅಧ್ಯಕ್ಷ ಬಸವೇಗೌಡ ತಿಳಿಸಿದ್ದಾರೆ.

ಮುಡುಕುತೊರೆ ಸುತ್ತೂರು ಶ್ರೀ ನಾಡುಮಠದಲ್ಲಿ ವಿಶೇಷಪೂಜೆ

ಮೈಸೂರು,ಫೆ.9–ಮುಡುಕು ತೊರೆಯ ಶ್ರೀ ಸುತ್ತೂರು ಶಾಖಾ ನಾಡುಮಠದಲ್ಲಿ ಶ್ರೀ ಭ್ರಮರಾಂಭ ಸಮೇತ ಶ್ರೀ ಮಲ್ಲಿಕಾರ್ಜುನಸ್ವಾಮಿ ಜಾತ್ರಾ ಮಹೋತ್ಸವದ ಅಂಗವಾಗಿ ತೆಪ್ಪೋತ್ಸವದ ಫೆ.10ರಂದು ಸಂಜೆ 6.30 ಗಂಟೆಗೆ ವಿಶೇಷಪೂಜೆ ಏರ್ಪಡಿಸಲಾಗಿದೆ.

ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾ ಸ್ವಾಮಿಗಳವರ ದಿವ್ಯ ಕೃಪಾಶೀರ್ವಾದಗಳೊಂದಿಗೆ ಶ್ರೀ ನಾಡು ಮಠದಲ್ಲಿ ಶ್ರೀ ಭ್ರಮರಾಂಬಾ ಸಮೇತ ಶ್ರೀ ಮಲ್ಲಿಕಾರ್ಜುನಸ್ವಾಮಿ ಹಾಗೂ ಶ್ರೀಮಠದ ಪರಂಪರೆಯ ಗುರುಗಳ ಭಾವಚಿತ್ರಗಳಿಗೆ ವಿಶೇಷಪೂಜೆ, ಮಹಾಮಂಗಳರಾತಿ ಹಾಗೂ ಪುಷ್ಪಾರ್ಚನೆ ನೆರವೇರಲಿದೆ. ಸುತ್ತೂರು ಜೆಎಸ್‌ಎಸ್ ವಸತಿ ಶಾಲೆಯ ಸಂಗೀತ ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಗಾಯನವನ್ನು ಪ್ರಸ್ತುತಪಡಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

'ನ್ಯಾಕ್' ಗ್ರೇಡ್ ನೀಡಲು ಲಂಚ ಆರೋಪ: ಸಮಿತಿಯ 7 ಸದಸ್ಯರಿಗೆ ಜೀವಿತಾವಧಿ ನಿಷೇಧ

ಬೆಂಗಳೂರು,ಫೆ.9–ಭ್ರಷ್ಟಾಚಾರ ಪ್ರಕರಣಗಳಲ್ಲಿ ಸಿಲುಕಿದ್ದ ಸಿಬಿಐ ತನಿಖೆ ಎದುರಿಸುತ್ತಿರುವ ವಿಶ್ವವಿದ್ಯಾಲಯಗಳಿಗೆ 5 ವರ್ಷಗಳ ನಿಷೇಧ, ಸಮಿತಿ ಸದಸ್ಯರಿಗೆ ಜೀವತಾವಧಿ ನಿಷೇಧ ವಿಧಿಸಲಾಗಿದೆ ಎಂದು ರಾಷ್ಟ್ರೀಯ ಮೌಲ್ಯಮಾಪನ ಮತ್ತು ಮಾನ್ಯತಾ ಮಂಡಳಿ ಹೇಳಿದೆ.

ಈ ಕುರಿತು ಪತ್ರಿಕಾ ಹೇಳಿಕೆ ಬಿಡುಗಡೆ ಮಾಡಿರುವ ಮಂಡಳಿ, ರಾಧಾಕೃಷ್ಣನ್ ಸಮಿತಿಯ ಶಿಫಾರಸುಗಳ ಪ್ರಕಾರ ವಿಶ್ವವಿದ್ಯಾಲಯಗಳು ಹಾಗೂ ಉನ್ನತ ಶಿಕ್ಷಣ ಸಂಸ್ಥೆಗಳಿಗೆ 'ನ್ಯಾಕ್' ಮಾನ್ಯತೆ ನೀಡುವ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ತರಲು, ಭ್ರಷ್ಟಾಚಾರ ನಿಯಂತ್ರಿಸಲು ಬೈನರಿ ಮಾನ್ಯತೆ ಮತ್ತು ಪ್ರಬುದ್ಧತಾ ಹಂತವನ್ನು ಬರುವ ಏಪ್ರಿಲ್‌ನಿಂದಲೇ ಜಾರಿಗೊಳಿಸ ಲಾಗುತ್ತಿದೆ. ನ್ಯಾಕ್ ಮಾನ್ಯತೆ ಪಡೆಯದ ಹೊಸ ಕಾಲೇಜುಗಳು ಬೈನರಿ ಮಾನ್ಯತೆ ಕೋರಿ ಅರ್ಜಿ ಸಲ್ಲಿಸಬಹುದು. ಹೊಸ ಮಾನ್ಯತಾ ಪರಿಕಲ್ಪನೆಗಳ ಜಾರಿಯ ನಂತರ ಹಿಂದಿನ ನ್ಯಾಕ್ ಶ್ರೇಣಿ ಪದ್ಧತಿಗಳು ಕ್ರಮೇಣ ರದ್ದಾಗಲಿವೆ ಎಂದು ಮಾಹಿತಿ ನೀಡಿದೆ.

ಆಂಧ್ರಪ್ರದೇಶದ ಗುಂಟೂರಿನಲ್ಲಿರುವ ಕೋನೇರು ಲಕ್ಷ್ಮಯ್ಯ ಎಜುಕೇಷನ್ ಫೌಂಡೇಷನ್ (ಕೆಎಲ್ ಇಎಫ್) ನ್ಯಾಕ್‌ನಿಂದ 'ಎ' ಪ್ಲಸ್ ಗ್ರೇಡ್ ಪಡೆಯಲು ಲಂಚ ನೀಡಿದ ಆರೋಪ ಕೇಳಿಬಂದಿತ್ತು. ಸಮಿತಿಯ 7 ಸದಸ್ಯರ ವಿರುದ್ಧ ಸಿಬಿಐ ಪ್ರಕರಣ ದಾಖಲಿಸಿಕೊಂಡು, ತನಿಖೆ ನಡೆಸುತ್ತಿದೆ. ದಾವಣಗೆರೆ ವಿಶ್ವವಿದ್ಯಾಲಯದ ಪ್ರಾಧ್ಯಾಪಕಿ ಗಾಯತ್ರಿ ದೇವರಾಜ, ಬೆಂಗಳೂರು ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಐಕ್ಯುಎಸಿನ್ಯಾಕ್ ನಿರ್ದೇಶಕ ಎಂ.ಹನುಮಂತಪ್ಪ ಸಹ ಸಮಿತಿಯಲ್ಲಿದ್ದರು. ಈ ಸಮಿತಿ ಭೇಟಿ ನೀಡಿದ್ದ ಕಾಲೇಜುಗಳಿಗೆ ಪುನರ್ ಪರಿಶೀಲನೆಗಾಗಿ ಮತ್ತೊಂದು ಸಮಿತಿ ಕಳುಹಿಸಿ ಕೊಡಲು ಮಂಡಳಿ ಕಾರ್ಯಕಾರಿ ಸಮಿತಿ ಸಭೆ ತೀರ್ಮಾನ ತೆಗೆದುಕೊಂಡಿದೆ.

ಮುಡಾ ಪ್ರಕರಣ

ಕೋರ್ಟ್ ತೀರ್ಪು ಸ್ವಾಗತ

ಮೈಸೂರು, ಫೆ.9– ಮುಡಾ ಪ್ರಕರಣ ಸಿಬಿಐಗೆ ಒಪ್ಪಿಸಬೇಕೆಂಬ ಕೋರಿಕೆಯನ್ನು ಹೈಕೋರ್ಟ್ ತಿರಸ್ಕರಿಸಿರುವುದನ್ನು ಕೆ.ಆರ್.ಬ್ಯಾಂಕ್ ಅಧ್ಯಕ್ಷ ಬಸವರಾಜ್ ಬಸಪ್ಪ ಸ್ವಾಗತಿಸಿದ್ದಾರೆ.

ರಾಜ್ಯದಲ್ಲಿ ಸಿದ್ದರಾಮಯ್ಯ ನೇತೃತ್ವದ ಸರಕಾರ ಅಧಿಕಾರಕ್ಕೆ ಬಂದ ದಿನದಿಂದ ಒಂದಿಲ್ಲೊಂದು ರೀತಿಯಲ್ಲಿ ತೊಂದರೆ ಕೊಡುತ್ತ ಬಂದಿರುವ ಬಿಜೆಪಿ ನಾಯಕರಿಗೆ ಇಂದಿನ ಹೈಕೋರ್ಟ್ ತೀರ್ಪು ತಕ್ಕ ಬುದ್ಧಿ ಕಲಿಸಿದಂತಾಗಿದೆ. ಇನ್ನಾದರೂ ನಾಯಕರು ಎಚ್ಚೆತ್ತುಕೊಳ್ಳಲಿ ಎಂದಿದ್ದಾರೆ. ಮುಡಾ ಪ್ರಕರಣದ ಬಗ್ಗೆ ಈಗಾಗಲೇ ಲೋಕಾಯುಕ್ತದಲ್ಲಿ ತನಿಖೆ ನಡೆಯುತ್ತಿದೆ. ಆದರೆ ಸಿಬಿಐ ಮೂಲಕ ಸಿದ್ದರಾಮಯ್ಯನವರನ್ನು ಕಟ್ಟಿಹಾಕಬೇಕೆನ್ನುವ ಬಿಜೆಪಿ ನಾಯಕರಿಗೆ ಮುಖಭಂಗವಾಗಿದೆ.

ಬಿಜೆಪಿ ಆಡಳಿತದಲ್ಲಿಯೇ 50:50ರಂತೆ ಸೈಟ್ ಹಂಚಿಕೆ ನಿಯಮ ಮಾಡಿಕೊಂಡು, ಅದೇ ಅವಧಿಯಲ್ಲಿ ಸೈಟ್ ಹಂಚಿಕೆ ಮಾಡಿ ಸಿದ್ದರಾಮಯ್ಯನವರದ್ದೇ ತಪ್ಪು ಎಂದು ಸಾರಲು ಹೊರಟವರಿಗೆ ಹೈಕೋರ್ಟ್ ನೀಡಿದ ಇಂದಿನ ತೀರ್ಪು ಚಾಟಿ ಏಟು ನೀಡಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಭಾರತದ ಸಂವಿಧಾನಕ್ಕೆ ವಚನ ಸಾಹಿತ್ಯ ತಾಯಿ ಬೇರು ಇದ್ದಂತೆ

ವಚನ ಗಾಯನ, ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಸಾಹಿತಿ ಬನ್ನೂರು ಕೆ.ರಾಜು ಅಭಿಮತ



ಕಾರ್ಯಕ್ರಮದಲ್ಲಿ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪುರಸ್ಕಾರ ನೀಡಲಾಯಿತು.

ಮೈಸೂರು,ಫೆ.9(ಎಸ್‌ಪಿಎನ್)– ಡಾ.ಬಿ.ಆರ್.ಅಂಬೇಡ್ಕರ್‌ರಚಿತ 'ಭಾರತ ಸಂವಿಧಾನ'ಕ್ಕೆ ಹನ್ನೆರಡನೇ ಶತಮಾನದ ಸಮಗ್ರ ವಚನಸಾಹಿತ್ಯ ತಾಯಿಬೇರು ಇದ್ದಂತೆ ಎಂದು ಹಿರಿಯ ಸಾಹಿತಿ ಬನ್ನೂರು ಕೆ.ರಾಜು ಅಭಿಪ್ರಾಯಪಟ್ಟರು.

ಮೈಸೂರು ಗೋಕುಲಂ ವಿದ್ಯಾಸಂಸ್ಥೆ ಆವರಣದಲ್ಲಿ ಶರಣ ಸಾಹಿತ್ಯ ಪರಿಷತ್ ಮೈಸೂರು ನಗರ ಘಟಕ ಆಯೋಜಿಸಿದ್ದ ವಚನ ಗಾಯನ ಮತ್ತು ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡುತ್ತ, 11ನೇ ಶತಮಾನದಲ್ಲಿ ದೇವರ ದಾಸಿಮಯ್ಯ, 12ನೇ ಶತಮಾನದ ಬಸವಣ್ಣ ಆದಿಯಾಗಿ ವಚನ ಚಳವಳಿಯಲ್ಲಿ ಭಾಗವಹಿಸಿದ ಎಲ್ಲಾ ಶರಣರು ಮನುಕುಲಕ್ಕೆ ಸಾಮಾಜಿಕ ಪಾಠ ಹೇಳಿದ ಮೇಷ್ಟ್ರುಗಳಿದ್ದಂತೆ. ಇವರು ರಚಿಸಿದ ವಚನ ಸಾಹಿತ್ಯ ಡಾ.ಬಿ.ಆರ್.ಅಂಬೇಡ್ಕರ್ ರಚಿತ ಭಾರತ ಸಂವಿಧಾನಕ್ಕೆ ತಾಯಿಬೇರು ಇದ್ದಂತೆ ಎಂದರು.

ವಚನಕಾರರು ರಚಿಸಿದ ಸಾಹಿತ್ಯ ಅವರ ಅನುಭವದ ಜನ್ಯವಾದುದು; ಅನುಭಾವ ಪೂರ್ಣವಾದುದು. ಬಸವಣ್ಣನವರು ಕತ್ತಲೆಯಿಂದ ಬೆಳಕಿನೆಡೆಗೆ ಇಡೀ ಸಮಾಜವನ್ನು ಕರೆದೊಯ್ದು ಜಗತ್ತಿಗೆ ಮಹಾಬೆಳಕಾದರೆ, ಇನ್ನುಳಿದ ಶರಣರು ತಮ್ಮ ವಚನಗಳ ಮೂಲಕ ಕಗ್ಗತ್ತಲಿಗೆ ಬೆಳಕಿನ ಹನಿಗಳಾದರು ಎಂದು ಹೇಳಿದರು.

'ವಚನ' ಎಂದರೆ ಒಳ್ಳೆಯ ಮಾತನಾಡುವುದು. ವಚನವೆಂದರೆ ಒಂದು ನುಡಿ ತೋರಣ. ಇಲ್ಲಿ ನ್ಯಾಯ, ನೀತಿ, ಧರ್ಮ, ನಿಷ್ಠೆ, ಕವಿತ್ವ, ದಾರ್ಶನಿಕತೆ ಹಾಗೂ ಅನುಭವ ಸಾಂದ್ರತೆ, ಅನುಭಾವದ ಪರಿಶುದ್ಧತೆಯಿದೆ. ನಮ್ಮ ಕನ್ನಡ ಭಾಷೆಗೆ ಶಾಸ್ತ್ರೀಯ ಸ್ಥಾನಮಾನ ದೊರಕಿಸಿಕೊಡುವಲ್ಲಿ ವಚನ ಸಾಹಿತ್ಯದ ಹಿರಿಮೆ ದೊಡ್ಡದು ಎಂದರು. ಗೋಕುಲ ವಿದ್ಯಾಸಂಸ್ಥೆ ಪ್ರಾಂಶುಪಾಲರಾದ ಕೆ.ಎಸ್.ವಸಂತಕುಮಾರಿ, ಪ್ರೊ.ಸಿದ್ದರಾಮಪ್ಪ, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ನಗರಾಧ್ಯಕ್ಷ ಮ.ಗು.ಸದಾನಂದಯ್ಯ, ಶೈಲಾ ಸಿದ್ದರಾಮಪ್ಪ, ಶರಣ ಸಾಹಿತ್ಯ ಪರಿಷತ್ ಕಾರ್ಯದರ್ಶಿ ಕುಮಾರಸ್ವಾಮಿ, ಚನ್ನಬಸಪ್ಪ, ಮೋಹನ್, ಮಂಜುಳಾ, ಅಂಕಿತಾ ಶಿಕ್ಷಕಿಯರಾದ ಮಮತಾ, ನೇತ್ರ, ಪತ್ರಕರ್ತ ಹೊಮ್ಮ ಮಂಜುನಾಥ್ ಇನ್ನಿತರರಿದ್ದರು. ಮುಖ್ಯ ಶಿಕ್ಷಕ ಜೆ.ಸುಧೀರ್ ಕುಮಾರ್ ಬಹುಮಾನ ವಿತರಿಸಿದರು. ಶಿಕ್ಷಕಿ ಮಮತಾ ಕಾರ್ಯಕ್ರಮ ನಿರೂಪಿಸಿದರು.

ಎಂಕೆಎಸ್ ಜನ್ಮದಿನ: ಮಹಿಳೆಯರಿಂದ ರಕ್ತದಾನ




ಕೃಷ್ಣರಾಜ ಕ್ಷೇತ್ರದ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಅವರ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಮಹಿಳಾ ಕಾಂಗ್ರೆಸ್ ಘಟಕದಿಂದ ರಾಮಕೃಷ್ಣ ಆಸ್ಪತ್ರೆಯಲ್ಲಿ ರಕ್ತದಾನ ಶಿಬಿರ ನಡೆಯಿತು. ಈ ವೇಳೆ ಘಟಕದ ಅಧ್ಯಕ್ಷೆ ಪುಷ್ಪಲತಾ ಚಿಕ್ಕಣ್ಣ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷೆ ಇಂದಿರಾ, ಭವ್ಯ, ರಾಜ್ಯ ಕಾರ್ಯದರ್ಶಿ ಲತಾ ಮೋಹನ್, ಕೆಪಿಸಿಸಿ ಮಾಜಿ ಸದಸ್ಯೆ ವೀಣಾ, ನಗರ ಕಾರ್ಯದರ್ಶಿ ಮಲ್ಲಾಜಮ್ಮ, ಮಾಜಿ ನಗರ ಅಧ್ಯಕ್ಷೆ ರಾಧಾಮಣಿ, ಮುಖಂಡರಾದ ನಾಗರತ್ನ, ಚಂದ್ರಕಲಾ, ಫಿರ್ದೋಸ್ ಭಾನು, ಮಹಾದೇವಮ್ಮ, ಲಕ್ಷ್ಮೀ, ಸರಸ್ವತಿ, ಜ್ಯೋತಿ, ಭವ್ಯ ಇದ್ದರು. 15ಕ್ಕೂ ಹೆಚ್ಚು ಮಂದಿ ರಕ್ತದಾನ ಮಾಡಿದರು.

ನಿವೃತ್ತರಿಗೆ ಬೀಳ್ಕೊಡುಗೆ...




ಸ್ವಯಂ ನಿವೃತ್ತಿ ಪಡೆದ ಭಾರತೀಯ ಜೀವ ವಿಮಾ ನಿಗಮದ ಶಾರದಾದೇವಿನಗರ ಶಾಖೆ ಉದ್ಯೋಗಿ ಭಾರತಿ ಅವರನ್ನು ಶಾಖಾಧಿಕಾರಿ ಉಮಾಶಂಕರ್, ನಿವೃತ್ತ ಅಭಿವೃದ್ಧಿ ಅಧಿಕಾರಿ ಬೂಕನಕೆರೆ ವಿಜೇಂದ್ರ ಹಾಗೂ ಸಿಬ್ಬಂದಿ ಅಭಿನಂದಿಸಿ, ಬೀಳ್ಕೊಟ್ಟರು.

ಬುದ್ಧಿಮಾಂದ್ಯ ಮಹಿಳೆ ನಾಪತ್ತೆ



ಮೈಸೂರು, ಫೆ.9–ಬುದ್ಧಿಮಾಂದ್ಯ ಮಹಿಳೆ ನಾಪತ್ತೆಯಾಗಿರುವ ಬಗ್ಗೆ ಮೈಸೂರಿನ ನಜರ್‌ಬಾದ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಈ ಠಾಣೆ ವ್ಯಾಪ್ತಿಯಲ್ಲಿ ವಾಸವಿರುವ ಶಿವಕುಮಾರ್ ಎಂಬುವರ ಅಕ್ಕ ವಿ.ಶಾಂತಿ(58) ಬುದ್ಧಿಮಾಂದ್ಯಳಾಗಿದ್ದು, ಈಕೆ 2024ರ ನ.24ರಂದು ಮನೆಯಿಂದ ಹೊರ ಹೋದವರು ಮತ್ತೆ ವಾಪಸ್ಸಾಗಿಲ್ಲ ಎಂದು ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಲಾಗಿದೆ. ಈಕೆಯ ಬಗ್ಗೆ ಮಾಹಿತಿ ಇರುವವರು ನಜರ್‌ಬಾದ್ ಪೊಲೀಸ್ ಠಾಣೆ ದೂ.ಸಂಖ್ಯೆ 0821–2418308 ಅಥವಾ ನಗರ ಪೊಲೀಸ್ ಕಂಟ್ರೋಲ್ ರೂಂ 2419339 ಅನ್ನು ಸಂಪರ್ಕಿಸುವಂತೆ ಪೊಲೀಸ್ ಪ್ರಕಟಣೆ ತಿಳಿಸಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...




ಇಂದಿನ ಪಂಚಾಂಗ

10.02.2025 ಸೋಮವಾರ, ಮಳೆ ನಕ್ಷತ್ರ: ಧನಿಷ್ಠ 06.02.2025 ರಿಂದ 18.02.2025
ಕ್ರೋಧಿನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಮಾಘ ಮಾಸ, ಶುಕ್ಲ ಪಕ್ಷ,
ತಿಥಿ: ತ್ರಯೋ, ನಕ್ಷತ್ರ: ಪುನ, ರಾಹುಕಾಲ: ಬೆಳಗ್ಗೆ 7.30ರಿಂದ 9ರವರೆಗೆ

- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಬೆಳಗ್ಗೆ 6.30ರಿಂದ ಯೋಗ ಮಾಡಿ ಆರೋಗ್ಯವಾಗಿರಿ, ದೇಹ ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಬೆಳಗ್ಗೆ 9.30ರಿಂದ ಥೈರಾಯಿಡ್ ಸಮಸ್ಯೆಗಳಿಗೆ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ.
- **ರಾಮ್‌ಸನ್ಸ್ ಪ್ರತಿಷ್ಠಾನ :** ಬೊಂಬೆ ಮನೆ ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ 91, ಆಮ್ರಪಾಲಿ ಸೀರೆ ಮಳಿಗೆ ಮೇಲೆ, ನಜರ್‌ಬಾದ್ ಮುಖ್ಯರಸ್ತೆ, ಬೆಳಗ್ಗೆ 10ಕ್ಕೆ.
- **ಶ್ರೀ ಮಂಟೇಸ್ವಾಮಿ, ಶ್ರೀ ರಾಚಪ್ಪಾಜಿ, ಶ್ರೀ ದೊಡ್ಡಮ್ಮ ತಾಯಿ, ಶ್ರೀ ಚೆನ್ನಾಜಮ್ಮ ತಾಯಿ, ಶ್ರೀ ಘನನೀಲ ಸಿದ್ದಪ್ಪಾಜಿ ಹಾಗೂ ಶ್ರೀ ಸುಬ್ರಮಣ್ಯ ಸ್ವಾಮಿ ದೇವಸ್ಥಾನ:** ಶ್ರೀ ಶ್ರೀ ಘನನೀಲ ಸಿದ್ದಪ್ಪಾಜಿ ದೇವಸ್ಥಾನದ 9ನೇ ವರ್ಷದ ವಾರ್ಷಿಕೋತ್ಸವ ಹಾಗೂ 21ನೇ ವರ್ಷದ ಕಂಡಾಯ ಉತ್ಸವ, ಬೆಳಗ್ಗೆ 6 ಗಂಟೆಯಿಂದ ಶ್ರೀ ಗಣಪತಿ ಪೂಜೆ, ಪುಣ್ಯ ವಾಚನ, ನವಗ್ರಹ ಪೂಜೆ, ಗಣಪತಿ ಹೋಮ, ಶ್ರೀ ಮಂಟೇಸ್ವಾಮಿ ಹೋಮ, ಶ್ರೀ ರಾಚಪ್ಪಾಜಿ ಹೋಮ, ಶ್ರೀ ದೊಡ್ಡಮ್ಮ ತಾಯಿ ಹೋಮ, ಅಭಿಷೇಕ, ಅಲಂಕಾರ, ಮಹಾಮಂಗಳಾರತಿ, ತೀರ್ಥ ಪ್ರಸಾದ ವಿನಿಯೋಗ, ಸಂಜೆ 5.30ಕ್ಕೆ ಆಲ್ದೂರು ಆನಂದ್ ವೀರಗಾಸೆ ಕಲಾತಂಡದೊಂದಿಗೆ ಕ್ಯಾತಮಾರನಹಳ್ಳಿ ಹುಲಿಯಮ್ಮ ದೇವಸ್ಥಾನದಿಂದ ಕಂಡಾಯ ಮೆರವಣಿಗೆ, ಸ್ಥಳ: ದೇವಸ್ಥಾನದ ಪ್ರಾಂಗಣ, ವಿಶ್ವಕರ್ಮ ಕಾಲೋನಿ, ಗಾಯತ್ರಿಪುರಂ.
- **ಕಾವೇರಿ ಆಯುರ್ವೇದ ಆಸ್ಪತ್ರೆ :** 'ಚರ್ಮರೋಗ'ಕ್ಕೆ ಉಚಿತ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 10 ಗಂಟೆಯಿಂದ.
- **ಶ್ರೀ ಸುಬ್ರಹ್ಮಣ್ಯ ಸ್ವಾಮಿ ದೇವಸ್ಥಾನ, ಶ್ರೀ ಸುಬ್ರಹ್ಮಣ್ಯ ಸ್ವಾಮಿ ಟೆಂಪಲ್ ಟ್ರಸ್ಟ್ :** 59ನೇ ವರ್ಷದ ತೈಪೂಸಂ ಮಹೋತ್ಸವ–2025 ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು, ಚೇತನಾ ಮಹಿಳಾ ಸಮಾಜದ ಡಾ.ಜಯಶ್ರೀ ಚಂದ್ರಶೇಖರ್ ಅವರಿಂದ ಭಜನಾ ಮೇಳ, ಬೆಳಗ್ಗೆಯಿಂದ.
- **ದಿ ಇನ್‌ಸ್ಟಿಟ್ಯೂಟ್ ಆಫ್ ಎಜುಕೇಷನ್ ಟ್ರಸ್ಟ್, ಬಾಸುದೇವ ಸೋಮಾನಿ ಕಾಲೇಜು, ಎನ್‌ಎಸ್‌ಎಸ್ ಹಾಗೂ ಶಿಕ್ಷ ಗ್ರಹ ಸಂಸ್ಥೆ (ಬೆಂಗಳೂರು):** ಭಾರತದ ಶಿಕ್ಷಣ ಕ್ಷೇತ್ರದಲ್ಲಿ ಯುವಜನರ ಪಾತ್ರ ಕುರಿತು ಒಂದು ದಿನದ ಕಾರ್ಯಾಗಾರ, ಸ್ಥಳ: ಕಾಲೇಜು ಸಭಾಂಗಣ, ಕುವೆಂಪುನಗರ, ಬೆಳಗ್ಗೆ 10.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10–ಚಿಂತನ, ಪರಮೇಶ್ವರ ಸಾಲೀಮಠ, 6.15–ಗೀತಾರಾಧನ, 6.35: "ಆಧಾರ ಶಿಲೆ"–ಮೈಸೂರು ಸುತ್ತಲಿನ ಪ್ರಾಗೈತಿಹಾಸಿಕ ತಾಣಗಳ ಪರಿಚಯ ಮಾಲಿಕೆ. ಪ್ರಸ್ತುತಿ: ಡಾ.ರಾಮದಾಸ್‌ರೆಡ್ಡಿ, 6.40–ಅರಿವಿನ ಶಿಖರ, ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಬಿ.ಶ್ರೀರಾಂ ಭಟ್, ನಿತಿನ್ ರಾಜಾರಾಂ ಶಾಸ್ತ್ರಿ, ವ್ಯಾಖ್ಯಾನ–ಕೆ.ಎಲ್.ಪದ್ಮಿನಿ ಹೆಗಡೆ, 6.50–ರೈತರಿಗೆ ಸಲಹೆ, 7.15–"ಭರವಸೆ ಹೊನಲು–ವೈದ್ಯರ ಕಿವಿಮಾತು" ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು–ಟ್ರಸ್ಟ್‌ವೆಲ್ ಆಸ್ಪತ್ರೆ, ಜೆ.ಸಿ.ರಸ್ತೆ, ಬೆಂಗಳೂರು, 8.30–ಕನ್ನಡ ಚಿತ್ರಗೀತೆಗಳು, 9.00– ನೆನಪಿನಂಗಳ (ಧ್ವನಿ ಭಂಡಾರದಿಂದ) ಹಿರಿಯ ಸಂಗೀತ ಕಲಾವಿದೆ ನೀಲಾ ರಾಮಗೋಪಾಲ್ ಅವರೊಂದಿಗೆ ಜಿ.ರಾಜಲಕ್ಷ್ಮಿ ಶ್ರೀಧರ್ ಅವರು ನಡೆಸಿದ್ದ ಸಂವಾದ. 10.00–ಭಾರತದ ರಕ್ಷಣಾಮಂತ್ರಿ ರಾಜನಾಥ್ ಸಿಂಗ್ ಭಾಗವಹಿಸುವ, ಬೆಂಗಳೂರಿನಲ್ಲಿ ಆಯೋಜಿತವಾಗಿರುವ AIR SHOW–2025ರ ನೇರಪ್ರಸಾರ, 11.00–ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ನೇರ ಫೋನ್ ಇನ್ ಕಾರ್ಯಕ್ರಮ–ಗೇಮ್ ಶೋ, ಪ್ರಸ್ತುತಿ: ದಿಗ್ವಿಜಯ್ ಬಿ., 12.05–ವನಿತಾ ವಿಹಾರ– 12.35–ದೇವರನಾಮ, 12.45–ನಮ್ಮ ಆರೋಗ್ಯ: ರಾಷ್ಟ್ರೀಯ ಜಂತು ಹುಳು ನಿವಾರಣಾ ದಿನ' ಕುರಿತು ಮೈಸೂರು ಜಿಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಇಲಾಖೆಯ ಜಿಲ್ಲಾ ಆರ್‌ಸಿಹೆಚ್ ಅಧಿಕಾರಿ ಡಾ. ಮಹಮದ್ ಸಿರಾಜ್ ಅಹಮದ್ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ: ಬೇದ್ರೆ ಮಂಜುನಾಥ್, 1.00–ಪ್ರಗತಿ ಪಥ–ಕೇಂದ್ರ ಸರ್ಕಾರದ ಅಭಿವೃದ್ಧಿ ಯೋಜನೆಗಳ ಸರಣಿ, ಪ್ರಧಾನ ಮಂತ್ರಿ stand up India ಯೋಜನೆ ಕುರಿತು ಮಾತನಾಡುತ್ತಾರೆ, ಡಾ.ರಮೇಶ. ಎಂ, 1.20–ಭಾವಗೀತೆಗಳು, 2.40–ಚಿತ್ರಗೀತೆಗಳು, 3.00–ಕರ್ನಾಟಕ ಶಾಸ್ತ್ರೀಯ ಸಂಗೀತ: ಎನ್.ರವಿಕಿರಣ್–ಚಿತ್ರವೀಣಾ, 4.00–ಮಹಿಳಾರಂಗ –"ನಾನು ನನ್ನ ಕಂಪನಿ" ಹಲ್ಲಿನಪುಡಿ ತಯಾರಿಸುವ ಶಿರಸಿಯ ಪಲ್ಲವಿ ಹಾಗೂ ಸುಲೋಚನ ಹೆಗ್ಡೆ ಅವರೊಂದಿಗೆ ಮಾತುಕತೆ, ಪ್ರಸ್ತುತಿ: ಸಹನ, 4.45–ಹಿಂದಿ ಪಾಠ, ಪ್ರಸ್ತುತಿ: ಕಿಶೋರ್ ಎಂ.ಕಾಕಡೆ, 5.05–ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 5.30–ಮೈಸೂರು ಆಕಾಶವಾಣಿಯ 90ನೇ ವರ್ಷಾಚರಣೆ ಸಂದರ್ಭದಲ್ಲಿ ಮಂಡ್ಯದ ನಾಲ್ವಡಿ ಕೃಷ್ಣರಾಜ ಒಡೆಯರ್ ಕಲಾಮಂದಿರದಲ್ಲಿ ಜರುಗಿದ ಭಾವ ಜನಪದ ರಂಗ ಕಾರ್ಯಕ್ರಮದ ಬಾನುಲಿ ವರದಿ. ಪ್ರಸ್ತುತಿ: ದಿಗ್ವಿಜಯ್ ಬಿ. 6.10–ಕ್ಯಾನ್ಸರ್‌ನ ಮಿಥ್ಯೆಗಳು–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು–ಇಂಡಿಯನ್ ಕ್ಯಾನ್ಸರ್ ಸೊಸೈಟಿ, ಕರ್ನಾಟಕ ಚಾಪ್ಟರ್, 6.50–ಕೃಷಿರಂಗ: ಶತಮಾನ ಕಂಡ ಭಾರತದ ಕರ್ನಾಟಕ ಬ್ಯಾಂಕ್ ಪ್ರಾಯೋಜಿತ ನೇರ ಸಂವಾದ, ವಿಷಯ–ರೈತರ ಅಭಿವೃದ್ಧಿಗೆ ಬ್ಯಾಂಕಿನ ಯೋಜನೆಗಳು, ಭಾಗವಹಿಸುತ್ತಾರೆ –ಮೈಸೂರಿನ ಕುವೆಂಪುನಗರದಲ್ಲಿರುವ ಕರ್ನಾಟಕ ಬ್ಯಾಂಕ್ ಪ್ರಾದೇಶಿಕ ಕಚೇರಿಯ ಅಸಿಸ್ಟೆಂಟ್ ಜನರಲ್ ಮ್ಯಾನೇಜರ್ ಡಾ.ಟಿ.ಆರ್.ಅರುಣ್ ಮತ್ತು ಕೃಷಿ ಅಧಿಕಾರಿ ಆರ್.ಚಂದನಾ. ಪ್ರಸ್ತುತಿ: ಎನ್.ಕೇಶವಮೂರ್ತಿ, 7.45–ಭಾರತದ ರಕ್ಷಣಾಮಂತ್ರಿ ರಾಜನಾಥ್ ಸಿಂಗ್ ಭಾಗವಹಿಸುವ ಬೆಂಗಳೂರಿನಲ್ಲಿ ಆಯೋಜಿತವಾಗಿರುವ AIR SHOW-2025ರ ಬಾನುಲಿ ವರದಿ. ಪ್ರಸ್ತುತಿ: ಜ್ಯೋತಿ ದಾಸ್, 9.15–ಸಂಸದ್ ಸಮೀಕ್ಷಾ, 9.30–ಕರ್ನಾಟಕ ಶಾಸ್ತ್ರೀಯ ಸಂಗೀತ: ಟಿ.ಎನ್.ಕೃಷ್ಣನ್, ವೈಯೋಲಿನ್, 10.00–ಸಂಸತ್ತಿನ ಪ್ರಶ್ನೋತ್ತರ ಕಲಾಪಗಳ ಧ್ವನಿಮುದ್ರಿತ ಪ್ರಸಾರ

ಮೈಸೂರು ಮಿತ್ರ

ಕರ್ನಾಟಕ ಪೊಲೀಸ್ ಗೃಹ ನಿರ್ಮಾಣ ಸಹಕಾರ ಸಂಘದ ಚುನಾವಣೆ

ಫಲಿತಾಂಶ ಕಾಯ್ದಿರಿಸಿದ ಚುನಾವಣಾಧಿಕಾರಿಗಳು

ಮೈಸೂರು, ಫೆ.9(ಎಸ್‌ಬಿಡಿ)– ಮೈಸೂರಿನ ನೇತಾಜಿನಗರದಲ್ಲಿರುವ ಕರ್ನಾಟಕ ಪೊಲೀಸ್ ಗೃಹ ನಿರ್ಮಾಣ ಸಹಕಾರ ಸಂಘದ 2025–30ನೇ ಸಾಲಿನ ಆಡಳಿತ ಮಂಡಳಿಗೆ ಭಾನುವಾರ ಚುನಾವಣೆ ನಡೆಯಿತು.

ಸಂಘದ ಕಚೇರಿಯಲ್ಲಿ ಇಂದು ಬೆಳಗ್ಗೆ 9ರಿಂದ ಸಂಜೆ 4ರವರೆಗೆ ಬಿರುಸಿನಿಂದ ಮತದಾನ ನಡೆಯಿತು. ಒಟ್ಟು 554 ಮತದಾರರಲ್ಲಿ 440 ಮಂದಿ ಹಕ್ಕು ಚಲಾಯಿಸಿದರು. ನಂತರ ಮತ ಎಣಿಕೆ ಕಾರ್ಯ ನಡೆಸಲಾಯಿತಾದರೂ ನ್ಯಾಯಾಲಯದ ಆದೇಶದ ಹಿನ್ನೆಲೆಯಲ್ಲಿ ಚುನಾವಣಾಧಿಕಾರಿಗಳು ಫಲಿತಾಂಶ ಕಾಯ್ದಿರಿಸಿದ್ದಾರೆ.

11 ಸ್ಥಾನಕ್ಕೆ ಚುನಾವಣೆ: ಈಗಾಗಲೇ ಹಿಂದುಳಿದ ಪ್ರವರ್ಗ(ಎ) ಕ್ಷೇತ್ರದಿಂದ ಪುಟ್ಟಣ್ಣ ಹಾಗೂ ಪರಿಶಿಷ್ಟ ಪಂಗಡ ಕ್ಷೇತ್ರದಿಂದ ಶಿವಮಂಜು ಅವಿರೋಧವಾಗಿ ಆಯ್ಕೆಯಾಗಿದ್ದು, ಇನ್ನುಳಿದ 11 ನಿರ್ದೇಶಕರ ಸ್ಥಾನಕ್ಕೆ ಸ್ಪರ್ಧಿಸಿರುವ ಹಾಲಿ ಅಧ್ಯಕ್ಷ ಟಿ.ಎನ್.ನಾಗೇಶ್, ಉಪಾಧ್ಯಕ್ಷ ಮರೀಗೌಡ, ಹಾಲಿ ನಿರ್ದೇಶಕರಾದ ನಾಗರಾಜು, ಎ.ಎನ್.ನಾಗೇಂದ್ರ ಪ್ರಕಾಶ್, ಜಿ.ಬೇಬಿ, ಎಂ.ಎಸ್.ಮೋಹನ್, ಸಿ.ವಿ.ರಾಜು, ಎಂ.ಡಿ.ಶಿವರಾಜು, ಎಸ್.ಸಿದ್ದರಾಜೇಗೌಡ, ಸುಂದರಿ ಹಾಗೂ ತಂಡದ ಕೆ.ಜಿ.ನಿರಂಜನ್ ಸೇರಿದಂತೆ ಒಟ್ಟು 18 ಮಂದಿಯ ಭವಿಷ್ಯ ನ್ಯಾಯಾಲಯದ ಆದೇಶದ ನಂತರ ತಿಳಿಯಬೇಕಿದೆ.

ಈ ಬಗ್ಗೆ ಪ್ರತಿಕ್ರಿಯಿಸಿದ ಚುನಾವಣಾಧಿಕಾರಿ ಎಸ್.ವಸಂತಕುಮಾರ್, ನ್ಯಾಯಾಲಯದ ಮೂಲಕ ಮತದಾನದ ಅವಕಾಶ ಪಡೆದಿದ್ದ 157 ಸದಸ್ಯರಲ್ಲಿ 99 ಮಂದಿ ಮತ ಚಲಾಯಿಸಿದ್ದಾರೆ. ಹಾಗೆಯೇ ಸಹಕಾರ ಇಲಾಖೆ ಮತದಾರರ ಪಟ್ಟಿಯಲ್ಲಿದ್ದ 397ರಲ್ಲಿ 341 ಮಂದಿ ಮತ ಹಾಕಿದ್ದಾರೆ. ಪ್ರತ್ಯೇಕ ಬೂತ್ ವ್ಯವಸ್ಥೆ ಮೂಲಕ ಮತದಾನ ನಡೆಸಿದ ನಂತರ ಪ್ರತ್ಯೇಕವಾಗಿ ಎಣಿಕೆ ಪ್ರಕ್ರಿಯೆಯನ್ನೂ ನಡೆಸಲಾಗಿದೆ. ನ್ಯಾಯಾಲಯದ ಆದೇಶದಂತೆ ಮತದಾನದಿಂದ ಅನರ್ಹಗೊಂಡಿದ್ದ ಸದಸ್ಯರಿಗೆ ಮತದಾನಕ್ಕೆ ಅವಕಾಶ ನೀಡಿ, ಎಣಿಕೆ ಪ್ರಕ್ರಿಯೆಯನ್ನೂ ಪೂರ್ಣಗೊಳಿಸಲಾಗಿದೆ. ಮುಂದಿನ ಆದೇಶದಂತೆ ಕ್ರಮ ವಹಿಸಲಾಗುವುದು ಎಂದು ತಿಳಿಸಿದ್ದಾರೆ.

ದೆಹಲಿ ಮುಖ್ಯಮಂತ್ರಿ ಆಯ್ಕೆ: ಅಮಿತ್ ಶಾ ಭೇಟಿಯಾದ ನಡ್ಡಾ



ನವದೆಹಲಿ, ಫೆ.9– 27 ವರ್ಷಗಳ ಬಳಿಕ ದೆಹಲಿ ವಿಧಾನಸಭೆ ಚುನಾವಣೆಯಲ್ಲಿ ಅಭೂತಪೂರ್ವ ಗೆಲುವು ಸಾಧಿಸಿದ ಬೆನ್ನಲ್ಲೇ, ಬಿಜೆಪಿಯಲ್ಲಿ ಮುಖ್ಯಮಂತ್ರಿ ಆಯ್ಕೆ ಕಸರತ್ತು ನಡೆಯುತ್ತಿದೆ. ಈ ನಡುವೆ ಮುಖ್ಯಮಂತ್ರಿ ಆಯ್ಕೆ ಬಗ್ಗೆ ಚರ್ಚಿಸಲು ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಭೇಟಿ ಮಾಡಿದ್ದಾರೆ.

ಶನಿವಾರ ಗೆಲುವಿನ ಬಳಿಕ ಬಿಜೆಪಿ ಪ್ರಧಾನ ಕಚೇರಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡಿದ್ದರು. ಇದಾದ ಬಳಿಕ ಮುಖ್ಯಮಂತ್ರಿ ಆಯ್ಕೆ ಬಗ್ಗೆ ಹಿರಿಯ ನಾಯಕರ ಮಧ್ಯೆ ಅಲ್ಲಿಯೇ ಚರ್ಚೆ ನಡೆಸಿದ್ದರು.

ದೆಹಲಿಯ ಎಲ್ಲಾ ಪ್ರದೇಶಗಳಲ್ಲಿ, ಎಲ್ಲಾ ಸಮುದಾಯದ ಮತ ಗಳಿಸಿರುವ ಬಿಜೆಪಿಯಲ್ಲಿ ಮುಖ್ಯಮಂತ್ರಿ ಆಕಾಂಕ್ಷಿಗಳ ದೊಡ್ಡ ಪಟ್ಟಿಯೇ ಇದೆ. ವಿವಿಧ ರಾಜ್ಯಗಳ ಮುಖ್ಯಮಂತ್ರಿಗಳ ಆಯ್ಕೆಯಲ್ಲಿ ರಾಜಕೀಯ ಸಂದೇಶ ರವಾನಿಸಿದ್ದ ಬಿಜೆಪಿ, ದೆಹಲಿ ಮುಖ್ಯಮಂತ್ರಿಯನ್ನು ಆರಿಸುವಲ್ಲಿ ಅದೇ ಹೆಜ್ಜೆ ಇಡುವ ಸಾಧ್ಯತೆ ಇದೆ.

ಎಎಪಿ ಮುಖ್ಯಸ್ಥ ಅರವಿಂದ ಕೇಜ್ರಿವಾಲ್‌ರನ್ನು ಮಣಿಸಿರುವ ಜಾಟ್ ಸಮುದಾಯದ ನಾಯಕ ಪರ್ವೇಶ್ ವರ್ಮಾ, ಇತರ ನಾಯಕರಾದ ಸತೀಶ್ ಉಪಾಧ್ಯಾಯ, ವಿಜೇಂದರ್ ಗುಪ್ತಾ, ಆಶೀಶ್ ಸೂದ್ ಹಾಗೂ ಪವನ್ ಶರ್ಮಾ ಅವರ ಹೆಸರು ಚರ್ಚೆಯಲ್ಲಿದೆ. ಇದಲ್ಲದೆ ರಾಜಕೀಯದಲ್ಲಿ ಅಷ್ಟೇನೂ ಪ್ರಭಾವಿಗಳಲ್ಲದವರನ್ನೂ ಮುಖ್ಯಮಂತ್ರಿ ಮಾಡಿದ ನಿದರ್ಶನವೂ ಇದೆ.

ಈ ಹಿಂದೆ ಮಧ್ಯಪ್ರದೇಶದಲ್ಲಿ ಮೋಹನ್ ಯಾದವ್, ರಾಜಸ್ಥಾನದಲ್ಲಿ ಭಜನ್‌ಲಾಲ್ ಶರ್ಮಾ ಹಾಗೂ ಒಡಿಶಾದಲ್ಲಿ ಮೋಹನ್ ಚರಣ್ ಮಾಝಿಯವರನ್ನು ಮುಖ್ಯಮಂತ್ರಿಯನ್ನಾಗಿಸಿ ಎಲ್ಲಾ ಲೆಕ್ಕಾಚಾರಗಳನ್ನು ಬಿಜೆಪಿ ತಲೆಕೆಳಗು ಮಾಡಿತ್ತು. ಮುಖ್ಯಮಂತ್ರಿ ಯಾರಾಗಬೇಕು ಎನ್ನುವುದನ್ನು ಇತರ ರಾಜ್ಯಗಳಲ್ಲಿ ತೀರ್ಮಾನಿಸಿದಂತೆ ದೆಹಲಿ ಬಗ್ಗೆಯೂ ನಿರ್ಧರಿಸುತ್ತಾರೆ. ಎಲ್ಲಾ ಶಾಸಕರೂ ಮುಖ್ಯಮಂತ್ರಿಯಾಗುವ ಅರ್ಹತೆ ಹೊಂದಿದ್ದಾರೆ ಎಂದು ದೆಹಲಿ ಬಿಜೆಪಿ ಅಧ್ಯಕ್ಷ ವೀರೇಂದ್ರ ಸಚ್‌ದೇವ ಹೇಳಿದ್ದಾರೆ.

ದೆಹಲಿ ವಿಧಾನಸಭೆ ಚುನಾವಣೆಯಲ್ಲಿ

67 ಕಾಂಗ್ರೆಸ್ ನಾಯಕರು ಸೇರಿದಂತೆ ಠೇವಣಿ ಕಳೆದುಕೊಂಡ ಶೇ.80ರಷ್ಟು ಅಭ್ಯರ್ಥಿಗಳು

ನವದೆಹಲಿ, ಫೆ.9– ದೆಹಲಿ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸಿದ್ದ ಶೇ 80ರಷ್ಟು ಅಭ್ಯರ್ಥಿಗಳು ಠೇವಣಿ ಕಳೆದುಕೊಂಡಿದ್ದಾರೆ. ಕಾಂಗ್ರೆಸ್‌ನ ಮೂವರು ಅಭ್ಯರ್ಥಿಗಳನ್ನು ಹೊರತುಪಡಿಸಿ ಉಳಿದವರು ಸೇರಿದಂತೆ ಸ್ವತಂತ್ರವಾಗಿ ಸ್ಪರ್ಧಿಸಿದ್ದ ಎಲ್ಲ ಅಭ್ಯರ್ಥಿಗಳು ಠೇವಣಿ ಕಳೆದುಕೊಂಡಿದ್ದಾರೆ. ಶನಿವಾರ ಚುನಾವಣಾ ಫಲಿತಾಂಶ ಹೊರಬಿದ್ದ ಬಳಿಕ ಎಎಪಿ, ಬಿಜೆಪಿ ಮತ್ತು ಅದರ ಮಿತ್ರಪಕ್ಷಗಳಾದ ಜನತಾ ದಳ (ಯುನೈಟೆಡ್) ಮತ್ತು ಎಲ್‌ಜೆಪಿ (ರಾಮ್ ವಿಲಾಸ್) ಪಕ್ಷದ ಎಲ್ಲ ಅಭ್ಯರ್ಥಿಗಳು ಮತಗಳನ್ನು ಪಡೆದು ಠೇವಣಿ ಉಳಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ. ಚುನಾವಣೆಯಲ್ಲಿ ಸ್ಪರ್ಧಿಸಿದ್ದ 699 ಅಭ್ಯರ್ಥಿಗಳ ಪೈಕಿ 555 (ಶೇ. 79.39) ಅಭ್ಯರ್ಥಿಗಳು ಠೇವಣಿ ಕಳೆದುಕೊಂಡಿದ್ದಾರೆ. ಸತತ ಮೂರನೇ ಅವಧಿಗೆ ಒಂದೇ ಒಂದು ಸ್ಥಾನವನ್ನೂ ಗೆಲ್ಲದ ಕಾಂಗ್ರೆಸ್‌ನ 67 ಅಭ್ಯರ್ಥಿಗಳು ತಮ್ಮ ಠೇವಣಿ ಹಣವನ್ನು ಕಳೆದುಕೊಂಡಿರುವುದು ಪಕ್ಷಕ್ಕೆ ಸಂಕಷ್ಟ ತಂದೊಡ್ಡಿದೆ. ಕಾಂಗ್ರೆಸ್ ದೆಹಲಿಯ ಎಲ್ಲ 70 ಕ್ಷೇತ್ರಗಳಲ್ಲೂ ಅಭ್ಯರ್ಥಿಗಳನ್ನು ಕಣಕ್ಕಿಳಿಸಿತ್ತು. ಕಾಂಗ್ರೆಸ್‌ನ ಕಸ್ತೂರ್ಬಾ ನಗರ ಕ್ಷೇತ್ರದ ಅಭಿಷೇಕ್ ದತ್, ನಂಗ್ಲೋಯ್ ಜಾಟ್ ಕ್ಷೇತ್ರದಿಂದ ಸ್ಪರ್ಧಿಸಿದ್ದ ರೋಹಿತ್ ಚೌಧರಿ ಮತ್ತು ಬದ್ಲಿಯಿಂದ ಕಣಕ್ಕಿಳಿದಿದ್ದ ದೇವೇಂದ್ರ ಯಾದವ್ ತಮ್ಮ ಠೇವಣಿ ಉಳಿಸಿಕೊಂಡಿದ್ದಾರೆ. ಎರಡು ಕ್ಷೇತ್ರಗಳಲ್ಲಿ ಸ್ಪರ್ಧಿಸಿದ್ದ ಎಐಎಂಐಎಂನ ಶಿಫಾ–ಉರ್–ರೆಹಮಾನ್ ಖಾನ್ ಅವರು ಓಖ್ಲಾದಲ್ಲಿ ತಮ್ಮ ಠೇವಣಿ ಉಳಿಸಿಕೊಂಡಿದ್ದಾರೆ.

ಮೈಸೂರು ಜಿಲ್ಲೆಯ ಐವರಿಗೆ ರಾಜ್ಯ ಮಟ್ಟದ ಗ್ರಾಮೀಣ 'ಶಿಕ್ಷಕ ರತ್ನ' ಪ್ರಶಸ್ತಿ



ಕರ್ನಾಟಕ ಸರ್ಕಾರಿ ಗ್ರಾಮೀಣ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ಆಯೋಜಿಸಿದ್ದ ರಾಜ್ಯ ಮಟ್ಟದ ಶೈಕ್ಷಣಿಕ ಕಾರ್ಯಾಗಾರದಲ್ಲಿ ಮೈಸೂರು ಜಿಲ್ಲೆಯ ಐವರು ಗ್ರಾಮೀಣ ಶಾಲಾ ಶಿಕ್ಷಕರಿಗೆ ರಾಜ್ಯ ಮಟ್ಟದ ಗ್ರಾಮೀಣ ಶಿಕ್ಷಕ ರತ್ನ ಪ್ರಶಸ್ತಿ ನೀಡಿ ಗೌರವಿಸಲಾಗಿದೆ.

ಮೈಸೂರು, ಫೆ.9(ಎಂಟಿವೈ)– ಕರ್ನಾಟಕ ಸರ್ಕಾರಿ ಗ್ರಾಮೀಣ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ಆಯೋಜಿಸಿದ್ದ ರಾಜ್ಯ ಮಟ್ಟದ ಶೈಕ್ಷಣಿಕ ಕಾರ್ಯಾಗಾರದಲ್ಲಿ ಮೈಸೂರು ಜಿಲ್ಲೆಯ ಐವರು ಗ್ರಾಮೀಣ ಶಾಲಾ ಶಿಕ್ಷಕರಿಗೆ ರಾಜ್ಯ ಮಟ್ಟದ ಗ್ರಾಮೀಣ ಶಿಕ್ಷಕ ರತ್ನ ಪ್ರಶಸ್ತಿ ನೀಡಿ ಗೌರವಿಸಲಾಗಿದೆ.

ಕರ್ನಾಟಕ ಸರ್ಕಾರಿ ಗ್ರಾಮೀಣ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ಹಾಗೂ ಬೆಂಗಳೂರು ಜಿಲ್ಲಾ ಘಟಕ, ನೆಲಮಂಗಲ ತಾಲೂಕು ಘಟಕದ ವತಿಯಿಂದ ನೆಲಮಂಗಲದ ಪವಾಡ ಬಸವಣ್ಣ ದೇವರ ಮಠದಲ್ಲಿ ಶನಿವಾರ ಆಯೋಜಿಸಿದ್ದ ರಾಜ್ಯ ಮಟ್ಟದ ಶೈಕ್ಷಣಿಕ ಕಾರ್ಯಾಗಾರದಲ್ಲಿ ರಾಜ್ಯದ ಎಲ್ಲಾ ಜಿಲ್ಲೆಗಳ ಗ್ರಾಮೀಣ ಪ್ರದೇಶದಲ್ಲಿ ಸೇವೆ ಸಲ್ಲಿಸುವ ಕೆಲ ಶಿಕ್ಷಕರನ್ನು ಈ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದ್ದು, ಅದರಲ್ಲಿ ಮೈಸೂರಿನ ಐವರು ಶಿಕ್ಷಕರಿಗೆ ಪ್ರಶಸ್ತಿ ಲಭಿಸಿದೆ. ನಂಜನಗೂಡಿನ ಇಜ್ಜಾಲದ ಸರ್ಕಾರಿ ಶಾಲೆಯ ಶಿಕ್ಷಕಿ ಸಿ.ಎಸ್.ಕುಸುಮ, ಸರಗೂರಿನ ಮಂಚಹಳ್ಳಿ ಶಾಲೆಯ ಶಿಕ್ಷಕ ರಾಜೇಂದ್ರ ಕುಮಾರ್, ಹುಣಸೂರು ತಾಲೂಕಿನ ಬೆಂಕಿಪುರ ಶಾಲೆಯ ಎಸ್.ರಾಜೇಶ್, ತಿ.ನರಸೀಪುರದ ಬಿಲಿಗೆರೆ ಹುಂಡಿ ಶಾಲೆಯ ಸಿದ್ದರಾಜು, ಹೆಚ್.ಡಿ.ಕೋಟೆಯ ಬೆಳತ್ತೂರು ಎ–ಕಾಲೋನಿ ಶಾಲೆಯ ಶಿಕ್ಷಕಿ ಎನ್.ಆರ್.ಸುಮ ಅವರಿಗೆ ರಾಜ್ಯ ಮಟ್ಟದ ಗ್ರಾಮೀಣ ಶಿಕ್ಷಕ ರತ್ನ ಪ್ರಶಸ್ತಿ ನೀಡಲಾಗಿದೆ.

ಜಾನಪದ ಸಾಹಿತ್ಯಕ್ಕೆ ಹಕ್ಕು ಪ್ರತಿಪಾದಿಸಲಾಗದು

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕಿ ಡಾ.ಧರಣಿ ದೇವಿ ಮಾಲಗತ್ತಿ ಅಭಿಮತ





'ಡಾ.ಸುಜಾತ ಅಕ್ಕಿ ನಾಟಕೋತ್ಸವ'ದ ಎರಡನೇ ದಿನದ ಕಾರ್ಯಕ್ರಮದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕಿ ಡಾ.ಧರಣಿದೇವಿ ಮಾಲಗತ್ತಿ ಭಾಗವಹಿಸಿ ಮಾತನಾಡಿದರು. ಮತ್ತೊಂದು ಚಿತ್ರದಲ್ಲಿ ಸೋಲಿಗರ ಬಾಲೆ ನಾಟಕ ಪ್ರದರ್ಶನವನ್ನು ಕಾಣಬಹುದು.

ಮೈಸೂರು, ಫೆ.9(ಎಸ್‌ಪಿಎನ್)– ಜಾನಪದ ಸಾಹಿತ್ಯ ಸಾರ್ವಜನಿಕವಾದುದು. ಈ ಸಾಹಿತ್ಯವನ್ನು ಯಾರ ಅನುಮತಿ ಇಲ್ಲದೆಯೂ ಬಳಸಿಕೊಳ್ಳಬಹುದು. ಇದಕ್ಕೆ ತನ್ನದು ಎಂದು ಹಕ್ಕು ಪ್ರತಿಪಾದಿಸುವುದು ತಪ್ಪು ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕಿ ಡಾ.ಧರಣಿ ದೇವಿ ಮಾಲಗತ್ತಿ ಅಭಿಪ್ರಾಯಪಟ್ಟರು.

ಮೈಸೂರು ಕಲಾಮಂದಿರ ಆವರಣದ ಕಿರುರಂಗಮಂದಿರದ ಮುಂಭಾಗದಲ್ಲಿ ರಂಗ ಯಾನ ಟ್ರಸ್ಟ್ ಏರ್ಪಡಿಸಿದ್ದ 'ಡಾ.ಸುಜಾತ ಅಕ್ಕಿ ನಾಟಕೋತ್ಸವ'ದ ಎರಡನೇ ದಿನದ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ಮಹಿಳಾ ಲೇಖಕಿಯ ಹೆಸರಿನಲ್ಲಿ ಬೇರೆಬೇರೆ ಕಾರ್ಯಕ್ರಮಗಳು ಆಯೋಜಿಸಿರಬಹುದು. ಆದರೆ, ಜಾನಪದ ಕ್ಷೇತ್ರದ ಕಥಾವಸ್ತುಗಳನ್ನು ಆರಿಸಿಕೊಂಡು ನಾಟಕಗಳನ್ನು ರಚಿಸಿರುವ ಡಾ.ಸುಜಾತ ಅಕ್ಕಿ ಅವರ ಹೆಸರಿನಲ್ಲಿ ಕಾರ್ಯಕ್ರಮದ ಆಯೋಜಿಸಿರುವುದು ಇದೇ ಪ್ರಥಮ ಇರಬಹುದು. ಹಾಗಾಗಿ ಮಹಿಳೆಯರು ಎಲ್ಲಾ ಕ್ಷೇತ್ರಗಳಲ್ಲೂ ಗುರುತಿಸಿಕೊಂಡು ತನ್ನ ಛಾಪು ಮೂಡಿಸುತ್ತಿರುವುದಕ್ಕೆ ಸಂತೋಷ ವ್ಯಕ್ತಪಡಿಸಿದರು.

ಡಾ.ಸುಜಾತ ಅಕ್ಕಿ ಅವರು ಇಲ್ಲಿಯವರೆಗೆ 20ಕ್ಕೂ ಹೆಚ್ಚು ನಾಟಕ, 10ಕ್ಕೂ ಹೆಚ್ಚು ಮಕ್ಕಳ ನಾಟಕಗಳನ್ನು ಬರೆದಿದ್ದಾರೆ. ಅವೆಲ್ಲವೂ ಜಾನಪದ ಕ್ಷೇತ್ರದ ಕಥಾವಸ್ತುಗಳಾಗಿರುವುದು ವಿಶೇಷ. ವಚನ ಸಾಹಿತ್ಯದ ಲೇಖಕರಿಗೆ ಅಂಕಿತ ನಾಮಗಳಿವೆ. ಆದರೆ, ಜಾನಪದ ಸಾಹಿತ್ಯಕ್ಕೆ ಯಾರು ಲೇಖಕರೂ ಎಂಬ ಗುರುತುಗಳಿಲ್ಲ. ಹಾಗಾಗಿ ಜಾನಪದ ಕ್ಷೇತ್ರದಲ್ಲಿ ಯಾರೇ ಕೃತಿಗಳನ್ನು ರಚಿಸಿದರೂ ಅದಕ್ಕೆ ಹಕ್ಕು ಪ್ರತಿಪಾದಿಸುವುದು ತಪ್ಪು ಎಂದು ಅಭಿಪ್ರಾಯಪಟ್ಟರು.

ಡಾ.ಸುಜಾತ ಅಕ್ಕಿ ರಚಿತ ಚಾಮ ಚೆಲುವೆ, ಸೋಲಿಗರ ಬಾಲೆ ನಾಟಕ ಸೊಗಸಾಗಿ ಮೂಡಿಬಂದಿದೆ. ಚಾಮ ಚೆಲುವೆ ನಾಟಕವನ್ನು ನಾನು ಈಗಾಗಲೇ ನೋಡಿದ್ದೇನೆ. ಡಾ.ಸುಜಾತ ಅಕ್ಕಿಯವರು ಒಬ್ಬ ಮಹಿಳಾ ನಾಟಕಕಾರರಾದ್ದರಿಂದ ಈ ನಾಟಕದ ಕಡೆಯಲ್ಲಿ ಬಹುಪತ್ನಿತ್ವವನ್ನು ಗಮನದಲ್ಲಿಟ್ಟುಕೊಂಡು ಸೋಲಿಗರ ಬಾಲೆ ನಾಟಕದಲ್ಲಿ ಕುಸುಮಾಮಾಲೆ ಮತ್ತು ಬಿಳಿಗಿರಿ ರಂಗನಾಥನ ಪ್ರೇಮ ಪ್ರಸಂಗವನ್ನು ಬಹಳ ಅಚ್ಚುಕಟ್ಟಾಗಿ ಚಿತ್ರಿಸಿದ್ದಾರೆ ಎಂದರು.

ರಂಗಾಯಣ ನಿರ್ದೇಶಕ ಸತೀಶ್ ತಿಪಟೂರು ಮಾತನಾಡಿ, ಕಳೆದ 15 ವರ್ಷಗಳಿಂದ ಹೊಸ ಪಠ್ಯಗಳು ಯಕ್ಷಗಾನ ಕ್ಷೇತ್ರಕ್ಕೆ ಬರುತ್ತಿಲ್ಲ. ಬರೀ ಹಳೆಯ ಕೃತಿಗಳನ್ನೇ ಯಕ್ಷಗಾನಕ್ಕೆ ಅಳವಡಿಸಲಾಗುತ್ತಿದೆ. ನಾನು ತುಮಕೂರು ಜಿಲ್ಲೆಯವನಾಗಿದ್ದು, ಯಕ್ಷಗಾನ ಕ್ಷೇತ್ರದಲ್ಲಿ ಗುರುತಿಸಿಕೊಂಡಿದ್ದೇನೆ. ಪ್ರಸ್ತುತ ರಂಗಾಯಣದಲ್ಲಿ ತೊಡಗಿಸಿಕೊಂಡಿದ್ದರಿಂದ ಇಲ್ಲಿ ಎಲ್ಲಾ ಪ್ರಕಾರಗಳ ಕಲೆಗಳಿಗೂ ಹೆಚ್ಚು ಪ್ರೋತ್ಸಾಹ ಜನರಿಂದ ದೊರೆಯುತ್ತಿದೆ ಎಂದರು. ಜಗತ್ತಿನ ಪ್ರಸಿದ್ಧ ನಾಟಕಕಾರ ಷೇಕ್ಸ್‌ಪಿಯರ್ ನಾಟಕಗಳು ಅಲ್ಲಿನ ಜಾನಪದ ಕಥೆಗಳನ್ನು ಆಧರಿಸಿವೆ. ಹಾಗೆಯೇ ಸುಜಾತ ಅಕ್ಕಿಯವರು ಸೋಲಿಗರ ಬಾಲೆ, ಚಾಮಚೆಲುವೆ, ಕಾಯಕದ ಸತ್ಯಕ್ಕ ನಾಟಕಗಳು ಸೇರಿದಂತೆ ಇತರೆ ನಾಟಕಗಳನ್ನು ರಚಿಸಿದ್ದಾರೆ. ಇಂತಹ ನಾಟಕಗಳು ರಂಗಭೂಮಿಗೆ ಅವಶ್ಯಕತೆ ಇದೆ. ಈ ನಿಟ್ಟಿನಲ್ಲಿ ಡಾ.ಸುಜಾತ ಅಕ್ಕಿಯವರ ನಾಟಕಗಳು ಕನ್ನಡ ರಂಗಭೂಮಿ ಮೈಲಿಗಲ್ಲಾಗಲಿವೆ ಎಂದರು.

ನಾಟಕಗಾರ್ತಿ ಡಾ.ಸುಜಾತ ಅಕ್ಕಿ ಅವರು ನಾಟಕೋತ್ಸವ ಕುರಿತು ಮಾತನಾಡಿದರು. ತದನಂತರ ಡಾ.ಸುಜಾತ ಅಕ್ಕಿ ರಚಿತ, ಎಚ್.ನಟರಾಜು ಸಂಗೀತ ಸಂಯೋಜನೆಯ ದರ್ಶನ್(ಪಾಂಡ) ಸಾಂಗತ್ಯದ ಬಿ.ಎಂ.ರಾಮಚಂದ್ರ ವಸ್ತ್ರ ವಿನ್ಯಾಸ ನೀಡಿರುವ ನಾಟಕ 'ಸೋಲಿಗರ ಬಾಲೆ' ಪ್ರದರ್ಶನಗೊಂಡು ಪ್ರೇಕ್ಷಕರ ಮನಗೆದ್ದಿತು. ವೇದಿಕೆಯಲ್ಲಿ ಶಿಕ್ಷಣ ಇಲಾಖೆಯ ಮಂಜುನಾಥ್ ಸೇರಿದಂತೆ ಇತರರಿದ್ದರು.

ಮೈಸೂರಲ್ಲಿ ಪ್ರೇಕ್ಷಕರ ಮನಗೆದ್ದ 'ಚಿತ್ರಸೇನ ಕಾಳಗ', 'ಶಶಿಪ್ರಭಾ ಪರಿಣಯ' ಯಕ್ಷಗಾನ





ಬಡಗುತಿಟ್ಟು ಮತ್ತು ತೆಂಕುತಿಟ್ಟು ವಿದ್ಯಾರ್ಥಿಗಳ ಯಕ್ಷಗಾನ ಪ್ರದರ್ಶನವನ್ನು ಉದ್ಘಾಟಿಸಲಾಯಿತು. ಮತ್ತೊಂದು ಚಿತ್ರದಲ್ಲಿ ವಿದ್ಯಾರ್ಥಿಗಳು ಯಕ್ಷಗಾನ ಪ್ರದರ್ಶಿಸಿರುವುದು

ಮೈಸೂರು, ಫೆ.9(ಎಸ್‌ಪಿಎನ್)– ಮೈಸೂರಿನ ಕೃಷ್ಣಮೂರ್ತಿಪುರಂನಲ್ಲಿರುವ ಶಾರದಾವಿಲಾಸ ಶತಮಾನೋತ್ಸವ ಭವನದಲ್ಲಿ ಮೈಸೂರು ಕರಾವಳಿ ಯಕ್ಷಗಾನ ಕೇಂದ್ರದ 14ನೇ ವಾರ್ಷಿಕೋತ್ಸವದ ಅಂಗವಾಗಿ ಏರ್ಪಡಿಸಲಾಗಿದ್ದ ಬಡಗುತಿಟ್ಟು ವಿದ್ಯಾರ್ಥಿಗಳಿಂದ ಕವಿ ದೇವಿದಾಸ ರಚಿತ 'ಚಿತ್ರಸೇನ ಕಾಳಗ' ಮತ್ತು ತೆಂಕುತಿಟ್ಟು ವಿದ್ಯಾರ್ಥಿಗಳ ಪೆರಡೂರು ರಘುರಾಮ ಮಲ್ಯ ರಚಿತ 'ಶಶಿಪ್ರಭಾ ಪರಿಣಯ' ಯಕ್ಷಗಾನ ಪ್ರೇಕ್ಷಕರ ಮನಗೆದ್ದಿತು.

ಯಕ್ಷಗಾನ ಪ್ರದರ್ಶನವನ್ನು ಉದ್ಘಾಟಿಸಿದ ದೀಕ್ಷಿತ್ ಆರೋಗ್ಯ ಧಾಮದ ನಿರ್ದೇಶಕ ಡಾ.ಅನಿಲ್‌ಕುಮಾರ್ ದೀಕ್ಷಿತ್ ಮಾತನಾಡಿ, ಕಲೆಗಳಲ್ಲಿ ನಮ್ಮನ್ನು ತೊಡಗಿಸಿಕೊಳ್ಳುವುದರಿಂದ ನಮ್ಮ ಕೋಪ–ತಾಪವನ್ನು ಬೇರೆಡೆ ವಿನಿಯೋಗಿಸುವ ಕಲೆ ಕರಗತವಾಗುತ್ತದೆ. ಅಲ್ಲದೆ, ದೈಹಿಕ ಕಸರತ್ತಿಗೆ ಯಕ್ಷಗಾನ ಉತ್ತಮ ವೇದಿಕೆ ಎಂದು ಹೇಳಿದರು.

ಯಕ್ಷಗಾನ ಕಲೆ ಕಲಿಕೆಗೆ ಪ್ರತಿಯೊಂದು ನಗರದಲ್ಲೂ ಪ್ರೋತ್ಸಾಹಿಸಬೇಕು. ಈ ಮೂಲಕ ನಮ್ಮ ಕಲೆಯನ್ನು ಮುಂದಿನ ಪೀಳಿಗೆಗೂ ಪರಿಚಯಿಸಬೇಕು ಎಂದ ಅವರು, ಯಕ್ಷಗಾನ ಕಲಿಕೆಗೆ ಯಾವುದೇ ವಯಸ್ಸಿನ ಅಂತರವಿಲ್ಲ. ಈ ಕಲೆಯನ್ನು ಕಲಿಯಲು ಇಷ್ಟಪಡುವವರು ಕಲಿಕೆಯಲ್ಲಿ ತೊಡಗಿಸಿಕೊಳ್ಳಬಹುದು. ನನಗೆ ಕೆಲಸ ಕಾರ್ಯಗಳ ಒತ್ತಡ ಇಲ್ಲದಿದ್ದರೆ, ಈಗಲೂ ಯಕ್ಷಗಾನ ಕಲಿಕೆಗೆ ಮನಸ್ಸು ಮಾಡುವೆ. ಆದರೆ, ಸಮಯ ಅಭಾವದಿಂದ ತೊಡಗಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಇದಕ್ಕೂ ಮುನ್ನ ಬಡಗುತಿಟ್ಟು ಯಕ್ಷಗಾನದಲ್ಲಿ ದೇವಿದಾಸ ವಿರಚಿತ ಚಿತ್ರಸೇನ ಕಾಳಗದಲ್ಲಿ ಪ್ರಸನ್ನಕುಮಾರ್ ಹೆಗಡೆ ಭಾಗವತರಾಗಿ, ಚಿನ್ಮಯ ಹೆಗಡೆ, ಅಂಬಾರಗೋಡ್ಲು ತಾಳಮದ್ದಳೆ, ಮನೋಜ್ ಆಚಾರ್ ಚಂಡೆ ವಾದ್ಯ ಹಿಮ್ಮೇಳದಲ್ಲಿದ್ದರು. ಮುಮ್ಮೇಳದಲ್ಲಿ ಕೋಡಂಗಿ ಪಾತ್ರಧಾರಿಯಾಗಿ ಸಂದೀಪ್ ಹೆಗಡೆ, ಆರ್.ಅಶ್ವಿನಿ ಕಲ್ಮನೆ, ಪೃತ್ವಿಕ್ ಎಸ್.ಕುಲಾಲ್, ಪ್ರಜ್ವಲ್ ಎಸ್.ಕುಲಾಲ್, ಎ.ಅದ್ವೈತ್, ಪಿ.ಅನ್ವಿತ, ಬಾಲಗೋಪಾಲನಾಗಿ ಶಮೃತಾ ಹೆಗಡೆ, ಎಸ್.ಎಂ.ದರ್ಶನ್ ಹಾಗೂ ಪೀಠಿಕಾ ಸ್ತ್ರೀವೇಷಧಾರಿಯಾಗಿ ಸಾತ್ವಿಕ್ ಹೆಬ್ಬಾರ್, ಅಪರ್ವ ನಿರ್ವಹಿಸಿದ್ದರು. ತೆಂಕತಿಟ್ಟು ಯಕ್ಷಗಾನ ಪ್ರದರ್ಶನದಲ್ಲಿ ಪೆರಡೂರು ರಘುರಾಮ ಮಲ್ಯ ವಿರಚಿತ 'ಶಶಿಪ್ರಭಾ ಪರಿಣಯ'ದಲ್ಲಿ ಭಾಗವತರಾಗಿ ಉಂಡೆಮನೆ ಶ್ರೀಕೃಷ್ಣಭಟ್, ಚಂಡೆ ಪೃಥ್ವಿ ಬಡೆಕ್ಕಿಲ, ಚಕ್ರತಾಳ ಪ್ರದೀಪ್, ಸಿದ್ದಕಟ್ಟೆ, ಪಾತ್ರವರ್ಗದಲ್ಲಿ ವಿಶ್ರುತ್ ಎ.ಧನ್ಯ, ವಿ.ಎಸ್.ಅನನ್ಯ, ಶಶಾಂಕ ಭಟ್, ಅದ್ವೈತ್ ರೈ, ಡಿ. ಪ್ರಣವ ಗಣೇಶ, ಗಣೇಶ ಪೂಜಾರಿ, ದೈವಿಕ್, ಕೆ.ಪಿ.ಅಭಿಜ್ವಲ್, ಹೆಚ್.ಕಿಶನ್, ಯುಕ್ತಾ ಆರ್.ಹೆಬ್ಬಾರ್, ಎಂ.ಎನ್.ಕೃಷ್ಣ, ಕಾಮ್ಯಾ ವಿ.ಕಾರ್ತಿಕೇಯನ್, ಧೃತಿ ರಾಜಶೇಖರ, ಮೇಧಾವಿ ರಾಜಶೇಖರ, ಪಲ್ಲವಿ, ಚಿನ್ಮಯಿ ಜಿ.ಭಟ್, ಅದ್ವಿಕಾ ಕೆ.ದಿವಾಕರ್, ಮೈಸೂರು ಮಹದೇವಸ್ವಾಮಿ, ಹರ್ಷ ಪೂಜಾರಿ ಇದ್ದರು. ವೇದಿಕೆಯಲ್ಲಿ ಕರಾವಳಿ ಯಕ್ಷಗಾನ ಕೇಂದ್ರದ ಅಧ್ಯಕ್ಷ ಶ್ರೀಧರ ಐತಾಳ, ಡಾ.ಕೆ.ವಿ.ಲಕ್ಷ್ಮೀದೇವಿ ಸೇರಿದಂತೆ ಇತರರಿದ್ದರು.

ಉನ್ನತ ಶಿಕ್ಷಣ ಸಂಸ್ಥೆಗಳಿಗೆ ನ್ಯಾಕ್ ಬದಲು ಬೈನರಿ ಮಾನ್ಯತೆ; ಏಪ್ರಿಲ್ ಬಳಿಕ ಜಾರಿ

ಮೈಸೂರು, ಫೆ.9 (ಎಸ್‌ಪಿಎನ್)– ರಾಷ್ಟ್ರೀಯ ಮೌಲ್ಯಮಾಪನ ಮತ್ತು ಮಾನ್ಯತೆ ಪರಿಷತ್‌ನಲ್ಲಿ (ನ್ಯಾಕ್) ಉತ್ತಮ ಮಾನ್ಯತೆ ಪಡೆಯಲು ಅಕ್ರಮ ಎಸಗಿದ ಪ್ರಕರಣ ಪತ್ತೆಯಾಗಿರುವ ಹಿನ್ನೆಲೆಯಲ್ಲಿ ಮಾನ್ಯತೆ ನೀಡುವ ಪದ್ಧತಿಯಲ್ಲಿ ಬದಲಾವಣೆ ತರಲು ಮುಂದಾಗಿರುವ ನ್ಯಾಕ್ ಮುಂದಿನ ಏಪ್ರಿಲ್ ತಿಂಗಳ ಬಳಿಕ ಉನ್ನತ ಶಿಕ್ಷಣ ಸಂಸ್ಥೆಗಳಿಗೆ ಮೂಲ (ಬೈನರಿ) ಮಾನ್ಯತೆಯನ್ನು ಮಾತ್ರ ನೀಡಲು ಮುಂದಾಗಿದೆ.

ಬೈನರಿ ಮಾನ್ಯತೆ ಕ್ರಮದಲ್ಲಿ ನ್ಯಾಕ್ ಮಾನ್ಯತೆಗಾಗಿ ಅರ್ಜಿ ಸಲ್ಲಿಸುವ ಸಂಸ್ಥೆಗೆ ಮಾನ್ಯತೆ ನೀಡುವುದು ಅಥವಾ ನೀಡದಿರುವ ತೀರ್ಮಾನವನ್ನು ಮಾತ್ರ ಕೈಗೊಳ್ಳಲಾಗುತ್ತದೆ. ಸಂಸ್ಥೆಯು ಬೈನರಿ ಮಾನ್ಯತೆಯನ್ನು ಪಡೆದ ಮೇಲೆ ಸಂಸ್ಥೆಯ ಕೋರಿಕೆಯ ಮೇರೆಗೆ ಔನ್ನತ್ಯ ಆಧಾರಿತ ಶ್ರೇಣೀಕರಣ ಮಟ್ಟವನ್ನು (ಎಂಬಿಜಿಎಲ್) ನೀಡಲಾಗುತ್ತದೆ. ಸದ್ಯ ಎಂಬಿಜಿಎಲ್‌ನ ಚೌಕಟ್ಟು ಮತ್ತು ವಿಧಾನ ರೂಪಿಸುವ ಪ್ರಯತ್ನ ನಡೆಯುತ್ತಿದೆ ಎಂದು ನ್ಯಾಕ್ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದೆ.

ಏನಿದು ಬೈನರಿ ಮಾನ್ಯತೆ?: ಈವರೆಗೆ ನ್ಯಾಕ್ ಕಾಲೇಜು, ವಿವಿಗಳಿಗೆ ಅವುಗಳ ಗುಣಮಟ್ಟಕ್ಕೆ ಅನುಗುಣವಾಗಿ ಎ++, ಎ+, ಎ, ಬಿ++ಹೀಗೆ ಮಾನ್ಯತೆಗಳನ್ನು ನೀಡುತ್ತಾ ಬರುತ್ತಿತ್ತು. ಈ ರೀತಿಯ ಗ್ರೇಡಿಂಗ್ ಅನ್ನು ನ್ಯಾಯಯುತವಾಗಿ ನೀಡುತ್ತಿಲ್ಲ ಎಂಬ ಆರೋಪಗಳು ಹಲವು ಬಾರಿ ಕೇಳಿ ಬಂದಿದೆ. ಆದ್ದರಿಂದ ಇನ್ನು ಮುಂದೆ ಈ ರೀತಿ ಗ್ರೇಡ್ ನೀಡದೆ ಮಾನ್ಯತೆ ಪಡೆದಿದೆಯೇ, ಇಲ್ಲವೇ ಎಂಬುದನ್ನಷ್ಟೇ ತಿಳಿಸಲಾಗುತ್ತದೆ. ಇದನ್ನು ಬೈನರಿ ಮಾನ್ಯತೆ ಎನ್ನಲಾಗುತ್ತದೆ.

ಆಸ್ತಿ ವಿವಾದ: ಅಮೆರಿಕದಿಂದ ಬಂದು 70 ಬಾರಿ ಇರಿದು ಅಜ್ಜನ ಕೊಂದ ಮೊಮ್ಮಗ

ಹೈದರಾಬಾದ್, ಫೆ.9–ಆಸ್ತಿ ವಿವಾದದಿಂದಾಗಿ ಹೈದರಾಬಾದ್‌ನ ಉದ್ಯಮಿ 86 ವರ್ಷದ ವಿ.ಸಿ. ಜನಾರ್ದನ ರಾವ್ ಅವರನ್ನು ಅವರ ಮೊಮ್ಮಗನೇ 70 ಬಾರಿ ಇರಿದು ಕೊಂದಿದ್ದಾನೆ ಎಂದು ಆರೋಪಿಸಲಾಗಿದೆ. ಕೊಲೆಯಾದ ವಿ.ಸಿ. ಜನಾರ್ದನ ರಾವ್ ಅವರು ಹೈದರಾಬಾದ್ ಮೂಲದ ವೆಲ್‌ಜಾನ್ ಎಂಬ ಸಮೂಹ ಸಂಸ್ಥೆಯನ್ನು ಕಟ್ಟಿ ಬೆಳೆಸಿದ್ದರು. ಅದರ ಮುಖ್ಯಸ್ಥರಾಗಿದ್ದರು. ಈ ಘಟನೆ ಫೆ.6ರಂದು ರಾತ್ರಿ ಹೈದರಾಬಾದ್‌ನ ಪಂಜಾಗುಟ್ಟಾ ಪೊಲೀಸ್ ಠಾಣೆಯ ವ್ಯಾಪ್ತಿಯ ಸೋಮಾಜಿಗುಡ್ಡದಲ್ಲಿ ನಡೆದಿದೆ. ಘಟನೆಗೆ ಸಂಬಂಧಿಸಿದಂತೆ ವಿ.ಸಿ.ಜನಾರ್ದನ ರಾವ್ ಅವರ ಮೊಮ್ಮಗ (ಮಗಳ ಮಗ) ಕೆ.ಕೀರ್ತಿ ತೇಜಾ ಎನ್ನುವವನ್ನು ಪಂಜಾಗುಟ್ಟಾ ಪೊಲೀಸರು ಬಂಧಿಸಿದ್ದಾರೆ.

ಫೆ.6ರಂದು ರಾತ್ರಿ ತನ್ನ ತಾಯಿ ಜೊತೆ ಅಜ್ಜನ ಮನೆಗೆ ಬಂದಿದ್ದ ಕೀರ್ತಿ ತೇಜಾ ಆಸ್ತಿ ವಿಚಾರವಾಗಿ ಅಜ್ಜನ ಜೊತೆ ವಾಗ್ವಾದ ನಡೆಸಿದ್ದಾನೆ. ಈ ವೇಳೆ ಕೀರ್ತಿಯ ತಾಯಿ ಕಾಫಿ ತರಲು ಅಡುಗೆ ಮನೆಗೆ ಹೋಗಿದ್ದರು. ಆಗ ವಾಗ್ವಾದ ಜೋರಾಗಿ ಜನಾರ್ದನ್‌ರಾವ್ ಅವರಿಗೆ 70 ಬಾರಿ ಇರಿದು ಹತ್ಯೆ ಮಾಡಿ ಕೀರ್ತಿ ಪರಾರಿಯಾಗಿದ್ದ. ಶುಕ್ರವಾರ ಸಂಜೆ ಆತನನ್ನು ಬಂಧಿಸಲಾಗಿದೆ ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ. ಉನ್ನತ ವ್ಯಾಸಂಗಕ್ಕೆ ಅಮೆರಿಕಕ್ಕೆ ತೆರಳಿದ್ದ ಕೀರ್ತಿ ವ್ಯಾಸಂಗ ಮುಗಿಸಿ ಇತ್ತೀಚೆಗೆ ಹೈದರಾಬಾದ್‌ಗೆ ಬಂದಿದ್ದ ಎನ್ನಲಾಗಿದೆ.

ನಮ್ಮವರೇ ದ್ವೇಷ ಸಾಧಿಸಿ ಶತ್ರುವನ್ನು ಬಲಿಷ್ಠ ಮಾಡಿದ್ದಾರೆ



ರಾಜಣ್ಣ

ದಾವಣಗೆರೆ, ಫೆ.9– ಕಾಂಗ್ರೆಸ್‌ನವರೇ ದ್ವೇಷ ಸಾಧಿಸಿ ಶತ್ರುವನ್ನು ಬಲಿಷ್ಠ ಮಾಡಿದ್ದಾರೆ ಎಂದು ಸಚಿವ ಕೆ.ಎನ್.ರಾಜಣ್ಣ ಹೈಕಮಾಂಡ್ ವಿರುದ್ಧ ವಾಗ್ದಾಳಿ ನಡೆಸಿದರು. ದಾವಣಗೆರೆಯಲ್ಲಿ ಮಾತನಾಡಿದ ಅವರು, ದೆಹಲಿ ಚುನಾವಣೆಯಲ್ಲಿ ಕಾಂಗ್ರೆಸ್ ಶೂನ್ಯ ಸಂಪಾದಿಸಿದ ಕುರಿತು ವಿಚಾರವಾಗಿ, ಏನೇ ಇದ್ದರೂ ತಪ್ಪನ್ನೇ ಮುಂದಿಟ್ಟುಕೊಂಡು ಶತ್ರುವನ್ನು ಬಲಿಷ್ಠ ಮಾಡಬಾರದು. ಈಗ ದೆಹಲಿಯಲ್ಲಿ ಆಗಿದೆ, ಹಿಂದೆ ಹರಿಯಾಣದಲ್ಲಿ ಆಗಿತ್ತು. ಇಬ್ಬರಿಗೂ ಜಂಭ ಇದೆ. ಹೀಗಾಗಿ ಸೋಲಾಗಿದೆ. ರಾಷ್ಟ್ರ ರಾಜಕಾರಣವನ್ನು ಅರಿತು ಶತ್ರುವನ್ನು ಸೋಲಿಸಬೇಕು. ಜಾತ್ಯಾತೀತರು ಒಂದಾಗಿ, ಜಾತಿಯನ್ನು ಸೋಲಿಸಬೇಕು ಎಂದು ಕಿಡಿಕಾರಿದರು. ಮತ ವಿಭಜನೆಯಿಂದ ಬಿಜೆಪಿ ಗೆದ್ದಿದೆ. ಇಲ್ಲಿ ರಾಜಕೀಯ ಜಂಜಾಟವಿದೆ. ನಮ್ಮವರೇ ದ್ವೇಷ ಸಾಧಿಸಿಕೊಂಡು ಶತ್ರುವನ್ನು ಬಲಿಷ್ಠ ಮಾಡಿದ್ದಾರೆ ಎಂದರು.

'ವಿವೇಕ ಭಾಷಣ' ಸ್ಪರ್ಧಾ ವಿಜೇತರಿಗೆ ಬಹುಮಾನ ವಿತರಣೆ



ಸ್ವಾಮಿ ವಿವೇಕಾನಂದರ 163ನೇ ಜನ್ಮದಿನದ ಅಂಗವಾಗಿ ಟೀಂ ಮೈಸೂರು ವತಿಯಿಂದ ಏರ್ಪಡಿಸಿದ್ದ 'ವಿವೇಕ ಭಾಷಣ ಸ್ಪರ್ಧೆ'ಯ ವಿಜೇತರಿಗೆ ಬಹುಮಾನ ಪ್ರದಾನ ಮಾಡಲಾಯಿತು.

ಮೈಸೂರು, ಫೆ.9(ಎಸ್‌ಬಿಡಿ)– ಸ್ವಾಮಿ ವಿವೇಕಾನಂದರ 163ನೇ ಜನ್ಮದಿನದ ಅಂಗವಾಗಿ ಟೀಂ ಮೈಸೂರು ವತಿಯಿಂದ ಏರ್ಪಡಿಸಿದ್ದ 'ವಿವೇಕ ಭಾಷಣ ಸ್ಪರ್ಧೆ'ಯ ವಿಜೇತರಿಗೆ ಬಹುಮಾನ ಪ್ರದಾನ ಮಾಡಲಾಯಿತು. ನಗರದ ಶ್ರೀ ರಾಮಕೃಷ್ಣ ಆಧ್ಯಾತ್ಮಿಕ ಮತ್ತು ನೈತಿಕ ಶಿಕ್ಷಣ ಸಂಸ್ಥೆ (ರಿಮ್ಸೆ) ಆವರಣದಲ್ಲಿ ಸ್ವಾಮಿ ಅಘಹರಾನಂದಜೀ ಮಹಾರಾಜ್ ಅವರ ಸಾನಿಧ್ಯದಲ್ಲಿ ನಡೆದ ಸಮಾರಂಭದಲ್ಲಿ ಸದ್ವಿದ್ಯಾ ಶಾಲೆಯ ಮುಕುಂದ ದೀಪಮನ್ಯು(ಪ್ರಥಮ), ವಿಜಯವಿಠಲ ಶಾಲೆಯ ಚಾರ್ವಿ ಶೆಟ್ಟಿ (ದ್ವಿ), ಇದೇ ಶಾಲೆಯ ಎಸ್.ಪೂರ್ವಿಕ(ತೃ), ಬೆಟ್ಟದಪುರ ಎಸ್‌ಎಂಎಸ್ ಶಾಲೆಯ ರೋಜಾ ಹಾಗೂ ಹುಣಸೂರು ಸರ್ಕಾರಿ ಶಾಲೆಯ ಪುಣ್ಯ ಶಾಸ್ತ್ರಿ(ಸಮಾಧಾನಕರ) ಅವರಿಗೆ ಬಹುಮಾನ ವಿತರಿಸಲಾಯಿತು.

ವಿಜೇತರಿಗೆ ಕ್ರಮವಾಗಿ 5 ಸಾವಿರ ರೂ., 3 ಸಾವಿರ, 2 ಸಾವಿರ ರೂ. ಹಾಗೂ 500 ರೂ. ನಗದು ಬಹುಮಾನದೊಂದಿಗೆ ನೆನಪಿನ ಕಾಣಿಕೆ ನೀಡಿ, ಅಭಿನಂದಿಸಲಾಯಿತು. ಹಾಗೆಯೇ ಸ್ಪರ್ಧೆಯಲ್ಲಿ ಭಾಗವಹಿಸಿದ್ದ ಜಿಲ್ಲೆಯ ಎಲ್ಲಾ 42 ವಿದ್ಯಾರ್ಥಿಗಳಿಗೂ ಪ್ರಮಾಣ ಪತ್ರ ವಿತರಿಸಲಾಯಿತು.

ಈ ವೇಳೆ ಸ್ವಾಮಿ ಅಘಹರಾನಂದಜೀ ಮಹಾರಾಜ್ ಅವರು ಮಾತನಾಡಿ, ಯಶಸ್ಸು ಕೇವಲ ಒಂದು ಕ್ಷೇತ್ರಕ್ಕೆ ಸೀಮಿತವಾದುದಲ್ಲ. ಅಂದುಕೊಂಡ ಸತ್ಕಾರ್ಯವನ್ನು ಸನ್ಮಾರ್ಗದಲ್ಲಿ ಪೂರೈಸುವುದು ಕೂಡ ಯಶಸ್ಸು ಎನ್ನುವುದನ್ನು ಅರಿಯಬೇಕು. ಯಶಸ್ಸು ಎಂಬುದರ ವಿಶಾಲಾರ್ಥವನ್ನು ಮಕ್ಕಳಿಗೆ ಅರ್ಥ ಮಾಡಿಸುವುದು ಪೋಷಕರಿಂದ ಮಾತ್ರ ಸಾಧ್ಯ. ಮೌಲ್ಯಯುತವಾಗಿ ಬದುಕುವುದನ್ನು ಮಕ್ಕಳಿಗೆ ಕಲಿಸಿಕೊಡಬೇಕು ಎಂದು ಸಲಹೆ ನೀಡಿದರು.

ಪಿರಿಯಾಪಟ್ಟಣ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ಎಚ್.ಎನ್.ರವಿ ಮಾತನಾಡಿ, ಸ್ವಾಮಿ ವಿವೇಕಾನಂದರು ಜಗತ್ತಿಗೆ ನೀಡಿದ ಮಹತ್ತರ ಕೊಡುಗೆ ಜೊತೆಗೆ ಶ್ರೀರಾಮಕೃಷ್ಣ ಆಶ್ರಮದ ಧ್ಯೇಯೋದ್ದೇಶಗಳನ್ನು ತಿಳಿಸಿದರು.

ಸ್ಪರ್ಧೆಯ ತೀರ್ಪುಗಾರರಾಗಿದ್ದ ಶ್ರೀ ರಾಮಕೃಷ್ಣ ವಿದ್ಯಾಶಾಲೆಯ ಕನ್ನಡ ಉಪನ್ಯಾಸಕ ಸಿ.ಎಸ್.ರಾಘವೇಂದ್ರ ಮಾತನಾಡಿ, ಬಹುಮಾನಕ್ಕಿಂತ ಭಾಗವಹಿಸುವಿಕೆ ಬಹಳ ಮುಖ್ಯ. ಒಂದಿಲ್ಲೊಂದು ರೀತಿಯಲ್ಲಿ ಸ್ವಾಮಿ ವಿವೇಕಾನಂದರ ಆದರ್ಶಗಳನ್ನು ತಮ್ಮ ಬದುಕಿನಲ್ಲಿ ಅಳವಡಿಸಿಕೊಳ್ಳುವ ಪ್ರಯತ್ನ ಮಾಡಬೇಕು ಎಂದರು.

ಕಾರ್ಯಕ್ರಮದಲ್ಲಿ ಟೀಂ ಮೈಸೂರು ಸಂಘಟನೆಯ ಸದಸ್ಯರಾದ ಹಿರಿಯಣ್ಣ, ಪ್ರಸನ್ನರಾಜ್, ಗುರು, ಗೋಕುಲ್ ಗೋವರ್ಧನ್, ಮುರಳಿ, ಬಾಲಕೃಷ್ಣ, ಕಿರಣ್ ಜೈರಾಮ್ ಗೌಡ, ಹೇಮಂತ್, ಅನಿಲ್ ಜೈನ್, ಬಸವರಾಜು, ಗಣೇಶ್, ಶಾಂತಕುಮಾರಿ, ತ್ರಿಮೂರ್ತಿ, ಸುಧಾ ಗೌರವ್ ಮುರಳಿ, ಜ್ಯೋತಿ ರಾಮಪ್ರಸಾದ್, ಉಮಾ ಹಿರಿಯಣ್ಣ, ಯಶ್ವಂತ್, ಬಸವರಾಜ್, ಸುಕೃತ ಮತ್ತಿತರರು ಉಪಸ್ಥಿತರಿದ್ದರು.

ನಕ್ಕರೆ ಅದೇ ಸ್ವರ್ಗ

ಗುಂಡ ಬಾರ್‌ನಲ್ಲಿ ಕುಳಿತು ಅಳ್ತಾ ಇದ್ದ
ವೇಟರ್ : ಯಾಕೆ ಅಳ್ತಿದ್ದೀರಾ?
ಗುಂಡ : ಒಂದು ಹುಡುಗಿನ ಮರಿಬೇಕು ಅಂತ ಇದ್ದೆ, ಆದ್ರೆ ಆ ಹುಡುಗಿ ಯಾರು ಅಂತ ನೆನಪಿಗೆ ಬರ್ತಾ ಇಲ್ಲ ಅದಕ್ಕೆ!

ಮೈಸೂರು ಮಿತ್ರ
ಸೋಮವಾರ, 10 ಫೆಬ್ರವರಿ 2025
ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ..........

'ಯಾರಿಗೂ ನೋವು ನೀಡದೆ ಬದುಕಬೇಕು. ನಮ್ಮ ಜೀವನದಲ್ಲಿ ಎಷ್ಟೋ ನೋವಿದ್ದರೂ ಯಾರಿಗೂ ತಿಳಿಸದೆ ಬದುಕಬೇಕು'

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಒಂದು ಕಣ್ಣಿಗೆ ಬೆಣ್ಣೆ, ಇನ್ನೊಂದು ಕಣ್ಣಿಗೆ ಸುಣ್ಣ

ನಿಮ್ಮ ಪತ್ರಗಳು

■ ಚಿನ್ನ, ಬೆಳ್ಳಿ ದರ ಏರಿಕೆಗೆ ಕಡಿವಾಣ ಬೀಳಬೇಕಿದೆ!

ಮಾನ್ಯರೆ,

ಪ್ರತಿಯೊಬ್ಬರೂ ಇಷ್ಟಪಡುವ ವಸ್ತುಗಳಲ್ಲಿ ಚಿನ್ನ ಮೇಲ್ಪಂಕ್ತಿಯಲ್ಲಿ ನಿಲ್ಲುವುದರಲ್ಲಿ ಸಂಶಯವಿಲ್ಲ. ಅದರಲ್ಲೂ ಭಾರತ ಜಗತ್ತಿನಲ್ಲಿ ಅತಿ ಹೆಚ್ಚು ಚಿನ್ನ ಹೊಂದಿರುವ ದೇಶಗಳಲ್ಲಿ ಒಂದು. ಎಲ್ಲಾ ವರ್ಗದ ಜನರು ಆಸೆಪಟ್ಟು ಖರೀದಿಸುವ ವಸ್ತುಗಳಲ್ಲಿ ಬಂಗಾರ ಪ್ರಮುಖವಾಗಿದೆ. ನಮ್ಮಂತ ಮಧ್ಯಮ ವರ್ಗದ ಜನರು ಪೈಸೆ ಪೈಸೆ ಕೂಡಿಟ್ಟು ಚಿನ್ನ ಕೊಳ್ಳೋದಕ್ಕೆ ಆದ್ಯತೆ ನೀಡುತ್ತಾರೆ. ಅಂತಹ ಚಿನ್ನ



ಬರೀ ಚಿನ್ನವಾಗಿರದೇ, ಆಪತ್‌ಕಾಲದ ಬಂಧು ಕೂಡ ಹೌದು. ಯಾವುದೇ ಹಣದ ಸಮಸ್ಯೆ ಬಂದರೂ ಚಿನ್ನ ಅಡವಿಟ್ಟು, ಮಾರಿಯಾದರೂ ಹಣ ಪಡೆದುಕೊಳ್ಳಬಹುದು ಎಂಬುದು ನಮ್ಮಂತ ಮಧ್ಯಮ ವರ್ಗದವರ ಉದ್ದೇಶ ಕೂಡ ಹೌದು. ಹೀಗಾಗಿಯೇ ಇಂದು ಚಿನ್ನ ಪ್ರಮುಖ ಲೋಹವಾಗಿ ಗುರುತಿಸಿಕೊಂಡಿದೆ.

ಆದರೆ ಇಂತಹ ಚಿನ್ನ ಇತ್ತೀಚಿನ ದಿನಗಳಲ್ಲಿ ಯಾರೂ ಊಹಿಸದ ರೀತಿಯಲ್ಲಿ ತನ್ನ ಬೆಲೆಯನ್ನು ಹೆಚ್ಚಿಸಿಕೊಳ್ಳುತ್ತಿದೆ. ಬಂಗಾರ ಪ್ರಿಯರಿಗೆ ಶಾಕ್ ಮೇಲೆ ಶಾಕ್ ನೀಡುತ್ತಿದೆ. ಅದರಲ್ಲೂ ಈ ಜನವರಿಯಿಂದ ಮೇವರೆಗೂ ಮದುವೆ ಸಮಾರಂಭಗಳು ಇದ್ದು, ಈ ಸಂದರ್ಭದಲ್ಲಿ ಚಿನ್ನಾಭರಣಗಳ ಬೆಲೆ ಹೆಚ್ಚಳವಾಗುತ್ತಿರುವುದು ಬಡ ಹಾಗೂ ಮಧ್ಯಮ ವರ್ಗದ ಜನರನ್ನು ಸಂಕಷ್ಟಕ್ಕೆ ಸಿಲುಕಿಸಿದೆ.

ಬೆಳ್ಳಿ ಕೂಡ ಪೂಜನೀಯ ಲೋಹವಾಗಿ ಬಳಕೆಯಲ್ಲಿದ್ದು, ಬೆಳ್ಳಿಯ ಅನೇಕ ಪರಿಕರಗಳನ್ನು ದಿನಬಳಕೆಯಲ್ಲಿ ಜನ ಬಳಸುತ್ತಿದ್ದಾರೆ. ಬೆಳ್ಳಿಯ ಕಾಲ್ಗೆಜ್ಜೆ, ಬೆಳ್ಳಿಯ ಆಭರಣಗಳು, ಪೂಜಾ ಸಾಮಗ್ರಿ ಎಂದು ಬೆಳ್ಳಿಯ ವಸ್ತುಗಳನ್ನು ಗ್ರಾಹಕರು ಖರೀದಿಸುತ್ತಾರೆ. ಇಂತಹ ಬೆಳ್ಳಿ ಕೂಡ ಚಿನ್ನದ ಹಿಂದೆಯೇ ತನ್ನ ಬೆಲೆಯನ್ನು ಭರ್ಜರಿಯಾಗಿಯೇ ಏರಿಸಿಕೊಂಡಿದ್ದು, ಅದು ಕೂಡ ನಾಗಾಲೋಟದಿಂದ ಓಡುತ್ತಿದೆ.

ದಿನದಿಂದ ದಿನಕ್ಕೆ ಹಾಗೂ ವಾರದಿಂದ ವಾರಕ್ಕೆ ಏರಿಕೆಯಾಗುತ್ತಿರುವ ಈ ಚಿನ್ನ ಹಾಗೂ ಬೆಳ್ಳಿಯ ದರಗಳಿಗೆ ಕಡಿವಾಣ ಹಾಕಿ, ಬಡ ಹಾಗೂ ಮಧ್ಯಮ ವರ್ಗದ ಜನರ ಕೈಗೆ ಎಟುಕುವ ನಿಟ್ಟಿನಲ್ಲಿ ಚಿನ್ನ ಹಾಗೂ ಬೆಳ್ಳಿಯ ದರಗಳಲ್ಲಿ ಸ್ಥಿರತೆಯನ್ನು ಕಾಪಾಡುವುದು ಅವಶ್ಯಕವಾಗಿದೆ. **–ಹರಳಹಳ್ಳಿ ಪುಟ್ಟರಾಜು, ಪಾಂಡವಪುರ.**

■ ಮಣ್ಣು ತೆಗೆಯದ ಪಾಲಿಕೆ?



ಮಾನ್ಯರೆ,

ಮೈಸೂರಿನ ಚಾಮರಾಜಪುರಂ ಬಡಾವಣೆಯ ವಿಷ್ಣುವರ್ಧನ ರಸ್ತೆ– ದೇವಪಾರ್ಥಿವ ರಸ್ತೆಯ ನಡುವಿನ ಮ್ಯಾನ್‌ಹೋಲ್ ಕಾಮಗಾರಿಯನ್ನು ಪೂರ್ಣಗೊಳಿಸಿದ ಪಾಲಿಕೆ ಅಗೆದ ಮಣ್ಣನ್ನು, ಬಳಸಿದ ನಿರ್ಮಾಣ ಸಾಮಗ್ರಿಗಳನ್ನು ಕೆಲಸ ಮುಗಿದು ವಾರವಾದರೂ ತೆರವುಗೊಳಿಸದೆ ಇರುವುದರಿಂದ ಜನರ ಹಾಗೂ ವಾಹನ ಸಂಚಾರಕ್ಕೆ ತೊಂದರೆಯಾಗಿದೆ. ಆದಷ್ಟು ಬೇಗ ತ್ಯಾಜ್ಯ ವಸ್ತುಗಳನ್ನು ತೆರವುಗೊಳಿಸಲು ಪಾಲಿಕೆಗೆ ಈ ಮೂಲಕ ವಿನಂತಿಸಿಕೊಳ್ಳುತ್ತೇನೆ. **–ಕೊ.ಸು.ನರಸಿಂಹಮೂರ್ತಿ, ಹಿರಿಯ ನಾಗರಿಕ, ಚಾಮರಾಜಪುರಂ. ಮೈಸೂರು.**

■ ಗ್ಯಾಸ್ ಸಿಲಿಂಡರ್ ಪೂರೈಕೆ ಆಟೋಗಳಿಗೆ ಜಿಪಿಎಸ್, ಕ್ಯಾಮರಾ ಅಳವಡಿಸಿ

ಮಾನ್ಯರೆ,

ಗೃಹ ಬಳಕೆ ಸಿಲಿಂಡರ್‌ಗಳಿಂದ ವಾಣಿಜ್ಯ ಸಿಲಿಂಡರ್‌ಗಳಿಗೆ ಗ್ಯಾಸ್ ತುಂಬಿ ಅಕ್ರಮವಾಗಿ ಬಳಕೆ ಮಾಡುತ್ತಿದ್ದಾರೆ. ಇದನ್ನು ತಡೆಯಲು ಗ್ರಾಹಕರು, ಅದು ಸರಿಯಾಗಿದೆಯೇ ಎಂದು ಖಚಿತಪಡಿಸಿಕೊಳ್ಳಲು ಸೀಲ್ ಪರಿಶೀಲಿಸಬೇಕು. ಖಾಲಿ ಸಿಲಿಂಡರ್ ಹಾಗೂ ಪೂರ್ತಿ ಸಿಲಿಂಡರ್



ತೂಕ ಪರಿಶೀಲಿಸಬೇಕು. ಶಾಂಪೂ ಅಥವಾ ಸಾಬೂನು ನೀರು ಹಾಕಿ ಲೀಕ್ ಪರಿಶೀಲಿಸಬೇಕು ಎಂದು ಗ್ರಾಹಕ ದಕ್ಷತಾ ಕಲ್ಯಾಣ ಫೌಂಡೇಶನ್ ಆಗ್ರಹಪಡಿಸಿರುವುದು ಫೆ.8ರ 'ಮೈಸೂರು ಮಿತ್ರ'ದಲ್ಲಿ ವರದಿಯಾಗಿದೆ.

ಗ್ಯಾಸ್ ಸಿಲಿಂಡರ್ ಸರಬರಾಜು ಮಾಡಿದಾಗ ಪ್ರತಿ ಮನೆಯಿಂದ ಬಿಲ್‌ಗಿಂತಲೂ ಹೆಚ್ಚುವರಿಯಾಗಿ 50 ರೂ. ಗಳವರೆಗೂ ವಸೂಲಿ ಮಾಡುತ್ತಾರೆ. ಇದನ್ನೇ ಕಟ್ಟುನಿಟ್ಟಾಗಿ ತಡೆಗಟ್ಟಲು ಗ್ಯಾಸ್ ಏಜನ್ಸಿಯವರಾಗಲಿ, ಜಿಲ್ಲಾಧಿಕಾರಿಗಳಾಗಲಿ, ಗ್ಯಾಸ್ ಸರಬರಾಜು ಸಂಸ್ಥೆಯಾಗಲಿ ಕ್ರಮ ವಹಿಸಿರುವುದಿಲ್ಲ. ಗ್ಯಾಸ್ ಸಿಲಿಂಡರ್ ಲೀಕ್ ಚೆಕ್ ಮಾಡುತ್ತೇವೆ ಎಂದು ಆಟೋದವರೇ ಸೀಲ್ ಓಪನ್ ಮಾಡುತ್ತಾರೆ. ಅದು ಮೊದಲೇ ಓಪನ್ ಇತ್ತೇ, ಎನ್ನುವುದು ಗ್ರಾಹಕರಿಗೆ ತಿಳಿಯುವುದಿಲ್ಲ. ಆದ್ದರಿಂದ ಸೀಲ್ ಮಾಡುವ ಕ್ರಮವನ್ನು ಬದಲಾಯಿಸುವ ಅಗತ್ಯವಿದೆ.

ಗ್ಯಾಸ್ ಅಕ್ರಮ ರೀಫಿಲ್ ಮಾಡುವ ದಂಧೆಯಲ್ಲಿ ಗ್ಯಾಸ್ ಏಜನ್ಸಿಯವರು, ಗ್ಯಾಸ್ ಸರಬರಾಜು ಮಾಡುವ ಆಟೋದವರು ಶಾಮಿಲಾಗಿದ್ದಾರೆಯೇ ಎನ್ನುವ ಬಗ್ಗೆ ಗ್ಯಾಸ್ ಕಂಪನಿಗಳು, ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯವರು, ಜಿಲ್ಲಾಧಿಕಾರಿಗಳು ಸೂಕ್ತ ತನಿಖೆ ಮಾಡಿ ಕ್ರಮ ಕೈಗೊಳ್ಳಬೇಕು. ಗ್ಯಾಸ್ ಗೋಡೌನ್‌ಗಳಲ್ಲಿ ಸಿಸಿ ಕ್ಯಾಮರಾ ಅಳವಡಿಸಿ ನಿಗಾವಹಿಸಬೇಕು. ಗ್ಯಾಸ್ ಸರಬರಾಜು ಮಾಡುವ ಆಟೋಗಳಿಗೆ ಸಿಸಿ ಕ್ಯಾಮರಾ, ಜಿಪಿಎಸ್ ಅಳವಡಿಸಿ ನಿಗಾ ವಹಿಸುವ ಕ್ರಮವಾಗಬೇಕು. ಯಾವುದೇ ಅವ್ಯವಹಾರಗಳಿಗೆ ಗ್ಯಾಸ್ ಏಜನ್ಸಿಯವರನ್ನೇ ಹೊಣೆಗಾರರನ್ನಾಗಿ ಮಾಡಬೇಕು. **–ಮುಳ್ಳೂರು ಪ್ರಕಾಶ್, ಕನಕದಾಸನಗರ, ಮೈಸೂರು.**

ನಡೆದಾಡದ ಜೀವನ ಶೈಲಿ ದುರಂತವೇ ಸರಿ...!

ಅಭಿವೃದ್ಧಿ.. ಅಭಿವೃದ್ಧಿ.... ಅಭಿವೃದ್ಧಿ..... ಎನ್ನುವುದು ನಮ್ಮ ನಿತ್ಯದ ಮಂತ್ರವಾಗಿದೆ. ಇದು ರಾಜಕೀಯ ನಾಯಕರ ಕೂಗಾಗಿದೆ. ಸರ್ಕಾರಗಳು ಯಾವುದೇ ಇರಲಿ ಇದಕ್ಕೆ ಒತ್ತು ಕೊಡದೆ ಇರುವುದಿಲ್ಲ. ಅಭಿವೃದ್ಧಿ ಹೆಸರಲ್ಲಿ ರಸ್ತೆಗಳು, ಕಟ್ಟಡಗಳು, ರೈಲು ಮಾರ್ಗಗಳು, ವಾಯುಮಾರ್ಗಗಳು ದೇಶದೆಲ್ಲೆಡೆ ತಮ್ಮ ಜಾಲವನ್ನು ಹರಡಿಕೊಂಡಿವೆ. ನಿತ್ಯವೂ ಅಭಿವೃದ್ಧಿ ಕಾಮಗಾರಿಗಳು ಹೆಚ್ಚಿನ ಪ್ರಮಾಣದಲ್ಲಿ ನಡೆಯುತ್ತಿವೆ. ಇತ್ತೀಚೆಗೆ ಹೊಸ ರಸ್ತೆಗಳ ನಿರ್ಮಾಣ, ನಿರ್ವಹಣೆ ಮತ್ತು ರಸ್ತೆಯ ತಾಂತ್ರಿಕತೆ ಊಹಿಸಲಾರದ ಮಟ್ಟಕ್ಕೆ ಬೆಳೆದಿದೆ. ಈ ಕುರಿತು ಸಂಶೋಧನೆಗಳು ನಿರಂತರವಾಗಿ ನಡೆಯುತ್ತಲಿವೆ.

ಕೇವಲ ಮೂವತ್ತು ವರ್ಷಗಳ ಹಿಂದೆ ಇದ್ದ ರಸ್ತೆಗಳಿಗೂ ಇವತ್ತಿನ ರಸ್ತೆಗಳಿಗೂ ತುಲನೆ ಮಾಡಿದರೆ ಅವುಗಳಲ್ಲಿ ಆಗಿರುವ ತಾಂತ್ರಿಕ ಬದಲಾವಣೆ ಅಗಾಧವಾದುದ್ದು. ಒಂದು ಅಥವಾ ಎರಡು ಲೇನ್ ಇದ್ದ ಡಾಂಬರು ರಸ್ತೆಗಳು ಹತ್ತು ಲೇನ್‌ವರೆಗೂ ಏರಿವೆ. ಮುಖ್ಯ ರಸ್ತೆಗಳಿಂದ ಹಿಡಿದು ಹಳ್ಳಿಹಳ್ಳಿಯಲ್ಲಿನ ಬಡಾವಣೆ ರಸ್ತೆಗಳು, ಸಣ್ಣಪುಟ್ಟ ಗಲ್ಲಿಗಳು ಕೂಡ ಕಾಂಕ್ರೀಟ್ ರಸ್ತೆಗಳಾಗಿವೆ. ದೇಶದ ಉದ್ದಗಲಕ್ಕೂ ರಸ್ತೆಗಳು ಅಗಲೀಕರಣಗೊಳ್ಳಲು ಫಲವತ್ತಾದ ಭೂಮಿಯನ್ನು ಬಗೆದು, ಇಕ್ಕೆಲಗಳಲ್ಲಿನ ಕಟ್ಟಡಗಳನ್ನು ಕೆಡವಿ ನುಂಗುತ್ತಿವೆ. ನಿರ್ಮಾಣದ ಹೆಸರಿನಲ್ಲಿ ಭ್ರಷ್ಟರೂ ಕೂಡ ಪರ್ಸಂಟೇಜ್ ಲೆಕ್ಕದಲ್ಲಿ ನೆಕ್ಕುವುದುಂಟು. ಕೇಂದ್ರ ಮತ್ತು ರಾಜ್ಯ ಸರ್ಕಾರಗಳಲ್ಲಿ ರಸ್ತೆ ನಿರ್ಮಾಣ ಮತ್ತು ನಿರ್ವಹಣೆಗಾಗಿ ಅನೇಕ ಯೋಜನೆಗಳಿವೆ. ಇದಕ್ಕಾಗಿ ಪ್ರತೀ ವರ್ಷ ಲಕ್ಷಾಂತರ ಕೋಟಿ ಹಣವನ್ನು ಖರ್ಚು ಮಾಡುತ್ತಿದೆ, ದಿನಂಪ್ರತಿ 36.50 ಕಿ.ಮೀ ಉದ್ದದ ಹೆದ್ದಾರಿ ರಸ್ತೆಗಳು ದೇಶದಲ್ಲಿ ನಿರ್ಮಾಣವಾಗುತ್ತಿದೆ. ರಸ್ತೆಗಳ ಜಾಲವನ್ನು ಹೊಂದಿರುವುದರಲ್ಲಿ ವಿಶ್ವದಲ್ಲಿ ಭಾರತವು ಎರಡನೇ ಸ್ಥಾನದಲ್ಲಿದೆ.

ವಾಹನಗಳು ಇಲ್ಲದ ಕಾಲದಲ್ಲಿ ರಸ್ತೆಗಳು ಇರಲಿಲ್ಲ, ಇತಿಹಾಸ ಹೇಳುವಂತೆ ಕಾಲುಗಳೇ ಮನುಷ್ಯನಿಗೆ ಸಂಚರಿಸುವ ಸಾಧನವಾಗಿತ್ತು. ಆಗಿದ್ದ ಕಾಲುದಾರಿಗಳು ಸ್ಥಳಗಳನ್ನು ಸಂಪರ್ಕಿಸುವ ರಸ್ತೆಗಳಾಗಿದ್ದವು. ಒಂದೆಡೆಯಿಂದ ಮತ್ತೊಂದೆಡೆಗೆ ಪ್ರಯಾಣಿಸಲು ಕತ್ತೆ, ಕುದುರೆಗಳನ್ನು, ಎತ್ತಿನಗಾಡಿಗಳನ್ನು ಅವಲಂಬಿಸಿದ್ದರು. ಅಂದಿನ ದಿನಗಳಲ್ಲಿ ದೂರದ ಊರುಗಳ ಸಂಪರ್ಕ ಕಡಿಮೆಯೇ, ಅದರಲ್ಲೂ ವಿದೇಶಗಳೆಂದರೆ ಕನಸಿನ ಮಾತು. ತಾಲೂಕು ಕೇಂದ್ರಗಳೇ ಹಳ್ಳಿಯ ಮುಗ್ಧರಿಗೆ ವಿದೇಶಗಳಾಗಿದ್ದವು.

ಇಂದು ಕಾಲ ಬದಲಾಗಿದೆ. ಜನಸಂಖ್ಯೆಗಿಂತ ವಾಹನಗಳ ಸಂಖ್ಯೆ ಹೆಚ್ಚಾಗಿವೆ. ಅವುಗಳು ಸಂಚರಿಸಲು ವಿಶಾಲವಾದ ರಸ್ತೆಗಳು ಮತ್ತು ಅಷ್ಟೇ ಪ್ರಮಾಣದಲ್ಲಿ ಏರಿಕೆ ಆಗಿರುವ ಅಪಘಾತಗಳು. ಮನೆಯಿಂದ ಹೊರಗೆ ಹೋದವರು ಕ್ಷೇಮವಾಗಿ ವಾಪಸ್ಸು ಬರುವ ಗ್ಯಾರಂಟಿ ಯಾರಿಗೂ ಇಲ್ಲ. ಎಲ್ಲಿ? ಯಾವಾಗ? ಹೇಗೆ? ಅಪಘಾತಗಳು ಸಂಭವಿಸುತ್ತವೆ ಎಂಬುದು ತಿಳಿಯದು. ಫುಟ್‌ಪಾತ್‌ನಲ್ಲಿ ನಡೆದುಕೊಂಡು ಹೋಗುತ್ತಿದ್ದರೂ ವಾಹನಗಳು ಬಂದು ಗುದ್ದುತ್ತಿವೆ. ಇಂದು ಹುಟ್ಟುವ ಮಗುವಿನಿಂದ ಮುದುಕರವರೆಗೆ ಜೀವವಿಮಾ ಇರಲೇಬೇಕು. ಏಕೆಂದರೆ ಚಲಿಸುವ ವಾಹನದಡಿ ಸಿಲುಕಿ ಯಾವ ಗಳಿಗೆಯಲ್ಲಿ ಅಪ್ಪಚ್ಚಿಯಾಗಿ ರಕ್ತದ ಮಡುವಿನಲ್ಲಿ ಮುಳುಗಿ ಸಾಯುತ್ತೇವೆಯೋ?. ಯಾರೂ ಹಾಗಾಗುವುದು ಬೇಡ, ಎಲ್ಲರೂ ಕ್ಷೇಮದಿಂದ ಆರೋಗ್ಯರಾಗಿ ದೀರ್ಘಾಯುಷಿಗಳಾಗಿ ಸ್ವಾಭಾವಿಕ ಸಾವನ್ನು ಕಾಣಲಿ, ಹಾಗಂತ ಬ್ರಹ್ಮಲಿಖಿತ ಹಣೆಬರಹವನ್ನು ತಿದ್ದಲಾಗುವುದೇ?

ಎಲ್ಲಾ ಅವಘಡಗಳಿಗೂ ನಾವೇ ಕಾರಣ. ನಡೆಯುವುದಕ್ಕಾಗಿ ದೇವರು ಕೊಟ್ಟಿರುವ ಕಾಲುಗಳನ್ನು ಮರೆತುಬಿಟ್ಟಿದ್ದೇವೆ. ಒಂದೊಂದು ಮನೆಯಲ್ಲಿ ನಾಲ್ಕಾರು ವಾಹನಗಳು ಹೊತ್ತೊರಡಲು ಮನೆ ಮುಂದೆ ಕಾಯುತ್ತಿವೆ. ನಿಲ್ಲಿಸಲು ಜಾಗವಿಲ್ಲದಿದ್ದರೂ ಸಂಚರಿಸಲು ಕಷ್ಟವಾಗಿರುವ ಗಲ್ಲಿಗಳಲ್ಲಿ ಮನೆಗಳ ಮುಂದೆ ಸಾಲುಸಾಲಾಗಿ, ಒತ್ತೊತ್ತಾಗಿ ಕಾರು, ಬೈಕುಗಳನ್ನು ನಿಲ್ಲಿಸಿರುತ್ತಾರೆ. ಸಮೀಪದಲ್ಲೇ ಇರುವ ಮಾರುಕಟ್ಟೆಯಿಂದ ಕೊತ್ತಂಬರಿ ಸೊಪ್ಪನ್ನು ತರುವುದಕ್ಕೂ ಕಾರನ್ನು ಉಪಯೋಗಿಸುತ್ತೇವೆ. ಕಾರು, ಬೈಕುಗಳಿಲ್ಲದೆ ಕೂಗಳತೆ ದೂರದ ಸ್ಥಳಗಳಿಗೂ ನಡೆದುಕೊಂಡು ಹೋಗದ ಜೀವನ ಶೈಲಿಯನ್ನು ಅಳವಡಿಸಿಕೊಂಡಿರುವುದು ದುರಂತವೇ ಸರಿ.

ನಮ್ಮ ರಾಜ್ಯದಲ್ಲಿ ಅಂಕಿ–ಅಂಶಗಳ ಪ್ರಕಾರ 2001ರಲ್ಲಿ 5.29 ಕೋಟಿ ಜನಸಂಖ್ಯೆಗೆ 4.00 ಮಿಲಿಯನ್ ವಾಹನಗಳು ರಿಜಿಸ್ಟ್ರೇಷನ್ ಆಗಿದ್ದರೆ 2011ರಲ್ಲಿ 6.11 ಕೋಟಿ ಜನಸಂಖ್ಯೆಗೆ 9.93 ಮಿಲಿಯನ್



> “ ಎಲ್ಲ ಅವಘಡಗಳಿಗೂ ನಾವೇ ಕಾರಣ. ನಡೆಯುವುದಕ್ಕಾಗಿ ದೇವರು ಕೊಟ್ಟಿರುವ ಕಾಲುಗಳನ್ನು ಮರೆತು ಬಿಟ್ಟಿದ್ದೇವೆ. ಒಂದೊಂದು ಮನೆಯಲ್ಲಿ ನಾಲ್ಕಾರು ವಾಹನಗಳು ಹೊತ್ತೊರಡಲು ಮನೆಮುಂದೆ ಕಾಯುತ್ತಿವೆ. ನಿಲ್ಲಿಸಲು ಜಾಗವಿಲ್ಲದಿದ್ದರೂ ಸಂಚರಿಸಲು ಕಷ್ಟವಾಗಿರುವ ಗಲ್ಲಿಗಳಲ್ಲಿ ಮನೆಗಳ ಮುಂದೆ ಸಾಲುಸಾಲಾಗಿ, ಒತ್ತೊತ್ತಾಗಿ ಕಾರು, ಬೈಕುಗಳನ್ನು ನಿಲ್ಲಿಸಿರುತ್ತಾರೆ. ಸಮೀಪದಲ್ಲೇ ಇರುವ ಮಾರುಕಟ್ಟೆಯಿಂದ ಕೊತ್ತಂಬರಿ ಸೊಪ್ಪನ್ನು ತರುವುದಕ್ಕೂ ಕಾರನ್ನು ಉಪಯೋಗಿಸುತ್ತೇವೆ. ಕಾರು, ಬೈಕುಗಳಿಲ್ಲದೆ ಕೂಗಳತೆ ದೂರದ ಸ್ಥಳಗಳಿಗೂ ನಡೆದುಕೊಂಡು ಹೋಗದ ಜೀವನಶೈಲಿ ಅಳವಡಿಸಿಕೊಂಡಿರುವುದು ದುರಂತವೇ ಸರಿ.

ವಾಹನಗಳು ರಿಜಿಸ್ಟ್ರೇಷನ್ ಆಗಿರುವುದು ಕಂಡುಬಂದಿದೆ. ಜನಸಂಖ್ಯೆಯ ಏರಿಕೆ ಕೇವಲ 15.50% ಆದರೆ ವಾಹನಗಳಲ್ಲಿ ಆಗಿರುವ ಏರಿಕೆ 148.25%, ಇದರಿಂದ ತಿಳಿಯುವುದು ನಮ್ಮ ಜನಗಳಿಗೆ ವಾಹನಗಳ ಮೇಲೆ ಎಷ್ಟೊಂದು ಕ್ರೇಜ್ ಇದೆಯೆಂದು.

ಒಂದು ಕಾಲದಲ್ಲಿ ಪ್ರಯಾಣಿಸಲು ಸೈಕಲ್ ಬಹುದೊಡ್ಡ ಸಾಧನವಾಗಿತ್ತು. ಅದರ ಬಳಕೆಯು ಕೂಡ ವಿರಳವಾಗಿತ್ತು. ವರದಕ್ಷಿಣೆಯಾಗಿ ಇದನ್ನು ಮದುಮಗನಿಗೆ ಕೊಡುವ ವಾಡಿಕೆ. ಆದರೆ ಇಂದು ಮಧ್ಯಮ ದರ್ಜೆಯ ಕುಟುಂಬವು ಸಹ ಐಷಾರಾಮಿ ಕಾರುಗಳನ್ನು ವರದಕ್ಷಿಣೆಯಾಗಿ ಕೊಡುತ್ತಿವೆ. ವರದಕ್ಷಿಣೆಯಾಗಿ ಕಾರಿಲ್ಲದೆ ಹುಡುಗರಿಗೆ ತಾಳಿ ಕಟ್ಟಲು ಮನಸ್ಸು ಬರುವುದಿಲ್ಲ. ಕಲ್ಯಾಣ ಮಂಟಪದ ಹೊರಗಡೆ ಹೂವಿನಿಂದ ಅಲಂಕೃತಗೊಂಡ ಹೊಸ ಕಾರು ನಿಂತಿರಲೇಬೇಕಾದ ಕಾಲವಿದು. ಆಗಾಗ್ಗೆ ಬದಲಾಗುವ ವಿನ್ಯಾಸದಿಂದಾಗಿ ಹೊಸ ಹೊಸ ಮಾದರಿಯ ವಾಹನಗಳು ರಸ್ತೆಗೆ ಬರುತ್ತಿವೆ. ಒಂದೆರಡು ವರ್ಷ ಓಡಿಸಿದ ಕಾರು ಕೆಲವರಿಗೆ ಹಳೆಯದಾಗಿಬಿಡುತ್ತವೆ. ಅದನ್ನು ಮಾರಿ ಹೊಸ ಮಾದರಿ ಕಾರನ್ನು ಕೊಳ್ಳುತ್ತಾರೆ. ಕಂಪನಿಗಳು ಮಾಡುವ ಪ್ರಚಾರದ ಆಕರ್ಷಣೆ ಮತ್ತು ಬ್ಯಾಂಕ್‌ನವರು ನೀಡುವ ಸಾಲ ಸೌಲಭ್ಯದಿಂದಾಗಿ ಭಾರಿ ಪ್ರಮಾಣದಲ್ಲಿ ವಾಹನಗಳು ರಸ್ತೆಗೆ ಇಳಿಯುತ್ತಿವೆ.

ನೆರೆಹೊರೆಯವರು ಸ್ನೇಹಿತರು ಕಾರು ತೆಗೆದುಕೊಂಡು ಮಜಾ ಮಾಡುತ್ತಿದ್ದಾರೆಂದು ನಾನು ಸಹ ಪ್ರೇರಿತನಾಗಿ 17 ವರ್ಷಗಳ ಹಿಂದೆ ಬ್ಯಾಂಕಿನಿಂದ ಸಾಲ ಪಡೆದು ಪುಟ್ಟದಾದ ಹೊಸ ಕಾರೊಂದನ್ನು ಖರೀದಿಸಿದೆ. ಐದು ವರ್ಷಗಳ ಕಾಲ ಬ್ಯಾಂಕ್ ಸಾಲ ಕಟ್ಟುವುದು ಜೊತೆಗೆ ಪ್ರತೀ ವರ್ಷ ವಿಮೆ ಕಟ್ಟುವುದರಲ್ಲೇ ಕಳೆದಿದ್ದಾಯ್ತು. ಹದಿನೇಳು ವರ್ಷಗಳಲ್ಲಿ ಕೇವಲ 36,000 ಕಿಮೀ ಮಾತ್ರ ಓಡಿರುವ ನನ್ನ ಕಾರು ಅದರಲ್ಲೂ ಹೆಚ್ಚು ಕಿಮೀ ಡ್ರೈವರ್ ಓಡಿಸಿರುವುದು. ಮೈಸೂರಿನಲ್ಲಿ ಈಗಿನ ಟ್ರಾಫಿಕ್ ಕಿರಿಕಿರಿಯಿಂದಾಗಿ ನಾನು ಕಾರು ಓಡಿಸುವುದನ್ನು ನಿಲ್ಲಿಸಿಯಾಗಿದೆ. ಕಾರಿನ ಮೇಲೆ ಹೂಡಿಕೆ ಮಾಡಿದ ಹಣದ ಬಡ್ಡಿಯಿಂದಲೇ ಅವಶ್ಯಕತೆ ಇದ್ದಾಗ ಕಾರನ್ನು ಬಾಡಿಗೆ ಪಡೆದು ಓಡಾಡಬಹುದಿತ್ತಲ್ಲವೆ?!.

ಮನುಷ್ಯನ ನಡುವಳಿಕೆಯೇ ಅಂಥಹದ್ದು ನಮಗೆ ಅವಶ್ಯಕತೆ ಇಲ್ಲದಿದ್ದರೂ ಯಾರೋ ತೆಗೆದುಕೊಂಡರೆಂದು ನಾವು ತೆಗೆದುಕೊಳ್ಳುತ್ತೇವೆ. ಇದರಿಂದ ಇಲ್ಲದ ಸಂಕಷ್ಟಕ್ಕೆ ಸಿಲುಕಿ ನಮ್ಮ ಸಂಪಾದನೆಯ ಬಹುಪಾಲು ಹಣವನ್ನು ಬಡ್ಡಿಕಟ್ಟುವುದಕ್ಕಾಗಿ ವ್ಯಯಿಸುತ್ತೇವೆ.

ಸಾಫ್ಟ್‌ವೇರ್ ಉದ್ಯಮ ಮತ್ತು ರಿಯಲ್ ಎಸ್ಟೇಟ್ ವ್ಯವಹಾರಗಳಲ್ಲಿ ಆದ ಬದಲಾವಣೆಯಿಂದಾಗಿ ರಾಶಿ ರಾಶಿ ವಾಹನಗಳು ರಸ್ತೆಗೆ ಬಂದಿಳಿದವು. ಏನೂ ಸಂಪಾದನೆ ಇಲ್ಲದವರು ತುಂಡು ಜಮೀನು ಮಾರಿಕೊಂಡು ಕಾರು ಕೊಂಡರು. ಸಾಮಾನ್ಯ ವೇತನವನ್ನು ಪಡೆಯುತ್ತಿದ್ದವರು ಬ್ಯಾಂಕಿನಲ್ಲಿ ಸಾಲ ಪಡೆದು ವಾಹನದ ಮಾಲೀಕರಾದರು. ಕನಿಷ್ಠ ಸಂಪಾದನೆಯವರು ಸಹ ಸೆಕೆಂಡ್ ಹ್ಯಾಂಡ್ ವಾಹನಗಳ ಮಾಲೀಕರಾದರು.

ವಾಹನಗಳು ಮತ್ತು ಭಾರಿ ಯಂತ್ರೋಪಕರಣಗಳ ಏರಿಕೆಯಿಂದಾಗಿ 1980ರಲ್ಲಿ 643000 ಬ್ಯಾರಲ್ ಕ್ರೂಡ್ ಆಯಿಲ್ ಉಪಯೋಗಿಸುತ್ತಿದ್ದವರು 2013ರಲ್ಲಿ 3660000 ಬ್ಯಾರಲ್ ಕ್ರೂಡ್ ಆಯಿಲ್ ಉಪಯೋಗಿಸುವಂತಾಯಿತು. 2016–17ರಲ್ಲಿ ಖರ್ಚಾಗಿರುವ ಇಂಧನ ಸುಮಾರು 200 ಮಿಲಿಯನ್ ಟನ್‌ಗಿಂತಲೂ ಹೆಚ್ಚು. ಭಾರತ ಒಂದರಲ್ಲೇ ಇಷ್ಟೊಂದು ಪ್ರಮಾಣದಲ್ಲಿ ಇಂಧನವನ್ನು ಸುಡುತ್ತಿರುವಾಗ ವಿಶ್ವದಲ್ಲಿರುವ ಒಟ್ಟು ದೇಶಗಳು ಎಷ್ಟೊಂದು ಪ್ರಮಾಣದಲ್ಲಿ ಸುಡುತ್ತಿರಬಹುದು!. ಅನ್ಯ ಗ್ರಹದಿಂದ ನಿಂತು ಭೂಮಿಯನ್ನು ದೃಷ್ಟಿಸಿದರೆ ಉಗುಳುವ ಹೊಗೆ ಭೂಮಿಯೇ ಹೊತ್ತಿ ಧಗಧಗನೆ ಉರಿಯುವಂತೆ ಕಾಣುವುದಿಲ್ಲವೇ?.

ನಮ್ಮ ದುರ್ಬುದ್ಧಿಯಿಂದಾಗಿ ವಾತಾವರಣ ಹಾಳಾಗುತ್ತಿದೆ. ನಮ್ಮ ಸುಖಕ್ಕಾಗಿ ಮುಂದಿನ ಪೀಳಿಗೆಗೆ ಸ್ವಚ್ಛ ಭೂಮಿಯನ್ನು ಬಿಟ್ಟು ಹೋಗುವುದನ್ನು ಮರೆತಿದ್ದೇವೆ. ವಾತಾವರಣವೇ ಹೊಗೆಯಿಂದ ತುಂಬಿರುವಾಗ ಕಾಲಕಾಲಕ್ಕೆ ಮಳೆ ಬರುವುದಾದರು ಹೇಗೆ?. ಇವತ್ತಿನ ನಮ್ಮ ಸುಖಕ್ಕಾಗಿ ಮಾಡಬಾರದ್ದನ್ನು ಮಾಡುತ್ತಿದ್ದೇವೆ, ಮರನೆಟ್ಟು ಪರಿಸರ ಉಳಿಸಿ ಎನ್ನುವ ಸ್ಲೋಗನ್ ಇಟ್ಟುಕೊಂಡು ಟಿವಿಗಳಿಗೆ ಮತ್ತು ಮಾಧ್ಯಮಗಳಿಗೆ ಫೋಸ್ ಕೊಡುವುದಕ್ಕಾಗಿ ಸಸಿ ನೆಟ್ಟು ಸಂಭ್ರಮಿಸುತ್ತಾರೆ, ಆ ಸಂಭ್ರಮದಲ್ಲಿ ಕಾಲ್ತುಳಿತಕ್ಕೆ ಸಿಕ್ಕಿ ಕೆಲವು ಗಿಡಗಳು ನೆಟ್ಟ ದಿನವೇ ಹಾಳಾದರೆ, ಉಳಿದ ಸಸಿಗಳಿಗೆ ನೀರುಣಿಸಿ ಪೋಷಿಸುವುದನ್ನು ಮಾಡುವುದಿಲ್ಲ ಹಾಗಾಗಿ ಹಸಿರೀಕರಣ ಆಗುವುದಾದರು ಹೇಗೆ?.

ವಾಹನಗಳ ಉಪಯೋಗದ ತೀವ್ರತೆ ಹೀಗೆ ಮುಂದುವರಿದರೆ ಮುಂದಿನ ದಿನಗಳಲ್ಲಿ ಸರ್ಕಾರಗಳು ಡಿಸೇಲ್ ಮತ್ತು ಪೆಟ್ರೋಲ್‌ನ ಸರಬರಾಜಿಗಾಗಿ ಮನೆಮನೆಗಳಿಗೆ ನೀರಿನಂತೆ ಕೊಳವೆ ಮತ್ತು ನಳಗಳನ್ನು ಅಳವಡಿಸಬೇಕಾಗಬಹುದು. ಸಾರ್ವಜನಿಕರಲ್ಲಿ ನೀರು ಕೊಡದಿದ್ದರೂ ಪರವಾಗಿಲ್ಲ ನಮಗೆ ಇಂಧನ ಕೊಡಿ ಎನ್ನುವ ಕೂಗು ಮೊಳಗಬಹುದು, ಚುನಾವಣೆಯ ಪ್ರಣಾಳಿಕೆಯಲ್ಲಿ ರೈತರ ಸಾಲ ಮನ್ನಾದಂತೆ ಇದೊಂದು ಪ್ರಮುಖವಾದ ಪ್ರಣಾಳಿಕೆ ಆಗಬಹುದು!.

ಸಾಗಣೆ ಮತ್ತು ಪ್ರಯಾಣಕ್ಕಾಗಿ ವಾಹನಗಳನ್ನು ಉಪಯೋಗಿಸುವ ವ್ಯವಸ್ಥೆಯಲ್ಲಿ ಬದಲಾವಣೆ ಮತ್ತು ನಿಯಂತ್ರಣ ಆಗದಿದ್ದರೆ ಭೂಮಿ ಮತ್ತು ಅದರೊಳಗಿನ ಜೀವಸಂಕುಲಗಳು ಭಾರಿ ಸಂಕಷ್ಟಕ್ಕೆ ಸಿಲುಕುವ ಕಾಲ ದೂರವಿಲ್ಲ. ಎಚ್ಚೆತ್ತುಕೊಳ್ಳುವ ಕಾಲ ಬಂದು ಬಹಳ ದಿನಗಳೇ ಕಳೆದಿವೆ. ಇನ್ನೂ ಎಚ್ಚೆತ್ತುಕೊಳ್ಳದೆ ಕಾಲುಗಳು ಇರುವುದನ್ನು ಮರೆತು ಎಲ್ಲಿಗೇ ಹೋದರೂ ನಮಗೆ ವಾಹನ ಬೇಕೇಬೇಕು, ಇವತ್ತು ಇದ್ದ ಹೊಸಕಾರು ನಾಳೆಗೆ ಹಳೆಯದು, ನಾಡಿದ್ದು ಮತ್ತೊಂದು ಹೊಸವಿನ್ಯಾಸದ ಹೊಸಕಾರು ಮನೆಯ ಮುಂದೆ ಬಂದು ನಿಲ್ಲುತ್ತದೆ. ಇಂತಹ ಧೋರಣೆ ನಮ್ಮಲ್ಲಿ ಇರುವಾಗ ಮಳೆ ಬರಲೆಂದು ಕತ್ತೆಗಳಿಗೆ ಮದುವೆ ಮಾಡಿದರೆ ಮಳೆ ಬರುತ್ತದೆಯೇ? ಅವುಗಳಿಗೆ ಮದುವೆ ಮಾಡುವುದರ ಬದಲಾಗಿ ಕಾರು, ಬೈಕುಗಳನ್ನು ಬಿಟ್ಟು ಕತ್ತೆ, ಕುದುರೆಗಳನ್ನು ನಮ್ಮ ಸಂಚಾರ ಮತ್ತು ಸಾಗಣೆಗಾಗಿ ಉಪಯೋಗಿಸಿಕೊಂಡಿದ್ದರೆ ಅವುಗಳ ಸಂತತಿಯು ಉಳಿಯುತ್ತಿತ್ತು, ವಾಯುಮಾಲಿನ್ಯವನ್ನೂ ತಡೆಯಬಹುದಿತ್ತು ಅಲ್ಲವೆ?.



ಮಿರ್ಲೆ ಚಂದ್ರಶೇಖರ
ಮೊ: 9916129654

ಬೆಂಗಳೂರಲ್ಲಿ ಇಂದಿನಿಂದ ಏರ್ ಶೋ: ಅಮೆರಿಕದ ಎಫ್–35, ರಷ್ಯಾದ ಎಸ್‌ಯು–57 ಯುದ್ಧ ವಿಮಾನ ಆಕರ್ಷಣೆ

ಬೆಂಗಳೂರು, ಫೆ.9– ಈ ಬಾರಿಯ ಏರೋ ಇಂಡಿಯಾ–2025 ವೈಮಾನಿಕ ಪ್ರದರ್ಶನವು ಅಪರೂಪದ ಘಟನಾವಳಿಗಳಿಗೆ ಸಾಕ್ಷಿಯಾಗುತ್ತಿದೆ. ಶತ್ರುಗಳ ವಿರುದ್ಧ ರಹಸ್ಯ ಕಾರ್ಯಾಚರಣೆ ನಡೆಸಬಲ್ಲ 5ನೇ ತಲೆಮಾರಿನ ಅತ್ಯಾಧುನಿಕ ಯುದ್ಧ ವಿಮಾನಗಳಾದ ರಷ್ಯಾ ದೇಶದ 'ಎಸ್‌ಯು–57' ಜೊತೆಗೆ ಶನಿವಾರವಷ್ಟೇ ಯಲಹಂಕ ವಾಯುಪಡೆ ನೆಲೆಗೆ ಬಂದಿರುವ 'ಅಮೆರಿಕದ ಎಫ್–35' ಬೆಂಗಳೂರಿನ ಆಕಾಶದಲ್ಲಿ ತನ್ನ ಸಾಮರ್ಥ್ಯವನ್ನು ಪ್ರದರ್ಶಿಸಲಿದೆ. ನಭಕ್ಕೆ ಚಿಮ್ಮಿದರೆ ಆಕಾಶದಲ್ಲಿ ಆಳ್ವಿಕೆ ನಮ್ಮದೇ ಎನ್ನುವ ಎಫ್–35 ಮತ್ತು ಎಸ್‌ಯು–57 ವಿಮಾನಗಳು ಏರೋ ಇಂಡಿಯಾದ ಆಕರ್ಷಣೆಯ ಕೇಂದ್ರಬಿಂದು ಆಗುವುದು ನಿಶ್ಚಿತ. ಈ ಎರಡು ವಿಮಾನಗಳ ಸಮಾಗಮವು ರಕ್ಷಣಾ ವಲಯದ ಆಸಕ್ತಿ ಕೆರಳಿಸಿದೆ. ಈಗಾಗಲೇ ತಾಲೀಮು ಆರಂಭಿಸಿರುವ ಎಸ್‌ಯು–57 ಜೊತೆಗೆ ಭಾನುವಾರದಿಂದ ಎಫ್–35 ಮತ್ತು ಎರಡು ಎಫ್–16 ವಿಮಾನಗಳು ತಾಲೀಮು ನಡೆಸಿವೆ. ಇಂತಹ ಕ್ಷಣಗಳನ್ನು ಭಾರತದಲ್ಲಿ ಮಾತ್ರ ಸಾಧ್ಯ ಎಂದು ಮಿಲಿಟರಿ ಆಸಕ್ತರು ಜಾಲತಾಣಗಳಲ್ಲಿ ಪೋಸ್ಟ್ ಮಾಡಿದ್ದಾರೆ.



ಅಮೆರಿಕ ಮತ್ತು ರಷ್ಯಾ ತಮ್ಮ ಅತ್ಯಾಧುನಿಕ ಯುದ್ಧ ವಿಮಾನಗಳನ್ನು ಭಾರತಕ್ಕೆ ಮಾರಾಟ ಮಾಡಲು ಉತ್ಸುಕವಾಗಿವೆ. ಕಳೆದ ಬಾರಿ ಏರೋ ಇಂಡಿಯಾದಲ್ಲಿ ಎಫ್–35 ಭಾಗವಹಿಸಿತ್ತು. ಅದರ ಜೊತೆಗೆ ಎಸ್‌ಯು–57 ಮೊದಲ ಬಾರಿ ಭಾಗವಹಿಸುವುದರೊಂದಿಗೆ ಕುತೂಹಲ ಹೆಚ್ಚಿಸುವಂತೆ ಮಾಡಿದೆ.

ಹೆಚ್‌ಎಎಲ್ ನಿರ್ಮಿತ ಯುದ್ಧ ವಿಮಾನ, ಹೆಲಿಕಾಪ್ಟರ್‌ಗಳು: ಯಲಹಂಕ ವಾಯುಪಡೆ ನೆಲೆಯಲ್ಲಿ ಫೆ.10ರಿಂದ 14ರವರೆಗೆ ನಡೆಯಲಿರುವ 'ಏರೋ ಇಂಡಿಯಾ–2025'ರಲ್ಲಿ ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್ ದೇಶಿಯವಾಗಿ ಅಭಿವೃದ್ಧಿಪಡಿಸಿರುವ ವಿವಿಧ ಉತ್ಪನ್ನಗಳು, ತಂತ್ರಜ್ಞಾನವನ್ನು ಪ್ರದರ್ಶಿಸಲಿದೆ. 'ನಾವೀನ್ಯತೆ, ಸಹಭಾಗಿತ್ವ, ಮುಂದಾಳತ್ವ' ಪರಿಕಲ್ಪನೆಯಲ್ಲಿ ದೇಶಿಯವಾಗಿ ವಿನ್ಯಾಸಗೊಳಿಸಿ ಅಭಿವೃದ್ಧಿಪಡಿಸಿರುವ ಲೈಟ್ ಯುಟಿಲಿಟಿ ಹೆಲಿಕಾಪ್ಟರ್(ಎಲ್‌ಯುಎಚ್) ಪ್ರಮುಖ ಆಕರ್ಷಣೆ ಆಗಿರಲಿದೆ. ಎಚ್‌ಎಎಲ್‌ನ ಸಂಶೋಧನೆ ಮತ್ತು ಅಭಿವೃದ್ಧಿ ಘಟಕಗಳಲ್ಲಿ ಮಾನವ ಸಹಿತ ಮತ್ತು ಮಾನವರಹಿತ ವಿಮಾನಗಳಿಗೆ ಸಂಬಂಧಿಸಿದ ಏವಿಯಾನಿಕ್ಸ್, ಮೆಕ್ಯಾನಿಕಲ್ ಸಿಸ್ಟಮ್ಸ್, ಎಂಜಿನ್ ಸಂಬಂಧಿಸಿದ ಉತ್ಪನ್ನಗಳನ್ನು ನೋಡಬಹುದು ಎಂದು ಎಚ್‌ಎಎಲ್‌ನ ಮುಖ್ಯ ವ್ಯವಸ್ಥಾಪಕ ನಿರ್ದೇಶಕ (ಸಿಎಂಡಿ) ಡಾ ಡಿ.ಕೆ.ಸುನೀಲ್ ತಿಳಿಸಿದ್ದಾರೆ.

ಹೆಚ್‌ಎಎಲ್ ಪೆವಿಲಿಯನ್‌ನಲ್ಲಿ ಎಲ್‌ಯುಎಚ್, ಹಿಂದೂಸ್ತಾನ್ ಟರ್ಬೋ ಟ್ರೈನರ್ (ಎಚ್‌ಟಿಟಿ–40) ಸಿಮ್ಯುಲೇಟರ್, ಎಲ್‌ಸಿಎ ಎಂ.ಕೆ1ಎ ಮತ್ತು ಎಲ್‌ಸಿಎ ಎಂ.ಕೆ1 ಟ್ರೈನರ್, ಹಿಂದೂಸ್ಥಾನ್ ಜೆಟ್ ಟ್ರೈನರ್ (ಎಚ್‌ಜೆಟಿ–36), ಎಲ್‌ಸಿಎಚ್ ಮತ್ತು ಎಎಲ್‌ಎಚ್ ಎಂ.ಕೆ 4 ಮತ್ತು ಹಿಂದೂಸ್ಥಾನ್ 228 ವಿಮಾನಗಳ ನೈಜ ಮಾದರಿಗಳನ್ನು ಪ್ರದರ್ಶಿಸಲಾಗುತ್ತದೆ.

ಫೆ.12ರಂದು ಲೋಕಾಯುಕ್ತರಿಂದ ದೂರು ಸ್ವೀಕಾರ

ಮೈಸೂರು, ಫೆ.9– ಕರ್ನಾಟಕ ಲೋಕಾಯುಕ್ತ ಮೈಸೂರು ವಿಭಾಗ ಅಧಿಕಾರಿಗಳಿಂದ ಫೆ.12ರಂದು ಬೆಳಗ್ಗೆ 11 ಗಂಟೆಯಿಂದ ಮಧ್ಯಾಹ್ನ 1ರವರೆಗೆ ಮೈಸೂರು ತಾಲೂಕು ಕಚೇರಿ ಸಭಾಂಗಣದಲ್ಲಿ ದೂರು ಸ್ವೀಕರಿಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಕಾರ್ಯಕ್ರಮದಲ್ಲಿ ಸಾರ್ವಜನಿಕರು ಸರ್ಕಾರಿ ಕಚೇರಿಗಳಲ್ಲಿ ಸಾರ್ವಜನಿಕರ ಅಧಿಕೃತ ಕೆಲಸಗಳ ಅನಗತ್ಯ ವಿಳಂಬ, ಲಂಚದ ಹಣದ ಬೇಡಿಕೆ ಇತ್ಯಾದಿ ತೊಂದರೆಗಳನ್ನು ನೀಡುತ್ತಿರುವ ಸಾರ್ವಜನಿಕ, ಸರ್ಕಾರಿ ಅಧಿಕಾರಿ, ನೌಕರರ ವಿರುದ್ಧ ಅಗತ್ಯ ದಾಖಲಾತಿಗಳೊಡನೆ ದೂರು ನೀಡಬಹುದು ಎಂದು ಕರ್ನಾಟಕ ಲೋಕಾಯುಕ್ತ ಪೊಲೀಸ್ ಅಧೀಕ್ಷಕ ಟಿ.ಜೆ. ಉದೇಶ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರಥಸಪ್ತಮಿ: ಯೋಗಪಟುಗಳಿಂದ 108 ಸೂರ್ಯ ನಮಸ್ಕಾರ

ಮೈಸೂರು, ಫೆ.9(ಎಂಟಿವೈ)– ಮೈಸೂರಿನ ವಿಜಯನಗರದಲ್ಲಿರುವ ಯೋಗನರಸಿಂಹಸ್ವಾಮಿ ದೇವಾಲಯದ ಆವರಣದಲ್ಲಿ ರಥಸಪ್ತಮಿ ಅಂಗವಾಗಿ ಭಾನುವಾರ ಗ್ಲೋಬಲ್ ಯೋಗ ಫೋರಂ ಆಯೋಜಿಸಿದ್ದ ಸಾಮೂಹಿಕ ಸೂರ್ಯ ನಮಸ್ಕಾರ ಕಾರ್ಯಕ್ರಮದಲ್ಲಿ ನೂರಾರು ಯೋಗಪಟುಗಳು ಪಾಲ್ಗೊಂಡಿದ್ದರು.

ವಿವಿಧ ಯೋಗ ಸಂಸ್ಥೆಗಳ ಸಹಕಾರದಿಂದ ಏರ್ಪಡಿಸಿದ್ದ ಸಾಮೂಹಿಕ ಸೂರ್ಯ ನಮಸ್ಕಾರ ಕಾರ್ಯಕ್ರಮದಲ್ಲಿ ಮಕ್ಕಳು, ಮಹಿಳೆಯರೂ ಸೇರಿದಂತೆ ವಿವಿಧ ವಯೋಮಾನದ ಯೋಗ ಪಟುಗಳು ಪಾಲ್ಗೊಂಡು 108 ಬಾರಿ ಸೂರ್ಯ ನಮಸ್ಕಾರ ಮಾಡಿದರು. ಮುಂಜಾನೆ 5.45ರಿಂದ 7.30ರವರೆಗೆ ಸೂರ್ಯ ನಮಸ್ಕಾರ ಮಾಡಿ ಗಮನ ಸೆಳೆದರು. ಬಳಿಕ ನಡೆದ ಸಭಾ ಕಾರ್ಯಕ್ರಮವನ್ನು ಕೆ.ಆರ್.ಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸ ಉದ್ಘಾಟಿಸಿ ಮಾತನಾಡಿ, ಯೋಗ ಪ್ರಾಚೀನ ಕಾಲದಿಂದಲೂ ಪ್ರಚಲಿತದಲ್ಲಿದೆ. ಯೋಗ ನಮ್ಮ ಸಂಸ್ಕೃತಿಯೂ ಆಗಿದೆ. ಜೂನ್ 26ರಂದು ಆಚರಿಸುವ 'ವಿಶ್ವ ಯೋಗ' ದಿನದ ಕಾರ್ಯಕ್ರಮದಲ್ಲಿ ಮೈಸೂರಿನಲ್ಲಿ ಹೆಚ್ಚಿನ ಯೋಗಪಟುಗಳು ಸೇರಿ ಯೋಗ ಮಾಡುವುದಕ್ಕೆ ಮುಂದಾಗಬೇಕು. ಯೋಗ ಮಾಡುವುದರಿಂದ ಒತ್ತಡ ನಿವಾರಿಸಿಕೊಳ್ಳಬಹುದಾಗಿದೆ. ಪ್ರಧಾನಿ ನರೇಂದ್ರ ಮೋದಿ ಆಸೆಯಂತೆ ಯೋಗವನ್ನು ಇನ್ನಷ್ಟು ವಿಶ್ವ ಪ್ರಸಿದ್ಧಿ ಮಾಡಬೇಕು. ಮೈಸೂರು ನಗರವು ಎಲ್ಲ ರಂಗದಲ್ಲೂ ವಿಶ್ವ ಪ್ರಸಿದ್ಧಿ ಹೊಂದಿದ್ದು, ಇಲ್ಲಿ ಕಲೆ, ಸಾಹಿತ್ಯ, ಯೋಗ, ಕ್ರೀಡೆ ಸೇರಿದಂತೆ ಎಲ್ಲಾ ಕ್ಷೇತ್ರಗಳಲ್ಲೂ ಮೈಸೂರು ಛಾಪು ಮೂಡಿಸಿದೆ ಎಂದರು.

ಈ ಸಂದರ್ಭದಲ್ಲಿ ಜಿಎಸ್‌ಎಸ್ ಸಂಸ್ಥೆಯ ಮುಖ್ಯಸ್ಥ ಶ್ರೀ ಹರಿ, ವೈದ್ಯರಾದ ಡಾ.ಲಕ್ಷ್ಮೀನಾರಾಯಣ ಶೆಣೈ, ಡಾ.ಮೈತ್ರಿ, ಡಾ.ಸುಧಾಕರ್ ರೆಡ್ಡಿ, ಸಿದ್ದೇಶ್ ಚಂದ್, ಶಶಿಕುಮಾರ್, ಗಣೇಶ್‌ಕುಮಾರ್, ನಾರಾಯಣ ಆಸ್ಪತ್ರೆ ವೈದ್ಯ ಡಾ.ಪ್ರದೀಪ್ ಇನ್ನಿತರರು ಉಪಸ್ಥಿತರಿದ್ದರು.



ಮೈಸೂರಿನ ಯೋಗನರಸಿಂಹಸ್ವಾಮಿ ದೇವಾಲಯದಲ್ಲಿ ಸಾಮೂಹಿಕ ಯೋಗ ನಮಸ್ಕಾರ ನಿರತ ಯೋಗಪಟುಗಳು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

ಇಂದು ಮಹಾ ಕುಂಭಮೇಳದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಪುಣ್ಯಸ್ನಾನ



ಪ್ರಯಾಗ್‌ರಾಜ್, ಫೆ.9– 144 ವರ್ಷಗಳ ನಂತರ ನಡೆಯುತ್ತಿರುವ ಮಹಾ ಕುಂಭಮೇಳದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಸೋಮವಾರ (ಫೆ.10) ದಂದು ಭಾಗವಹಿಸಿ, ಪುಣ್ಯಸ್ನಾನ ಮಾಡಲಿದ್ದಾರೆ.

ಪ್ರಯಾಗ್‌ರಾಜ್‌ನಲ್ಲಿ ನಡೆಯುತ್ತಿರುವ ಮಹಾ ಕುಂಭಮೇಳಕ್ಕೆ ಭೇಟಿ ನೀಡಲಿದ್ದು, ಅಲ್ಲಿ ತ್ರಿವೇಣಿ ಸಂಗಮದಲ್ಲಿ ಪವಿತ್ರ ಸ್ನಾನ ಮಾಡಲಿದ್ದಾರೆ ಎಂದು ರಾಷ್ಟ್ರಪತಿ ಭವನ ದೃಢಪಡಿಸಿದೆ.

ಇಂದು ಮೈಕ್ರೋ ಫೈನಾನ್ಸ್ ಸುಗ್ರೀವಾಜ್ಞೆ ಕರಡು ಸ್ಪಷ್ಟೀಕರಣದೊಂದಿಗೆ ರಾಜ್ಯಪಾಲರಿಗೆ ಮರು ರವಾನೆ

ಬೆಂಗಳೂರು, ಫೆ.9– ಮೈಕ್ರೋ ಫೈನಾನ್ಸ್ ಸುಗ್ರೀವಾಜ್ಞೆಗೆ ರಾಜ್ಯಪಾಲರು ವ್ಯಕ್ತಪಡಿಸಿರುವ ಎಲ್ಲ ಆಕ್ಷೇಪಣೆಗಳಿಗೂ ಕಾನೂನು ಇಲಾಖೆ ಸೂಕ್ತ ಸ್ಪಷ್ಟೀಕರಣಗಳನ್ನು ಸಿದ್ಧಪಡಿಸಿದೆ. ನಾಳೆ(ಫೆ.10) ಸ್ಪಷ್ಟೀಕರಣ ಸಹಿತ ಕರ್ನಾಟಕ ಮೈಕ್ರೋ ಫೈನಾನ್ಸ್ ಸುಗ್ರೀವಾಜ್ಞೆ ಕರಡನ್ನು ಸಿಎಂ ಕಚೇರಿಯಿಂದ ರಾಜ್ಯಪಾಲರಿಗೆ ಕಳಿಸಲಾಗುತ್ತಿದೆ. ಸದ್ಯ ಕಾನೂನು ಇಲಾಖೆ ಸಿದ್ಧಪಡಿಸಿರುವ ಸ್ಪಷ್ಟೀಕರಣಗಳನ್ನು ಸಿಎಂ ಅವಗಾಹನೆಗೆ ಕಳಿಸಲಾಗಿದೆ. ಕರಡನ್ನು ಸಿಎಂ ಕಚೇರಿಯಿಂದ ಅಂತಿಮಗೊಳಿಸಿ ರಾಜ್ಯಪಾಲರಿಗೆ ನಾಳೆ ಕಳಿಸಲಾಗುತ್ತದೆ.

ಸರ್ಕಾರವು ಸುಗ್ರೀವಾಜ್ಞೆಯನ್ನು ಸಮರ್ಥಿಸಿಕೊಂಡು ಸ್ಪಷ್ಟೀಕರಣ ಕೊಡಲು ಮುಂದಾಗಿದ್ದು, ಇದು ವ್ಯಕ್ತಿ ಮೂಲಭೂತ ಹಕ್ಕನ್ನು ನಿರ್ಬಂಧಿಸುವುದಿಲ್ಲ. ಸಾಲದಾತರ ಹಿತಾಸಕ್ತಿಯನ್ನು ನಿರ್ಲಕ್ಷಿಸಿಲ್ಲ. ಸಾಲ ವಸೂಲಾತಿಯನ್ನು ನಿರ್ಬಂಧಿಸುವುದಿಲ್ಲ ಎಂದು ಸ್ಪಷ್ಟನೆ ಕೊಡಲಾಗುತ್ತಿದೆ. ಸುಗ್ರೀವಾಜ್ಞೆಯನ್ನು ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಇತ್ತೀಚೆಗಷ್ಟೇ ವಾಪಸ್ ಕಳುಹಿಸಿದ್ದರು. ಸುಗ್ರೀವಾಜ್ಞೆಯು ಸಹಜ ಹಾಗೂ ಸಾಲ ನೀಡುವವರ ಮೂಲಭೂತ ಹಕ್ಕುಗಳಿಗೆ ವಿರುದ್ಧವಾಗಿದೆ ಎಂದು ಆಕ್ಷೇಪ ವ್ಯಕ್ತಪಡಿಸಿದ್ದರು.

ಸರ್ಕಾರದ ಸ್ಪಷ್ಟೀಕರಣ: ಸುಗ್ರೀವಾಜ್ಞೆ ಇದು ವ್ಯಕ್ತಿ ಮೂಲಭೂತ ಹಕ್ಕನ್ನು ನಿರ್ಬಂಧಿಸುವುದಿಲ್ಲ. ಸಾಲದಾತರ ಹಿತಾಸಕ್ತಿಯನ್ನು ನಿರ್ಲಕ್ಷಿಸಿಲ್ಲ ಹಾಗೂ ಸಾಲ ವಸೂಲಾತಿಯನ್ನು ನಿರ್ಬಂಧಿಸುವುದಿಲ್ಲ. ಸಾಲವನ್ನು ಖಾಸಗಿಯಾಗಿ, ಲೈಸೆನ್ಸ್ ಇಲ್ಲದೇ ನೀಡಿ ಹೆಚ್ಚಿನ ಬಡ್ಡಿ ವಸೂಲಿ ಮಾಡಿದರೆ ಅದು ಕಾನೂನು ವಿರೋಧಿ ಕ್ರಮ. ಅಂತಹ ಸಾಲವು ವಸೂಲಿಗೆ ಅರ್ಹವೂ ಅಲ್ಲ, ಯೋಗ್ಯವೂ ಅಲ್ಲ. ಕಾನೂನಿನ ಪ್ರಕಾರ ವಿಧಿಸಿದ ಬಡ್ಡಿ ಮೇರೆಗೆ ನೀಡಿದ ಸಾಲ ಮಾತ್ರ ವಸೂಲಿಗೆ ಅರ್ಹ. ಅಕ್ರಮ ಸಾಲ ಮತ್ತು ಬಡ್ಡಿ ವಸೂಲಾತಿ ಅರ್ಜಿಗಳನ್ನು ಕಾನೂನಾತ್ಮಕ ವಾಗಿ ನ್ಯಾಯಾಲಯಗಳು ಕೂಡಾ ವಿಚಾರಣೆಗೆ ಒಳಪಡಿಸಲು ಸಾಧ್ಯವೇ ಇಲ್ಲ. ಕಾನೂನಾತ್ಮಕವಾಗಿ ನೋಂದಾಯಿತ ಸಂಸ್ಥೆ ಅಥವಾ ವ್ಯಕ್ತಿಗಳು ನಿಯಮಾನುಸಾರ ನೈಜ ಸಾಲ ನೀಡಿದವರು ವಸೂಲಿ ಮಾಡಬಾರದೆಂದು ಅಥವಾ ಅಂತಹ ಸಾಲಗಳು ವಸೂಲಿಗೆ ಅರ್ಹವಲ್ಲ ಎಂದು ಸುಗ್ರೀವಾಜ್ಞೆಯಲ್ಲಿ ಸರ್ಕಾರ ಎಲ್ಲಿಯೂ ಹೇಳಿಲ್ಲ. ಕೇವಲ ಸಾಲ ವಸೂಲಾತಿಗೆ ಕಾನೂನು ಬಾಹಿರ ಕ್ರಮಗಳನ್ನು ಕೈಗೊಳ್ಳುವುದು, ಹಿಂಸೆ ಮಾಡುವುದು ಮತ್ತು ಒತ್ತಡ ತಂತ್ರ ಹೇರುವುದು ಹಾಗೂ ಕಿರುಕುಳಕ್ಕೆ ಕಾರಣವಾಗುವುದನ್ನು ತಡೆಯಲು/ನಿಷೇಧಿಸಲು ಸುಗ್ರೀವಾಜ್ಞೆ ಪ್ರಸ್ತಾಪಿಸುತ್ತದೆ. ಸಾಲ ನೀಡಿದವರು ಅನುಸರಿಸುವ ಕಾನೂನುಬಾಹಿರ ಕ್ರಮಗಳನ್ನು, ಆ ಕ್ರಮಗಳ ಸ್ವರೂಪದ ಕಾರಣಕ್ಕೆ ಶಿಕ್ಷಿಸಲು ಕಾನೂನುಗಳಿವೆ. ಆದರೆ ಸಾಲದ ಕಾರಣಕ್ಕೆ ಇಂತಹ ಕೃತ್ಯ ಎಸಗಿದಾಗ ಶಿಕ್ಷೆಗೆ ಒಳಪಡಿಸಲು ನಿರ್ದಿಷ್ಟ ಕಾನೂನು ಇಲ್ಲ. ಸಾಲಗಾರರ ಹಿತ ಕಾಪಾಡಲು ಪ್ರತ್ಯೇಕ ಕಾನೂನಿನ ಅವಶ್ಯಕತೆ ಇದೆ. ಮೈಕ್ರೋ ಫೈನಾನ್ಸ್‌ಗೆ ಸಂಬಂಧಿಸಿದಂತೆ ರಿಸರ್ವ್ ಬ್ಯಾಂಕ್‌ನ ಮಾರ್ಗಸೂಚಿಗಳು ನೋಂದಾಯಿತ ಮತ್ತು ಪರವಾನಗಿ ಹೊಂದಿದ ಕಂಪನಿಗಳಿಗಷ್ಟೇ ಅನ್ವಯವಾಗುತ್ತದೆ. ನೋಂದಣಿ ಮತ್ತು ಪರವಾನಗಿ ಇಲ್ಲದ ಕಂಪನಿಗಳಿಗೆ ಇದು ಅನ್ವಯವಾಗುವುದಿಲ್ಲ. ಅವುಗಳ ಕಾನೂನು ಬಾಹಿರ ನಡೆಗಳಿಂದ ಜನರನ್ನು ರಕ್ಷಿಸಲು ಸುಗ್ರೀವಾಜ್ಞೆ ಅಗತ್ಯ ಎಂದು ಸರ್ಕಾರ ರಾಜ್ಯಪಾಲರಿಗೆ ಸ್ಪಷ್ಟೀಕರಣ ನೀಡಲಿದೆ.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಮೈಸೂರು ಮಿತ್ರ 45 ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

ಸೋಮವಾರ ಗುರುವಾರ ಶನಿವಾರ

ಪ್ರತಿ ಜಾಹೀರಾತಿಗೆ ರೂ. 630 ಮಾತ್ರ

ಮೈಸೂರು ಮಿತ್ರ ಸೋಮವಾರ 10 ಫೆಬ್ರವರಿ 2025

ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್‌ವೇನಲ್ಲಿ ಹೊತ್ತಿ ಉರಿದ ಬಸ್: 18 ಪ್ರಯಾಣಿಕರು ಪಾರು



ಮಂಡ್ಯ, ಫೆ.9– ಚಲಿಸುತ್ತಿದ್ದ ಬಸ್‌ನ ಟೈರ್ ಬ್ಲಾಸ್ಟ್ ಆಗಿ ಖಾಸಗಿ ಬಸ್‌ವೊಂದು ಧಗ ಧಗನೆ ಹೊತ್ತಿ ಉರಿದ ಘಟನೆ ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್‌ವೇನಲ್ಲಿ ನಡೆದಿದೆ.

ಮಂಡ್ಯದ ಸ್ಯಾಂಜೋ ಆಸ್ಪತ್ರೆ ಸಮೀಪ ಈ ಘಟನೆ ನಡೆದಿದ್ದು, 18 ಮಂದಿ ಪ್ರಯಾಣಿಕರು ಯಾವುದೇ ಅಪಾಯವಿಲ್ಲದೇ ಪಾರಾಗಿದ್ದಾರೆ. ಅಶೋಕ್ ಅಂಡ್ ಲಾಜಿಸ್ಟಿಕ್ ಟ್ರಾವೆಲ್ಸ್‌ಗೆ ಸೇರಿದ ಬಸ್(ಕೆಎ–01ಎಲ್5736) ಬೆಂಗಳೂರಿನಿಂದ ಕಣ್ಣೂರಿಗೆ ತೆರಳುತ್ತಿದ್ದ ವೇಳೆ ಟೈರ್ ಬ್ಲಾಸ್ಟ್ ಆಗಿ ದುರಂತ ಸಂಭವಿಸಿದೆ.

ಟೈರ್ ಬ್ಲಾಸ್ಟ್ ಆಗುತ್ತಿದ್ದಂತೆ ಬೆಂಕಿ ಕಾಣಿಸಿಕೊಂಡಿದೆ. ಎಚ್ಚೆತ್ತ ಚಾಲಕ ಕೂಡಲೇ ಬಸ್ ನಿಲ್ಲಿಸಿ ಪ್ರಯಾಣಿಕರನ್ನು ಕೆಳಗಿಳಿಸಿದ್ದಾರೆ. ಇದಾದ ಕೆಲವೇ ಕ್ಷಣಗಳಲ್ಲಿ ಬೆಂಕಿ ಇಡೀ ಬಸ್ ವ್ಯಾಪಿಸಿದೆ.

ವಿಚಾರ ತಿಳಿಯುತ್ತಿದ್ದಂತೆ ಮಂಡ್ಯ ಅಗ್ನಿಶಾಮಕ ದಳದ ಅಧಿಕಾರಿಗಳು, ಸಿಬ್ಬಂದಿ ಸ್ಥಳಕ್ಕೆ ದೌಡಾಯಿಸಿ ಬೆಂಕಿ ನಂದಿಸಿದರು. ಆದರೆ, ಅಗ್ನಿಶಾಮಕ ತಂಡ ಬೆಂಕಿ ನಂದಿಸುವಷ್ಟರಲ್ಲಿ ಬಸ್ ಬಹುತೇಕ ಸುಟ್ಟು ಕರಕಲಾಗಿತ್ತು ಎಂದು ಸ್ಥಳೀಯರು ತಿಳಿಸಿದ್ದಾರೆ.

ಬಳಿಕ ಟ್ರಾವೆಲ್ಸ್ ಸಂಸ್ಥೆ ಪ್ರಯಾಣಿಕರಿಗೆ ಬೇರೆ ಬಸ್ ವ್ಯವಸ್ಥೆ ಮಾಡಿ ಕಳುಹಿಸಿದೆ. ಮಂಡ್ಯದ ಗ್ರಾಮಾಂತರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ.

ಇಂದು ಮೇಲುಕೋಟೆಯಲ್ಲಿ ವಿಶೇಷ ಪುನರ್ವಸು ಉತ್ಸವ

ಮೇಲುಕೋಟೆ: ಚೆಲುವನಾರಾಯಣ ಸ್ವಾಮಿ ದಿವ್ಯಕ್ಷೇತ್ರ ಜೀರ್ಣೋದ್ಧಾರಗೊಂಡ ವಾರ್ಷಿಕ ವಿಶೇಷ ಪುನರ್ವಸು ಉತ್ಸವ ಫೆ. 10ರಂದು ವೈಭವದಿಂದ ನಡೆಯಲಿದೆ

ರಾಮಾನುಜಾಚಾರ್ಯರು ಯದುಗಿರಿಯ ಬೆಟ್ಟದ ಮೇಲೆ ಕಗ್ಗತ್ತಲ ಕಾಡಿನ ಮಧ್ಯೆಯಿದ್ದ ಹುತ್ತ ಕರಗಿಸಿ ಚೆಲುವನಾರಾಯಣ ಸ್ವಾಮಿಯ ದಿವ್ಯಮಂಗಳ ರೂಪವನ್ನು ಮಕರ ಶುಕ್ಲ ಪುನರ್ವಸು ನಕ್ಷತ್ರದಂದು ಜಗತ್ತಿಗೆ ಪ್ರಾಕಾಶಪಡಿಸಿ ಕರ್ನಾಟಕದ ಧೀಮಂತ ಅರಸ ವಿಷ್ಣುವರ್ಧನನಿಂದ ದೇಗುಲ ನಿರ್ಮಿಸಿದ್ದರು. ಈ ಕಾರಣ ಪ್ರತಿವರ್ಷ ತೈ ಪುನರ್ವಸು ಉತ್ಸವ ನಡೆಯುತ್ತಾ ಬಂದಿದೆ. ಪುನರ್ವಸು ಅಂಗವಾಗಿ ಮೇಲುಕೋಟೆ ದೇವಾಲಯದಲ್ಲಿ ಇಡೀ ದಿನ ಧಾರ್ಮಿಕ ಕೈಂಕರ್ಯಗಳು ನೆರವೇರಲಿದ್ದು ಶ್ರೀ ಭಾಷ್ಯ ಕಾರ ಸನ್ನಿಧಿ ವಂಗೀಪುರಂ ನಂಬಿ ಮನೆತನ ಪ್ರತಿವರ್ಷ ಈ ಮಹೋತ್ಸವವನ್ನು ವೈಭವದಿಂದ ನಡೆಸಿಕೊಂಡುಬರುತ್ತಿದೆ. ರಾಮಾನುಜರ ಸನ್ನಿಧಿ ಅರ್ಚಕ ವಿದ್ವಾನ್ ಬಿ.ವಿ.ಆನಂದಾಳ್ವಾರ್ ನೇತೃತ್ವದಲ್ಲಿ ಉತ್ಸವದ ಕೈಂಕರ್ಯಗಳು ನಡೆಯಲಿದ್ದು ಪುನರ್ವಸು ಉತ್ಸವಕ್ಕಾಗಿ ದೇವಾಲಯ ಸಜ್ಜುಗೊಳ್ಳುತ್ತಿದೆ.

ರಾಜಕೀಯದಿಂದ ಹಳ್ಳಿಗಳಲ್ಲಿ ಮಾನವ ಸಂಬಂಧಗಳು ಹಾಳಾಗುವುದು ಬೇಡ

ಚಿಕ್ಕವೀರಕೊಪ್ಪಲು ಗ್ರಾಮದ ಊರ ಹಬ್ಬದಲ್ಲಿ ಕೇಂದ್ರ ಸಚಿವ ಹೆಚ್ಡಿಕೆ ಭಾಗಿ

ಮಂಡ್ಯ,ಫೆ.9– ರಾಜಕೀಯ ಕಾರಣದಿಂದ ಹಳ್ಳಿಗಳಲ್ಲಿ ಮಾನವ ಸಂಬಂಧಗಳು, ರಕ್ತ ಸಂಬಂಧಗಳು ಹಾಳಾಗುವುದು ಬೇಡ ಎಂದು ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಮನವಿ ಮಾಡಿದರು.

ಭಾನುವಾರ ನಾಗಮಂಗಲ ತಾಲೂಕಿನ ಚಿಕ್ಕವೀರಕೊಪ್ಪಲು ಗ್ರಾಮದಲ್ಲಿ ಊರಹಬ್ಬ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಗ್ರಾಮಸ್ಥರನ್ನು ಉದ್ದೇಶಿಸಿ ಮಾತನಾಡಿದ ಅವರು, ಮಾನವ ಸಂಬಂಧಗಳು, ರಕ್ತ ಸಂಬಂಧಗಳು ಹಳ್ಳಿಗಳಲ್ಲಿ ಗಾಢವಾಗಿದ್ದವು. ನೆರೆಹೊರೆಯವರು ಚೆನ್ನಾ ಎಂಬ ಭಾವನೆ ಎಲ್ಲರಲ್ಲಿಯೂ ಇತ್ತು. ಈ ಕಾರಣದಿಂದ ಗ್ರಾಮಗಳು ನೆಮ್ಮದಿಯಾಗಿದ್ದವು. ಈಗ ಆ ನೆಮ್ಮದಿ ಸಂತೋಷ ದೂರವಾಗಿದೆ ಎಂದು ಕಳವಳ ವ್ಯಕ್ತಪಡಿಸಿದರು.



ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರನ್ನು ಸನ್ಮಾನಿಸುತ್ತಿರುವುದು.

ಹಿಂದೆ ಹಳ್ಳಿಗಳು ಎಂದರೆ ನೆಮ್ಮದಿಯ ತಾಣಗಳು ಆಗಿದ್ದವು. ಯಾರದೇ ಮನೆಯಲ್ಲಿ ಶುಭ ಕಾರ್ಯಗಳು ನಡೆದರೆ ಇಡೀ ಊರಿಗೆ ಊರೇ ಸೇರುತ್ತಿತ್ತು ಪಂಕ್ತಿ ಭೋಜನ ಇರುತ್ತಿತ್ತು. ಅಜ್ಜ, ಅಜ್ಜಿ, ತಂದೆ ತಾಯಿಯ ಜತೆ ಅಂತಹ ಶುಭ ಕಾರ್ಯಗಳಲ್ಲಿ ಪಾಲ್ಗೊಂಡ ನೆನಪು ನನಗಿನ್ನೂ ಹಚ್ಚ ಹಸಿರಾಗಿದೆ. ಹಾಗೆಯೇ ಯಾರಿಗೆ ಕಷ್ಟ ಬಂದರೂ ಇಡೀ ಊರೇ ಮಿಡಿಯುತ್ತಿತ್ತು. ಅಂತಹ ವಾತಾವರಣದಿಂದ ನಾವು ವಂಚಿತರಾಗಿದ್ದೇವೆ ಎಂದು ಸಚಿವರು ಬೇಸರ ವ್ಯಕ್ತಪಡಿಸಿದರು.

ಹಳ್ಳಿ ಹಬ್ಬಗಳು, ಜಾತ್ರೆಗಳು ಜನರನ್ನು ಒಂದು ಮಾಡುತ್ತವೆ. ಸಾಮರಸ್ಯ ಮೂಡಿಸುತ್ತಿವೆ. ನಿಮ್ಮಲ್ಲಿ ರಾಜಕೀಯ ಇರಲಿ, ಅದು ಚುನಾವಣೆಗೆ ಸೀಮಿತವಾಗಿರಲಿ ಎಂದು ಅವರು ಹೇಳಿದರು.

ಈ ಸಂದರ್ಭದಲ್ಲಿ ಮಾಜಿ ಶಾಸಕ ಕೆ.ಸುರೇಶ್ ಗೌಡ, ಮನ್‌ಮುಲ್ ಮಾಜಿ ನಿರ್ದೇಶಕ ನೆಲ್ಲಿಗೆರೆ ಬಾಲು ಸೇರಿದಂತೆ ಗ್ರಾಮದ ಹಿರಿಯರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು. ಇದೇ ವೇಳೆ ಗ್ರಾಮಸ್ಥರು ಸಚಿವರನ್ನು ಆತ್ಮೀಯವಾಗಿ ಸನ್ಮಾನಿಸಿದರು. ಇದಕ್ಕೂ ಮೊದಲು ಸಚಿವರು ಬೆಟ್ಟದಮಲ್ಲೇನಹಳ್ಳಿ ಗ್ರಾಮದ ಶ್ರೀ ಆದಿಶಕ್ತಿ ಹುಚ್ಚಮ್ಮ ದೇವಿ ದೇವಸ್ಥಾನಕ್ಕೆ ತೆರಳಿ ಅಮ್ಮನವರ ದರ್ಶನ ಪಡೆದರು.

ದೇವಾಲಯಗಳು ಸಂಸ್ಕೃತಿ, ಪರಂಪರೆಯ ಪ್ರತಿಬಿಂಬ

ಬೋಳಮಾರನಹಳ್ಳಿ ಶ್ರೀ ಲಕ್ಷ್ಮಿದೇವಿಯ ದೇವಾಲಯ ಉದ್ಘಾಟನೆ ಮಹೋತ್ಸವದಲ್ಲಿ ಮಾಜಿ ಪ್ರಧಾನಿ ದೇವೇಗೌಡ ಕುಟುಂಬಸ್ಥರು ಭಾಗಿ

ಕೆ.ಆರ್.ಪೇಟೆ,ಫೆ.9–ದೇವಾಲಯಗಳು ನಮ್ಮ ಸಂಸ್ಕೃತಿ ಮತ್ತು ಪರಂಪರೆಯ ಪ್ರತಿಬಿಂಬವಾಗಿವೆ. ಇವುಗಳನ್ನು ಉಳಿಸಿ, ಸಂರಕ್ಷಿಸಿಕೊಂಡು ಹೋಗುವುದು ನಮ್ಮೆಲ್ಲರ ಕರ್ತವ್ಯ, ಇಂತಹ ದಿಕ್ಕಿನಲ್ಲಿ ಬೋಳಮಾರನಹಳ್ಳಿ ಶ್ರೀ ಲಕ್ಷ್ಮಿದೇವಿಯ ದೇವಾಲಯ ಉದ್ಘಾಟನೆ ಮಹೋತ್ಸವದ ಕಾರ್ಯ ಶ್ಲಾಘನೀಯ ಎಂದು ಸಂಸದ ಡಾ.ಸಿ.ಎನ್. ಮಂಜುನಾಥ್ ಹೇಳಿದರು.

ತಾಲೂಕಿನ ಕಿಕ್ಕೇರಿ ಹೋಬಳಿಯ ಬೋಳಮಾರನಹಳ್ಳಿ ಗ್ರಾಮದ ಶ್ರೀ ಲಕ್ಷ್ಮಿದೇವಿ ದೇವಾಲಯ ಉದ್ಘಾಟನೆ ಸಮಾರಂಭ ಹಾಗೂ ವಿಶೇಷ ಪೂಜಾ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಇತಿಹಾಸ ಹೊಂದಿರುವ ಬೋಳಮಾರನಹಳ್ಳಿ ಗ್ರಾಮ ಧಾರ್ಮಿಕ ಚಟುವಟಿಕೆಗಳ ಕೇಂದ್ರವಾಗಿದೆ. ದೇವಾಲಯ ದಾನಿಗಳ ನೆರವಿನಿಂದ ಇಂದು ಜೀರ್ಣೋದ್ಧಾರವನ್ನು ಅದ್ದೂರಿಯಾಗಿ ಮಾಡಿರುವುದು ಶ್ಲಾಘನೀಯ. ಪ್ರತಿಯೊಬ್ಬರು ದೇವರು ಮತ್ತು ಧಾರ್ಮಿಕ ಚಿಂತನೆಯನ್ನು



ಅಳವಡಿಸಿಕೊಳ್ಳಬೇಕು ಎಂದರು.

ಶಾಸಕ ಹೆಚ್.ಡಿ.ರೇವಣ್ಣ ಮಾತನಾಡಿ, ಈ ಗ್ರಾಮದ ರಸ್ತೆ ಮತ್ತು ಚರಂಡಿ ಅಭಿವೃದ್ಧಿಗೆ ವಿಧಾನಪರಿಷತ್ ಸದಸ್ಯ ಡಾ.ಸೂರಜ್ ರೇವಣ್ಣ ಅವರು ಸಾಕಷ್ಟು ಅನುದಾನ ನೀಡಿ ಈ ದೇವಾಲಯ ನಿರ್ಮಾಣಕ್ಕೂ 30 ಲಕ್ಷ ಅನುದಾನ ನೀಡಿದ್ದಾರೆ. ಬೋಳಮಾರನಹಳ್ಳಿ ಗ್ರಾಮದ ಮೇಲೆ ನಮ್ಮ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ಕುಟುಂಬದವರು ಇಟ್ಟಿರುವ ಪ್ರೀತಿ ವಿಶ್ವಾಸಕ್ಕೆ ಸಾಕ್ಷಿಯಾಗಿದೆ ಎಂದರು.

ನಮ್ಮ ಪೂರ್ವಿಕರು ಬಿಟ್ಟು ಹೋಗಿರುವ ದೇವಾಲಯಗಳನ್ನು ಸಂರಕ್ಷಿಸುವ ಜವಾಬ್ದಾರಿಯು ಪ್ರತಿಯೊಬ್ಬರ ಮೇಲಿದೆ ಎಂಬ ಮನೋಭಾವನೆಯಲ್ಲಿ ಒಗ್ಗಟ್ಟಿನಿಂದ ಶ್ರದ್ಧಾ ಭಕ್ತಿಯಿಂದ ಗ್ರಾಮದಲ್ಲಿ ಶ್ರೀ ಲಕ್ಷ್ಮೀದೇವಮ್ಮನವರ ದೇವಾಲಯವನ್ನು ನಿರ್ಮಾಣದ ಮೂಲಕ ನಮ್ಮ ಸನಾತನ ಪರಂಪರೆ ಉಳಿವಿಗೆ ಶ್ರಮಿಸಿರುವುದು ನಿಜಕ್ಕೂ ಸಂತೋಷದ ವಿಷಯ ಗ್ರಾಮದ ಶ್ರೀ ಲಕ್ಷ್ಮಿದೇವಿ ಜನರಿಗೆ ಅನುಗ್ರಹಿಸಲಿ ಎಂದರು.

ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡಿದ ಆದಿಚುಂಚನಗಿರಿ ಮಹಾ ಸಂಸ್ಥಾನ ಮಠದ ಕೊಮ್ಮೆರಹಳ್ಳಿ ವಿಶ್ವಮಾನವ ಕ್ಷೇತ್ರದ ಶ್ರೀ ಪುರುಷೋತ್ತಮಾನಂದನಾಥ ಸ್ವಾಮೀಜಿ, ನಮ್ಮಲ್ಲಿ ಎಷ್ಟೇ ಕಷ್ಟ ಕಾರ್ಪಣ್ಯಗಳಿದ್ದರೂ ದೇವಾಲಯಗಳಿಗೆ ಒಮ್ಮೆ ಭೇಟಿ ಕೊಟ್ಟರೆ ಆ ದೇವಾಲಯಗಳು ಬದುಕಿಗೆ ಹೊಸ ಸಂದೇಶಗಳನ್ನು ನೀಡುತ್ತವೆ. ಯಾವುದೇ ಒಬ್ಬ ವ್ಯಕ್ತಿ ದೇವಾಲಯಗಳಿಗೆ ತೆರಳಿದರೆ ಆ ವ್ಯಕ್ತಿಯಲ್ಲಿ ಒಳ್ಳೆಯ ಸದ್ಭಾವನೆಗಳು ಮೂಡುತ್ತವೆ. ಇದು ಮಾತ್ರವಲ್ಲ, ಅವರಲ್ಲಿ ಸಂಸ್ಕಾರ ಸಹ ಮೂಡುತ್ತದೆ ಎಂದರು.

ಆದಿಚುಂಚನಗಿರಿ ಮಹಾ ಸಂಸ್ಥಾನ ಹಾಸನ ಶಾಖಾ ಮಠದ ಶಂಭುನಾಥ ಸ್ವಾಮೀಜಿ ಆಶೀರ್ವಚನ ನೀಡಿದರು.

ವೇದಿಕೆಯಲ್ಲಿ ಶಾಸಕ ಸಿ.ಎನ್.ಬಾಲಕೃಷ್ಣ, ವಿಧಾನಪರಿಷತ್ ಸದಸ್ಯ ಸೂರಜ್ ರೇವಣ್ಣ, ರಾಜ್ಯ ಮಾರಾಟ ಮಹಾ ಮಂಡಳಿ ನಿರ್ದೇಶಕ ಚೋಳನಹಳ್ಳಿ ಪುಟ್ಟಸ್ವಾಮಿಗೌಡ, ಕೆಪಿಸಿಸಿ ಸದಸ್ಯ ಕಿಕ್ಕೇರಿ ಸುರೇಶ್, ಮುಖಂಡರಾದ ಬಿ.ಎಂ. ಕಿರಣ್, ಸಚಿನ್ ಚಲುವರಾಯಸ್ವಾಮಿ, ರಾಮೇಗೌಡ, ಜಿ.ಪಂ. ಮಾಜಿ ಸದಸ್ಯೆ ಕುಸುಮ ಬಾಲಕೃಷ್ಣ ಇತರರು ಉಪಸ್ಥಿತರಿದ್ದರು.

ಓದಿದ ಶಾಲೆಗಳ ಅಭಿವೃದ್ಧಿಗೆ ಸಹಕರಿಸಿ

ಚಿನಕುರಳಿ, ಫೆ.9– ಹಿರಿಯ ವಿದ್ಯಾರ್ಥಿಗಳು ತಾವು ಓದಿದಂತಹ ಶಾಲೆಗಳ ಶೈಕ್ಷಣಿಕ ಮಟ್ಟದ ಅಭಿವೃದ್ಧಿಗೆ ಪೂರಕವಾಗಿ ಸಹಕಾರ ನೀಡಬೇಕು ಎಂದು ಮೈಸೂರು ಡಯಟ್‌ನ ಹಿರಿಯ ಉಪನ್ಯಾಸಕ ಚಂದ್ರಶೇಖರ್ ಹೇಳಿದರು.

ನಾರಾಯಣಪುರ ಗ್ರಾಮದ ಸರಕಾರಿ ಪ್ರೌಢಶಾಲೆಯ 2002–03ನೇ ಸಾಲಿನ ವಿದ್ಯಾರ್ಥಿಗಳಿಂದ ನಡೆದ ಗುರುವಂದನೆ ಹಾಗೂ ಸ್ನೇಹಸಮ್ಮಿಲನ ಕಾರ್ಯಕ್ರಮದಲ್ಲಿ ಭಾಗವಹಿಸಿ ಸನ್ಮಾನ ಸ್ವೀಕರಿಸಿ ಬಳಿಕ ಮಾತನಾಡಿದರು.

ನಾರಾಯಣಪುರ ಸರಕಾರಿ ಪ್ರೌಢಶಾಲೆಗೆ ಶಿಕ್ಷಕನಾಗಿ ಬಂದಂತಹ ಸಂದರ್ಭದಲ್ಲಿ ಶಾಲೆಯಲ್ಲಿ ಮಕ್ಕಳ ವಿದ್ಯಾಭ್ಯಾಸಕ್ಕೆ ಬೇಕಿದ್ದ ಅಗತ್ಯ ಮೂಲಸೌಕರ್ಯಗಳ ಕೊರತೆ ಇತ್ತು. ಫಲಿತಾಂಶವು ಸಹ ಕಡಿಮೆ ಇತ್ತು ಆ ನಂತರ ಎಲ್ಲಾ ಶಿಕ್ಷಕರ ಪರಿಶ್ರಮದಿಂದ ಶಾಲೆಯ ಫಲಿತಾಂಶ ಹೆಚ್ಚಾಯಿತು. ಇದೀಗ ಶಾಲೆಯಲ್ಲಿ ಮಕ್ಕಳಿಗೆ ಶಿಕ್ಷಣಕ್ಕೆ ಬೇಕಿರುವ ಅಗತ್ಯ ಸೌಕರ್ಯಗಳನ್ನು ಸರಕಾರ ನೀಡಿದೆ. ಅವುಗಳನ್ನು ಬಳಸಿ ಶೈಕ್ಷಣಿಕ ಪ್ರಗತಿ ಸಾಧನೆ ಮಾಡಬೇಕು ಎಂದು ತಿಳಿಸಿದರು.

ನಿವೃತ್ತ ಶಿಕ್ಷಕ ಗಂಗಾಧರ್, ಶಿಕ್ಷಕ ರಾಜು ಮಾತನಾಡಿದರು. ಇದೇ ವೇಳೆ ಶಾಲೆಯ ಹಿರಿಯ ಶಿಕ್ಷಕರಾದ ಗಂಗಾಧರ್, ಚಂದ್ರಶೇಖರ್, ರಾಜು, ನಾಗೇಶ್, ಮಹಮದ್



ಗುರುವಂದನೆ, ಸ್ನೇಹಸಮ್ಮಿಲನ ಕಾರ್ಯಕ್ರಮದಲ್ಲಿ ಹಿರಿಯ ಶಿಕ್ಷಕರನ್ನು ಅಭಿನಂದಿಸಲಾಯಿತು.

ಇಲಿಯಾಜ್, ಸುಜಾತ, ವೆಂಕಟಲಕ್ಷ್ಮಿ, ಭಾನುಮತಿ, ಲಿಂಗಯ್ಯ ಅವರನ್ನು ಸನ್ಮಾನಿಸಿ, ಅಭಿನಂದಿಸಿದರು. ಕಾರ್ಯಕ್ರಮಕ್ಕೂ ಮುನ್ನ ನಾರಾಯಣಪುರ ಸರ್ಕಲ್‌ನಿಂದ ಎಲ್ಲಾ ಶಿಕ್ಷಕರನ್ನು ಅದ್ದೂರಿ ಕಲಾತಂಡದೊಂದಿಗೆ ಮೆರವಣಿಗೆ ಮೂಲಕ ಕರೆತರಲಾಯಿತು.

ಈ ಸಂದರ್ಭದಲ್ಲಿ ಶಾಲೆಯ ಮುಖ್ಯ ಶಿಕ್ಷಕಿ ವಿದ್ಯಾಶ್ರೀ, ಯತೀಂದ್ರಕುಮಾರ್, ದರ್ಶನ್ ಹಿರಿಯ ವಿದ್ಯಾರ್ಥಿಗಳಾದ ಯಧುರಾಜ್, ಕೆ.ಪಿ.ಯೋಗಣ್ಣ, ಪುಟ್ಟರಾಜು, ಪರಮೇಶ್, ಜಿ.ಯೋಗ, ರವಿ ಸೇರಿದಂತೆ ಎಲ್ಲಾ ಹಿರಿಯ ವಿದ್ಯಾರ್ಥಿ–ವಿದ್ಯಾರ್ಥಿನಿಯರು ಇದ್ದರು.

ನಾಗರಾಜು ನಿಧನ



ಭಾರತೀನಗರ, ಫೆ.9– ಇಲ್ಲಿಗೆ ಸಮೀಪದ ಬೊಮ್ಮನದೊಡ್ಡಿ ಗ್ರಾಮದ ಲೇ ಮೊಳ್ಳೆಕರಿಗೌಡರ ಪುತ್ರ ಗ್ರಾಮದ ಜೆಡಿಎಸ್ ಪಕ್ಷದ ಹಿರಿಯ ಮುಖಂಡ ಬಿ.ನಾಗರಾಜು(ನಾಗಣ್ಣ) ಭಾನುವಾರ ಮುಂಜಾನೆ ಹೃದಯಾಘಾತದಿಂದ ನಿಧನ ಹೊಂದಿದ್ದಾರೆ. ಅವರಿಗೆ 65 ವರ್ಷ ವಯಸ್ಸಾಗಿತ್ತು.

ಮೃತರು ಓರ್ವ ಪುತ್ರ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಸೋಮವಾರ ಬೆಳಗ್ಗೆ 10 ಗಂಟೆಗೆ ಸ್ವಗ್ರಾಮದ ತಮ್ಮ ಜಮೀನಿನಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಒಂದನೇ ಪುಟದಿಂದ

ಲಂಚ ನೀಡಬೇಕು

ಉಪನ್ಯಾಸಕರು ಒಂದಲ್ಲಾ ಒಂದು ಸಮಸ್ಯೆ ಎದುರಿಸುತ್ತಿದ್ದಾರೆ. ಈ ಹಿನ್ನೆಲೆ ನಿಮ್ಮ ನ್ಯಾಯಯುತ ಬೇಡಿಕೆ ಈಡೇರಿಸಲು ಪ್ರಮಾಣಿಕ ಪ್ರಯತ್ನ ಮಾಡುವೆ ಎಂದು ಭರವಸೆ ನೀಡಿದರು.

ಕರ್ನಾಟಕದ ಕಾಲೇಜುಗಳಲ್ಲಿ 65 ಸಾವಿರ ಹುದ್ದೆ ಖಾಲಿ ಇದ್ದು, ಇದರ ಭರ್ತಿಗೆ ಸರ್ಕಾರ ಮುಂದಾಗುತ್ತಿಲ್ಲ. ವಿವಿಧ ರೀತಿಯ ಎರಡು ಮೂರು ಪದವಿ ಪಡೆದ ಅತಿಥಿ ಉಪನ್ಯಾಸಕರ ಪರಿಸ್ಥಿತಿ ಹೇಳತೀರದಾಗಿದೆ. ಇವರಿಗೆ ಸರ್ಕಾರ ಕೇವಲ 10 ಸಾವಿರ ರೂಪಾಯಿ ವೇತನ ನೀಡುತ್ತಿದೆ. ಈ ಹಣವನ್ನು ಮೂರು ತಿಂಗಳಿಗೊ ನಾಲ್ಕು ತಿಂಗಳಿಗೊಮ್ಮೆ ನೀಡುತ್ತಿದೆ ಎಂದು ವಿವೇಕಾನಂದ ತಿಳಿಸಿದರು.

ಪ್ರತಿಯೊಬ್ಬ ಉಪನ್ಯಾಸಕನಿಂದ ವೈದ್ಯಕೀಯ ವೆಚ್ಚಕ್ಕಾಗಿ ಸರ್ಕಾರ ವಿಮೆ ಮಾದರಿ ಹಣವನ್ನು ವೇತನದಲ್ಲೆ ಕಡಿತ ಮಾಡುತ್ತದೆ. ಆದರೆ ಉಪನ್ಯಾಸಕರಿಂದ ಸಂಗ್ರಹಿಸಿರುವ ಈ ಹಣವನ್ನು ಉಪನ್ಯಾಸಕರಿಗೆ ನೀಡುತ್ತಿಲ್ಲ. ಉದಾಹರಣೆಗೆ ಮಂಡ್ಯ ಜಿಲ್ಲೆ ಒಂದರಲ್ಲಿ 94 ಲಕ್ಷ ಬಿಲ್ ನೀಡಬೇಕಿದ್ದು, ಹಣ ಬಿಡುಗಡೆಗಾಗಿ ಸರ್ಕಾರಕ್ಕೆ ಪ್ರಸ್ತಾವನೆ ಕಳುಹಿಸಲಾಗಿದೆ. ಆದರೆ 94 ಲಕ್ಷದಲ್ಲಿ ಸರ್ಕಾರ ಕೇವಲ 3 ಲಕ್ಷ ರೂಪಾಯಿ ನೀಡಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಮೈಸೂರು, ಚಾಮರಾಜನಗರ, ಕೊಡಗು, ಹಾಸನ ಸೇರಿದಂತೆ ರಾಜ್ಯಾದ್ಯಾಂತ ಎಲ್ಲಾ ಜಿಲ್ಲೆಗಳಲ್ಲಿ ಇದೇ ಪರಿಸ್ಥಿತಿ. ಈ ಸಂಬಂಧ ಸರ್ಕಾರದ ಮೇಲೆ ಎಷ್ಟೆ ಒತ್ತಡ ಹೇರಿದ್ದರೂ ಹಣ ಬಿಡುಗಡೆ ಮಾಡುತ್ತಿಲ್ಲ. ಇರುವ ಹಣವನ್ನೆಲ್ಲಾ ಗ್ಯಾರಂಟಿ ಯೋಜನೆಗೆ ಬಳಸಿಕೊಂಡಿರುವ ಕಾರಣ ಸರ್ಕಾರದ ಆರ್ಥಿಕ ಪರಿಸ್ಥಿತಿ ಹೀನಾಯವಾಗಿದೆ ಎಂದು ಆರೋಪಿಸಿದರು.

ಪದವಿ ಪೂರ್ವ ಕಾಲೇಜುಗಳಲ್ಲಿ ಉಪನ್ಯಾಸಕರು ಒತ್ತಡದಲ್ಲಿ ಕೆಲಸ ಮಾಡುತ್ತಾರೆ. ಈ ಹಿನ್ನೆಲೆ ತಿಂಗಳಿನಲ್ಲಿ ಎರಡನೇ ಹಾಗೂ ನಾಲ್ಕನೆ ಶನಿವಾರ ರಜೆ ಮಂಜೂರು ಮಾಡಿಸುವ ನಿಟ್ಟಿನಲ್ಲಿ ಪ್ರಯತ್ನ ಮಾಡುತ್ತೇನೆ ಎಂದು ವಿವೇಕಾನಂದ ತಿಳಿಸಿದರು.

ಮಾಜಿ ವಿಧಾನ ಪರಿಷತ್ ಸದಸ್ಯ ಕೆ.ಟಿ.ಶ್ರೀಕಂಠೇಗೌಡ, ಬೆಂಗಳೂರಿನ ಮಾನ್ಯತೆ ಮತ್ತು ಅನುದಾನ ಶಾಲಾ ಶಿಕ್ಷಣ ಇಲಾಖೆ ಉಪ ನಿರ್ದೇಶಕ ಡಾ.ಟಿ.ಆರ್.ಸಿದ್ದರಾಜು, ಮಂಡ್ಯ ಜಿಲ್ಲೆ ಶಾಲಾ ಶಿಕ್ಷಣ ಇಲಾಖೆ ಉಪ ನಿರ್ದೇಶಕ ಚೆಲುವಯ್ಯ, ಹಾಸನ ಜಿಲ್ಲೆ ಉಪ ನಿರ್ದೇಶಕ ಕೆ.ಪಿ.ಗಂಗಾಧರ್, ಜೆಎಸ್‌ಎಸ್ ಮಹಾ ವಿದ್ಯಾಪೀಠದ ಸಹಾಯಕ ನಿರ್ದೇಶಕ ನಿರಂಜನಮೂರ್ತಿ, ಉಪನ್ಯಾಸಕರ ಸಂಘದ ಮೈಸೂರು ಜಿಲ್ಲಾಧ್ಯಕ್ಷ ಎಂ.ಎಂ.ಮಹದೇವ್, ಗೌರವಾಧ್ಯಕ್ಷ ಚಂದ್ರಶೇಖರ್, ವಿಶ್ವನಾಥಯ್ಯ ಶೆಟ್ಟಿ, ಡಾ.ಬುಶ್ರಾ ಬೇಗಂ, ಟಿ. ಸಿದ್ದರಾಜು, ಎಸ್.ಆರ್. ಲೋಹಿತ್, ಹೆಚ್.ಎನ್.ಶಿವಪ್ಪ, ಪಿ.ಮಹದೇವಸ್ವಾಮಿ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಇಂದಿನಿಂದ ಕುಂಭಮೇಳ

ವಿವಿಧ ಜಿಲ್ಲೆಗಳಿಂದ ಹೆಚ್ಚುವರಿ ಬಸ್ ವ್ಯವಸ್ಥೆ ಕಲ್ಪಿಸಿದೆ. ತಿ.ನರಸೀಪುರ ಪಟ್ಟಣದಲ್ಲಿ ಒಂದು ದೇವಸ್ಥಾನದಿಂದ ಮತ್ತೊಂದು ದೇವಸ್ಥಾನಕ್ಕೆ ಓಡಾಡಲು ಸಾರ್ವಜನಿಕರಿಗೆ ಆಗುವ ತೊಂದರೆ ಗಮನಿಸಿ ಜಿಲ್ಲಾಡಳಿತದಿಂದ ಉಚಿತ ಬಸ್ ವ್ಯವಸ್ಥೆ ಮಾಡಲಾಗಿದೆ. ಕುಂಭಮೇಳ ನಡೆಯುವ ಆಸು ಪಾಸು ಸ್ವಚ್ಛತೆ ಕಾಪಾಡುವ ದೃಷ್ಟಿಯಿಂದ ಹೆಚ್ಚುವರಿಯಾಗಿ ಹೊರಗುತ್ತಿಗೆ ಮೇಲೆ 180 ಪೌರ ಕಾರ್ಮಿಕರನ್ನು ನೇಮಕ ಮಾಡಿಕೊಳ್ಳಲಾಗಿದ್ದು, ಇಂದು ಸಂಜೆ ಒಳಗೆ ಸಂಪೂರ್ಣವಾಗಿ ಕ್ಷೇತ್ರ ಸ್ವಚ್ಛತೆಯಾಗಿ ನಾಳೆ ಕುಂಭಮೇಳಕ್ಕೆ ಅಣಿಯಾಗಲಿದೆ ಎಂದು ತಿಳಿಸಿದ ಜಿಲ್ಲಾಧಿಕಾರಿಗಳು ಕುಂಭ ಮೇಳದ ಅಂತಿಮ ದಿನವಾದ ಫೆ.12ರಂದು ಸಾರ್ವಜನಿಕ ಒತ್ತಾಯದ ಮೇರೆಗೆ ಪುಣ್ಯ ಸ್ನಾನದಲ್ಲಿ ಪಾಲ್ಗೊಳ್ಳಲು ಅನುಕೂಲ ಕಲ್ಪಿಸಿ ಕೊಡುವ ನಿಟ್ಟಿನಲ್ಲಿ ತಿ.ನರಸೀಪುರ ಪಟ್ಟಣ ವ್ಯಾಪ್ತಿಯ ಶಾಲಾ ಕಾಲೇಜಿಗೆ ರಜೆ ಘೋಷಣೆ ಮಾಡಲಾಗಿದೆ ಎಂದರು.

ಮದ್ಯ ಮಾರಾಟ ನಿಷೇಧ: ಕುಂಭಮೇಳ ಹಿನ್ನೆಲೆಯಲ್ಲಿ ಯಾವುದೇ ಅಹಿತಕರ ಘಟನೆ ನಡೆಯದಂತೆ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವ ಸಲುವಾಗಿ ಫೆ.9ರ ಮಧ್ಯರಾತ್ರಿ 12 ಗಂಟೆಯಿಂದ ಫೆ.13ರ ಬೆಳಗ್ಗೆ 6 ರವರೆಗೆ ತಿ.ನರಸೀಪುರ ಪುರಸಭೆ ವ್ಯಾಪ್ತಿಯ ಎಲ್ಲಾ ಮದ್ಯದಂಗಡಿ ಹಾಗೂ ಬಾರ್ ಮತ್ತು ರೆಸ್ಟೋರೆಂಟ್‌ಗಳಲ್ಲಿ ಮದ್ಯ ಮಾರಾಟ ನಿಷೇಧಿಸಲಾಗಿದೆ ಎಂದು ಜಿಲ್ಲಾಧಿಕಾರಿ ಲಕ್ಷ್ಮಿಕಾಂತ ರೆಡ್ಡಿ ಆದೇಶಿಸಿದ್ದಾರೆ.

ಇದಕ್ಕೂ ಮೊದಲು ಜಿಲ್ಲಾಧಿಕಾರಿಗಳು ಪುಣ್ಯಸ್ನಾನ ಮಾಡುವ ಸಂಗಮ ಕ್ಷೇತ್ರ ಪರಿಶೀಲಿಸಿದರು. ಈ ವೇಳೆ ಮಹಿಳೆಯರ ಬಟ್ಟೆ ಬದಲಿಸುವ ಕೊಠಡಿಗೆ ವಿದ್ಯುತ್ ಅಳವಡಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು. ಭಕ್ತರು ಹಾಗೂ ವಿಐಪಿಗಳು ಪುಣ್ಯ ಕ್ಷೇತ್ರಕ್ಕೆ ಸ್ನಾನ ಮಾಡಲು ಸರತಿ ಸಾಲಿನಲ್ಲಿ ಸಾಗಲಿರುವ ಬ್ಯಾರಿಕೇಡ್ ವ್ಯವಸ್ಥೆ ಪರಿಶೀಲಿಸಿದ ಅವರು ಸಾರ್ವಜನಿಕರಿಗೆ ವಿಶಾಲವಾದ ಜಾಗ ಮಾಡಿ ಸುಗಮವಾಗಿ ತೆರಳಲು ಅವಕಾಶ ಮಾಡಿಕೊಡಿ. ಬೇಕಿದ್ದಲ್ಲಿ ವಿಐಪಿಗಳಿಗೆ ಓಡಾಡಲು ಮಾಡಿಕೊಟ್ಟಿರುವ ಸ್ಥಳಾವಕಾಶವನ್ನು ಸ್ವಲ್ಪ ಕಿರಿದು ಮಾಡಿ. ಬ್ಯಾರಿಕೇಡ್‌ಗಳನ್ನು ಚೌಡಯ್ಯ ವೃತ್ತದವರೆಗೂ ಅಳವಡಿಸಿ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡುವಂತೆ ಸೂಚನೆ ನೀಡಿದರು.

ಇಂದಿನ ಕಾರ್ಯಕ್ರಮ

ಸೋಮವಾರ ಬೆಳಗ್ಗೆ ಕುಂಭಮೇಳಕ್ಕೆ ವಿದ್ಯುಕ್ತ ಚಾಲನೆ ದೊರಕಲಿದ್ದು, ಫೆ.10ರಂದು ಬೆಳಗ್ಗೆ 9 ಗಂಟೆಗೆ ಮಾಘ ಶುದ್ಧ ತ್ರಯೋದಶಿ ಪುಷ್ಯ ನಕ್ಷತ್ರ ಶ್ರೀಅಗಸ್ತ್ಯೇಶ್ವರ ಸನ್ನಿಧಿಯಲ್ಲಿ ಅನುಜ್ಞೆ, ಪುಣ್ಯಾಹ, ಕಲಶ ಸ್ಥಾಪನೆ, ಗಣಹೋಮ, ಅಭಿಷೇಕ, ದೇವತಾರಾಧನೆ, ಯಾಗ ಶಾಲಾ ಪ್ರವೇಶ, ಪುಣ್ಯಾಹ, ವಾಸ್ತು ಹೋಮಗಳು ನಡೆಯಲಿವೆ. ಅಂದು ಸಂಜೆ ಧರ್ಮಸಭೆ, ಸಾಂಸ್ಕೃತಿಕ ಕಾರ್ಯಕ್ರಮಗಳ ಉದ್ಘಾಟನೆ ಮತ್ತು ಧ್ವಜಾರೋಹಣ ನಡೆಯಲಿದೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ವಹಿಸಲಿದ್ದಾರೆ. ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಉಪಸ್ಥಿತಿಯಲ್ಲಿ ಸಮಾಜ ಕಲ್ಯಾಣ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಉದ್ಘಾಟನೆ ನೆರವೇರಿಸಲಿದ್ದಾರೆ. ವಿಶೇಷ ಆಹ್ವಾನಿತರಾಗಿ ಸಚಿವ ಕೆ.ವೆಂಕಟೇಶ್, ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ, ವಿರೋಧ ಪಕ್ಷದ ನಾಯಕ ಆರ್.ಅಶೋಕ್, ಸಂಸದರಾದ ಸುನೀಲ್ ಬೋಸ್, ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಶಾಸಕರಾದ ಸಿ.ಅನಿಲ್ ಕುಮಾರ್, ಎ.ಬಿ.ರಮೇಶ್ ಬಂಡಿ ಸಿದ್ದೇಗೌಡ, ಶಾಸಕ ಸಿ.ಪುಟ್ಟರಂಗಶೆಟ್ಟಿ, ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಡಾ.ಮಾನಸ, ಕರ್ನಾಟಕ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷೆ ಡಾ.ಪುಷ್ಪ ಅಮರ್ ನಾಥ್ ಭಾಗವಹಿಸಲಿದ್ದಾರೆ.

ಬೀರೆನ್ ಸಿಂಗ್ ರಾಜೀನಾಮೆ

ಜಾರಿಗೊಳಿಸಿದೆ. ಮಣಿಪುರದ ಅಭಿವೃದ್ಧಿ, ಜನರ ಸುರಕ್ಷತೆ ವಿಚಾರದಲ್ಲಿ ಹಲವು ಯೋಜನೆಗಳನ್ನು ಕೈಗೆತ್ತಿಕೊಂಡು ಕೆಲಸ ಮಾಡಿದ್ದೇವೆ. ಈ ಪೈಕಿ ಕೆಲ ಯೋಜನೆಗಳನ್ನು ಇಲ್ಲಿ ಉಲ್ಲೇಖಿಸಲು ಬಯಸುತ್ತೇನೆ ಎಂದು ಬಿರೆನ್ ಸಿಂಗ್ ಪ್ರಮುಖ ವಿಷಯಗಳನ್ನು ಉಲ್ಲೇಖಿಸಿದ್ದಾರೆ. ಮಣಿಪುರದ ಸಂಸ್ಕೃತಿ, ಆಚಾರ ವಿಚಾರ, ಪದ್ಧತಿಗಳನ್ನು ಗೌರವಿಸಿ ಸೂಕ್ತ ಸ್ಥಾನಮಾನ ಕಲ್ಪಿಸಲಾಗಿದೆ. ಜೊತೆಗೆ ಮಣಿಪರದ ಶ್ರೀಮಂತ ಸಂಸ್ಕೃತಿಯನ್ನು ಮುಂದುವರಿಸುವ ಯೋಜನೆಗಳನ್ನು ಕೈಗೊಳ್ಳಲಾಗಿದೆ. ಅಂತಾರಾಷ್ಟ್ರೀಯ ಗಡಿ ಮೂಲಕ ಅಕ್ರಮವಾಗಿ ನುಸುಳುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗಿದೆ. ಜೊತೆಗೆ ಹೀಗೆ ಬಂಧಿಸಿದ ಆರೋಪಿಗಳನ್ನು ಗಡೀಪಾರು ಮಾಡುವ ಕಟ್ಟು ನಿಟ್ಟಿನ ನೀತಿಯನ್ನು ಜಾರಿಗೊಳಿಸಲಾಗಿದೆ. ಮಾದಕ ದ್ರವ್ಯಗಳ ವಿರುದ್ಧ ಮತ್ತಷ್ಟು ಶಕ್ತಿಯುತವಾಗಿ ಹೋರಾಡಿದ್ದೇವೆ. ಈ ಪೈಕಿ ಹಲವು ಜಾಲಗಳನ್ನು ಪತ್ತೆ ಹಚ್ಚಿಸಿ ಬಂಧಿಸಲಾಗಿದೆ. ಬಯೋಮೆಟ್ರಿಕ್ ಸೇರಿದಂತೆ ನಾಗರೀಕ ಸುರಕ್ಷತಾ ವಿಧಾನಗಳನ್ನು ಜಾರಿ ಮಾಡಲಾಗಿದೆ. ಗಡಿಯಲ್ಲಿ ತಡೆಗೋಡೆ ಸೇರಿದಂತೆ ಇತರ ಅಭಿವೃದ್ಧಿ ಕೆಲಸಗಳು ಪ್ರಗತಿಯಲ್ಲಿದೆ ಎಂದು ಬಿರೆನ್ ಸಿಂಗ್ ತಮ್ಮ ರಾಜೀನಾಮೆ ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ಮಣಿಪುರ ಹಿಂಸಾಚಾರ ವೇಳೆ ಬಿರೆನ್ ಸಿಂಗ್ ಪ್ರತಿಪಕ್ಷ ಸೇರಿದಂತೆ ದೇಶಾದ್ಯಂತ ಭಾರಿ ಪ್ರತಿಭಟನೆ ಎದುರಿಸಿದ್ದರು. ಮಣಿಪುರ ಅಮಾಯಕ ಜನರ ಪ್ರಾಣ ಉಳಿಸಲು ಮುಖ್ಯಮಂತ್ರಿ ಬಿರೆನ್ ಸಿಂಗ್ ಮುಂದಾಗಿಲ್ಲ, ಮಣಿಪುರ ಹಿಂಸಾಚಾರದಲ್ಲಿ ಮುಖ್ಯಮಂತ್ರಿ ಪಾತ್ರ ಸೇರಿದಂತೆ ಹಲವು ಆರೋಪಗಳು ಬೀರೆನ್ ಸಿಂಗ್ ಮೇಲೆ ಕೇಳಿಬಂದಿದೆ. ಸಂಸತ್ತಿನಲ್ಲಿ ಮೋದಿ ಸರ್ಕಾರಕ್ಕೂ ಮಣಿಪುರ ಹಿಂಸಾಚಾರ ತೀವ್ರ ತಲೆನೋವಾಗಿ ಪರಿಣಮಿಸಿತ್ತು. ಈ ಹಿಂಸಾಚಾರದ ನಡುವೆ ಬಿರೆನ್ ಸಿಂಗ್ ರಾಜೀನಾಮೆಗೆ ಮುಂದಾಗಿದ್ದರು. ಆದರೆ ಹಿಂಸಾಚಾರ ನಡೆಯುತ್ತಿರುವ ವೇಳೆ ರಾಜೀನಾಮೆ ನೀಡಿದರೆ ಪಲಾಯಾನ ಮಾಡಿದ ಅಪವಾದ ಬರಲಿದೆ ಎಂದು ಬಿಜೆಪಿ ಮನ ಒಲಿಸಿತ್ತು. ಹೀಗಾಗಿ ಮತ್ತೆ ಮುಖ್ಯಮಂತ್ರಿಯಾಗಿ ಮುಂದುವರಿದ ಬಿರೆನ್ ಸಿಂಗ್ ಮಣಿಪುರದ ಪರಿಸ್ಥಿತಿ ನಿಯಂತ್ರಣಕ್ಕೆ ತಂದಿದ್ದರು. ಆದರೆ ಈಗಲೂ ಮಣಿಪುರ ಸಂಪೂರ್ಣ ಶಾಂತವಾಗಿಲ್ಲ. ಮಣಿಪುರದ ಬಿಜೆಪಿಯಲ್ಲಿ ಆತಂರಿಕ ಬಡಿದಾಟ ಜೋರಾಗಿದೆ. ಮಣಿಪುರ ಹಿಂಸಾಚಾರ ವಿಚಾರದಲ್ಲಿ ಆರಂಭಗೊಂಡ ಬಂಡಾಯ ಇದೀಗ ಬಿರೆನ್ ಸಿಂಗ್ ವಿರುದ್ಧ ತೀವ್ರವಾಗಿ ನಡೆದಿತ್ತು. ಇತ್ತ ಮಣಿಪುರ ಬಿಜೆಪಿ ಸರ್ಕಾರಕ್ಕೆ ಬೆಂಬಲ ನೀಡಿದ ಪ್ರಾದೇಶಿಕ ಪಕ್ಷ ಬೆಂಬಲ ವಾಪಸ್ ಪಡೆಯುವ ಎಚ್ಚರಿಕೆ ನೀಡಿತ್ತು. ರಾಜಕೀಯ ಬೆಳವಣಿಗೆ ಬೆನ್ನಲ್ಲೇ ಬಿರೆನ್ ಸಿಂಗ್ ರಾಜೀನಾಮೆ ನೀಡಿದ್ದಾರೆ.

ಅತಿಶಿ ರಾಜೀನಾಮೆ

ಕ್ಷೇತ್ರಗಳ ಪೈಕಿ 48 ಕ್ಷೇತ್ರಗಳಲ್ಲಿ ಬಿಜೆಪಿ ಅಭೂತಪೂರ್ವ ಗೆಲುವು ಸಾಧಿಸಿದೆ. ಫೆ.5 ರಂದು ನಡೆದ ಚುನಾವಣೆಯಲ್ಲಿ ಎಎಪಿ 22 ಸ್ಥಾನಗಳನ್ನು ಗೆದ್ದರೆ, ಕಾಂಗ್ರೆಸ್ ಶೂನ್ಯಕ್ಕೆ ತೃಪ್ತಿಪಟ್ಟುಕೊಂಡಿದೆ.

ಕಳೆದ ವರ್ಷ ಸೆಪ್ಟೆಂಬರ್‌ನಲ್ಲಿ ಎಎಪಿ ಸಂಚಾಲಕ ಅರವಿಂದ ಕೇಜ್ರಿವಾಲ್ ಅವರ ವಿರುದ್ಧ ಕೇಳಿಬಂದ ಭ್ರಷ್ಟಾಚಾರ ಆರೋಪಗಳ ನಡುವೆ ಅವರು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. ಅದಾದ ಬಳಿಕ ಅತಿಶಿ ದೆಹಲಿ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದರು.

ಇಂಗ್ಲೆಂಡ್ ವಿರುದ್ಧ ಏಕದಿನ ಸರಣಿ ಗೆದ್ದ ಭಾರತ

ಹಾಕಿಕೊಟ್ಟರು. ಕಳೆದ ಪಂದ್ಯದ ಆಟ ಪುನರಾವರ್ತಿಸಿದ ಗಿಲ್ 52 ಎಸೆತಗಳಲ್ಲಿ 1 ಸಿಕ್ಸರ್, 9 ಬೌಂಡರಿ ಒಳಗೊಂಡ 60 ರನ್ ಸಿಡಿಸಿ ವಿಕೆಟ್ ಒಪ್ಪಿಸಿದರು. ನಂತರ ಬಂದ ವಿರಾಟ್ ಕೊಹ್ಲಿ 8 ಎಸೆತಗಳಲ್ಲಿ 1 ಬೌಂಡರಿ ಒಳಗೊಂಡ 5 ರನ್ ಗಳಿಸಿ ನಿರ್ಗಮಿಸುವ ಮೂಲಕ ಅಭಿಮಾನಿಗಳಿಗೆ ಮತ್ತೊಮ್ಮೆ ನಿರಾಸೆ ಮೂಡಿಸಿದರು.

ರೋಹಿತ್ ಭರ್ಜರಿ ಶತಕ: ಕಳಪೆ ಫಾರ್ಮ್‌ನಿಂದ ಹೊರಬಂದ ರೋಹಿತ್ ಶರ್ಮಾ ಕೇವಲ 30 ಎಸೆತಗಳಲ್ಲಿ ಅರ್ಧಶತಕ ಸಿಡಿಸಿ ಸಂಭ್ರಮಿಸಿದರು. ಬಳಿಕ ನಾಯಕನಿಗೆ ತಕ್ಕ ಆಟವಾಡಿದ ರೋಹಿತ್ ಶರ್ಮಾ 76 ಎಸೆತಗಳಲ್ಲಿ ವೃತ್ತಿ ಜೀವನದ 32ನೇ ಶತಕ ಸಿಡಿಸಿ ಸಂಭ್ರಮಿಸಿದರು. ಅಂತಿಮವಾಗಿ ರೋಹಿತ್ 90 ಎಸೆತಗಳಲ್ಲಿ 7 ಸಿಕ್ಸರ್, 12 ಬೌಂಡರಿ ಒಳಗೊಂಡ 119 ರನ್ ಗಳಿಸಿ ನಿರ್ಗಮಿಸಿದರು.

ಗೆಲುವಿನ ದಡ ಸೇರಿಸಿದ ಅಕ್ಷರ್, ಶ್ರೇಯಸ್: ನಂತರ ಬಂದ ಶ್ರೇಯಸ್ ಅಯ್ಯರ್ 47 ಎಸೆತಗಳಲ್ಲಿ 3 ಬೌಂಡರಿ, 1ಸಿಕ್ಸರ್ ಒಳಗೊಂಡ 44 ಹಾಗೂ ಅಕ್ಷರ್ ಪಟೇಲ್ 4 ಬೌಂಡರಿ ಒಳಗೊಂಡ 41 ರನ್ ಗಳಿಸುವ ಮೂಲಕ ತಂಡವನ್ನು ಗೆಲುವಿನ ದಡ ಸೇರಿಸಿದರು. ಉಳಿದಂತೆ ಕನ್ನಡಿಗ ಕೆ.ಎಲ್.ರಾಹುಲ್, ಹಾರ್ದಿಕ್ ಪಾಂಡ್ಯ 10, ರವೀಂದ್ರ ಜಡೇಜಾ 11 ರನ್ ಗಳಿಸಿದರು. ಇಂಗ್ಲೆಂಡ್ ಪರ ಕೇಮಿ ಓವರ್‌ಟನ್ 2, ಗಸ್ ಅಟ್ಕಿನ್‌ಸನ್, ಆದೀಲ್ ರಶೀದ್ ಹಾಗೂ ಲಿವಿಂಗ್‌ಸ್ಟನ್ ತಲಾ ಒಂದೊಂದು ವಿಕೆಟ್ ಪಡೆದರು.

ಇದಕ್ಕೂ ಮುನ್ನಾ ಮೊದಲು ಬ್ಯಾಟಿಂಗ್ ಮಾಡಿದ ಇಂಗ್ಲೆಂಡ್‌ಗೆ ಫಿಲಿಪ್ ಸಾಲ್ಟ್ ಹಾಗೂ ಬೆನ್ ಡಕೆಟ್ ಮೊದಲ ವಿಕೆಟ್‌ಗೆ 81 ರನ್‌ಗಳ ಜೊತೆಯಾಟವಾಡುವ ಮೂಲಕ ಉತ್ತಮ ಆರಂಭ ಒದಗಿಸಿದರು. ಈ ವೇಳೆ 26 ರನ್ ಗಳಿಸಿದ್ದ ಸಾಲ್ಟ್ ವಿಕೆಟ್ ಒಪ್ಪಿಸಿದರು. ಇದರ ಬೆನ್ನಲ್ಲೇ ಅರ್ಧಶತಕ ಸಿಡಿಸಿ ಶತಕದತ್ತ ಮುನ್ನುಗ್ಗುತ್ತಿದ್ದ ಡಕೆಟ್ 65 ರನ್ ಗಳಿಸಿ ನಿರ್ಗಮಿಸಿದರು. ನಂತರ ಬಂದ ಜೋ ರೂಟ್ 69, ಲಿಯಾಮ್ ಲಿವಿಂಗ್‌ಸ್ಟೋನ್ 41, ಜೋಸ್ ಬಟ್ಲರ್ 34, ಹ್ಯಾರಿ ಬ್ರೂಕ್ 31, ಆದಿಲ್ ರಶೀದ್ 14 ರನ್ ಗಳಿಸಿದರು. ಭಾರತದ ಪರ ರವೀಂದ್ರ ಜಡೇಜಾ 3, ಹರ್ಷಿತ್ ರಾಣಾ, ಮೊಹಮ್ಮದ್ ಶಮಿ, ಹಾರ್ದಿಕ್ ಪಾಂಡ್ಯ, ವರುಣ್ ಚಕ್ರವರ್ತಿ ತಲಾ 1 ವಿಕೆಟ್ ಕಬಳಿಸಿದರು. ಪಂದ್ಯದಲ್ಲಿ ಭರ್ಜರಿ ಶತಕ ಸಿಡಿಸಿ ತಂಡದ ಗೆಲುವಿಗೆ ಕಾರಣರಾದ ನಾಯಕ ರೋಹಿತ್ ಶರ್ಮಾ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.


ಅರ್ಧಕ್ಕೆ ನಿಂತ ಪಂದ್ಯ: ಇಂಗ್ಲೆಂಡ್ ನೀಡಿದ ಗುರಿ ಬೆನ್ನತ್ತಿದ ಭಾರತ 6 ಓವರ್‌ಗಳಲ್ಲಿ 48 ರನ್ ಗಳಿಸಿದ್ದ ವೇಳೆ ಮೈದಾನದ ಫ್ಲೆಡ್ ಲೈಟ್‌ನಲ್ಲಿ ತಾಂತ್ರಿಕ ದೋಷ ಕಾಣಿಸಿಕೊಂಡ ಕಾರಣ ಪಂದ್ಯವನ್ನು ಸ್ಥಗಿತಗೊಳಿಸಲಾಗಿತ್ತು. ಬಳಿಕ ಲೈಟ್ ಸಮಸ್ಯೆ ಬಗೆಹರಿಸ ಬಳಿಕ 23 ನಿಮಿಷಗಳ ನಂತರ ಪಂದ್ಯವನ್ನು ಮತ್ತೇ ಪುನಾರಂಭಿಸಲಾಯಿತು.

ಇಂದಿನಿಂದ ಫೆ.16ರವರೆಗೆ ಸೀತಾರಾಮ ಕಲ್ಯಾಣ

ಮೈಸೂರು,ಫೆ.9(ಎಸ್‌ಪಿಎನ್)– ಮೈಸೂರು ಶ್ರೀರಾಂಪುರ 2ನೇ ಹಂತದಲ್ಲಿರುವ ಶ್ರೀ ಬಲಮುರಿ ಮಹಾಗಣಪತಿ ದೇವಸ್ಥಾನದ ರಜತ ಮಹೋತ್ಸವ ಅಂಗವಾಗಿ ದೇವಸ್ಥಾನದ ಆವರಣದಲ್ಲಿ ಫೆ.10ರಿಂದ 16ರವರೆಗೆ ವಿವಿಧ ಪೂಜಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಫೆ.10ರಂದು ಬೆಳಗ್ಗೆ 9ಕ್ಕೆ ತ್ರಯೋದಶಿ ಅಂಗವಾಗಿ ಸಹಸ್ರಮೋದಕ ಗಣಪತಿ ಹೋಮ, ಫೆ.11ರಂದು ಸಂಜೆ 5ಕ್ಕೆ ಚತುರ್ದಶಿ ಪ್ರಯುಕ್ತ ಸಾಮೂಹಿಕ ಲಲಿತಾ ಸಹಸ್ರನಾಮ ಕುಂಕುಮಾರ್ಚನೆ, ಫೆ.12ರಂದು ಹುಣಿಮೆ ಅಂಗವಾಗಿ ಸಂಜೆ 7ಕ್ಕೆ ಸಾಮೂಹಿಕ ಸತ್ಯನಾರಾಯಣ ಪೂಜೆ, ಫೆ.13ರಂದು ಬೆಳಗ್ಗೆ 9ಕ್ಕೆ ಪಾಡ್ಯ ಪ್ರಯುಕ್ತ ಆಶ್ಲೇಷ ಬಲಿ, ಫೆ.14ರಂದು ಸಂಜೆ 7ಕ್ಕೆ ತೇರಿನ ಪ್ರಕಾರೋತ್ಸವ, ಫೆ.15ರಂದು ಬೆಳಗ್ಗೆ 10.30ಕ್ಕೆ ಶ್ರೀ ಸೀತಾರಾಮ ಕಲ್ಯಾಣ, ಫೆ.16ರಂದು ಸಂಜೆ 8ಕ್ಕೆ ಸಂಕಷ್ಟಹರ ಗಣಪತಿ ಪೂಜೆ ಆಯೋಜಿಸಲಾಗಿದೆ ಎಂದು ಅರ್ಚಕ ಸುದೀಂದ್ರ ಆಚಾರ್ಯ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಹೆಚ್ಚಿನ ವಿವರಗಳಿಗೆ 9844558661 ಸಂಪರ್ಕಿಸಬಹುದು.

ಪಶುಪಾಲನಾ ಇಲಾಖೆ ನೌಕರರ ಗೃಹ ನಿರ್ಮಾಣ ಸಹಕಾರ ಸಂಘಕ್ಕೆ 14 ನಿರ್ದೇಶಕರ ಆಯ್ಕೆ



ಪಶುಪಾಲನಾ ಇಲಾಖೆಯ ನೌಕರರ ಗೃಹ ನಿರ್ಮಾಣ ಸಹಕಾರ ಸಂಘಕ್ಕೆ ನಿರ್ದೇಶಕರಾಗಿ ಆಯ್ಕೆಯಾದವರನ್ನು ಅಭಿನಂದಿಸಲಾಯಿತು. ಈ ಸಂದರ್ಭದಲ್ಲಿ ಡಾ.ಸಿ.ಬಿ.ಅರುಣ್ ಕುಮಾರ್, ಮೇಟಗಳ್ಳಿ ದೇವರಾಜು, ಪ್ರವೀಣ್, ಡಿ.ಬಿ.ಜೋಗಪ್ಪ, ಗಣೇಶ್‌ಮೂರ್ತಿ ಇದ್ದರು.

ಮೈಸೂರು, ಫೆ.9–ಪಶುಪಾಲನಾ ಇಲಾಖೆಯ ನೌಕರರ ಗೃಹ ನಿರ್ಮಾಣ ಸಹಕಾರ ಸಂಘದ 15 ನಿರ್ದೇಶಕ ಸ್ಥಾನಗಳಿಗೆ ನಡೆದ ಚುನಾವಣೆಯಲ್ಲಿ 14 ಮಂದಿ ಅವಿರೋಧವಾಗಿ ನಗರದಲ್ಲಿ ಚುನಾವಣೆ ನಡೆಯಿತು.


ಮೈಸೂರಿನ ಸರ್ಕಾರಿ ನೌಕರರ ಭವನದಲ್ಲಿ ನಡೆದ ಚುನಾವಣೆಯಲ್ಲಿ 15 ನಿರ್ದೇಶಕ ಸ್ಥಾನಗಳ ಪೈಕಿ 14 ನಿರ್ದೇಶಕ ಸ್ಥಾನಗಳಿಗೆ ಅವಿರೋಧ ಆಯ್ಕೆ ನಡೆಯಿತು. ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯ ಪಶುಪಾಲನಾ ಇಲಾಖೆಯಲ್ಲಿ ವಿವಿಧ ವೃಂದಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಆರ್. ಬಾಲಕೃಷ್ಣ, ಎನ್. ನಾಗೇಂದ್ರ, ಕೆ.ಪಿ.ನಾಗಣ್ಣ, ಡಿ.ಮೋಹನ, ಜಿ.ಗಿರೀಶ, ಕೆ.ಎಸ್.ಲತಾ, ಶೈಲಜಾ, ಡಾ.ಎಸ್.ಸಿ.ಸುರೇಶ್, ಡಾ.ನಾಗರಾಜು, ವೀರಭದ್ರಯ್ಯ, ಬಿ.ಎನ್.ಬಸವರಾಜು, ಎಸ್.ಸುರೇಶ, ಶಶಿಧರ್, ಹೇಮಂತ್‌ಕುಮಾರ್ ಅವಿರೋಧವಾಗಿ ಆಯ್ಕೆಯಾದರು.

ಡಿ.ಬಿ.ಜೋಗಪ್ಪಗೆ ಜಯ: ಎಸ್‌ಟಿ ವಿಭಾಗದಲ್ಲಿ ಮೀಸಲಾಗಿದ್ದ ಒಂದು ಸ್ಥಾನಕ್ಕೆ ಇಬ್ಬರು ಸ್ಪರ್ಧೆ ಬಯಸಿದ ಹಿನ್ನೆಲೆಯಲ್ಲಿ ಒಂದು ಸ್ಥಾನಕ್ಕೆ ಚುನಾವಣೆ ನಡೆಯಿತು. ಪಶುಪಾಲನಾ ಹಾಗೂ ಪಶುವೈದ್ಯ ಸೇವಾ ಇಲಾಖೆಯ ಕೊಳ್ಳೇಗಾಲದ ಪಶುವೈದ್ಯಾಧಿಕಾರಿ ಡಿ.ಬಿ.ಜೋಗಪ್ಪ ಅವರು 31 ಮತಗಳ ಅಂತರದಿಂದ ಡಿ.ಚಂದ್ರು ವಿರುದ್ಧ ಜಯಗಳಿಸಿದರು. ವಿಜೇತರನ್ನು ಜಿಲ್ಲಾ ನೌಕರರ ಸಂಘದ ಅಧ್ಯಕ್ಷ ಡಾ.ಸಿ.ಬಿ.ಅರುಣ್ ಕುಮಾರ್ ಅವರು ಅಭಿನಂದಿಸಿದರು. ಇದೇ ಸಂದರ್ಭದಲ್ಲಿ ಪಾಲಿಕೆ ಸದಸ್ಯ ಮೇಟಗಳ್ಳಿ ದೇವರಾಜು, ಅಧೀಕ್ಷಕ ಪ್ರವೀಣ್, ಜಾನುವಾರು ಅಧಿಕಾರಿ ಗಣೇಶ್ ಮೂರ್ತಿ ಇತರರು ವಿಜೇತರನ್ನು ಅಭಿನಂದಿಸಿದರು.

ಮೈಸೂರು ಮಿತ್ರ ಸೋಮವಾರ 10 ಫೆಬ್ರವರಿ 2025

ಕೊಡಗಿನ ಕಾಫಿ ತೋಟಗಳನ್ನು ಕಾಡುತ್ತಿರುವ ಆನೆಗಳು!

● ತೋಟಗಳಲ್ಲೇ 300ಕ್ಕೂ ಹೆಚ್ಚು ಆನೆಗಳು ವಾಸ್ತವ್ಯ ● ಕೃಷಿಕರು, ಕಾರ್ಮಿಕರಿಗೆ ಜೀವ ಭಯ



ಕೊಡಗು ಜಿಲ್ಲೆಯಲ್ಲಿ ಕಾಡಾನೆಗಳು ಒಂದು ತೋಟದಿಂದ ಮತ್ತೊಂದು ತೋಟಕ್ಕೆ ಹೋಗುತ್ತಿರುವುದು.

ಮಡಿಕೇರಿ, ಫೆ.9–ಕೊಡಗು ಜಿಲ್ಲೆಯಲ್ಲಿ ಕಾಡಾನೆಗಳ ಹಾವಳಿ ಮಿತಿ ಮೀರಿದ್ದು, ಕೃಷಿಕರು, ಬೆಳೆಗಾರರ ಸಹಿತ ತೋಟದ ಕಾರ್ಮಿಕರು ಜೀವ ಭಯದಲ್ಲೇ ಸಾಗುವಂತಾಗಿದೆ.

ಆನೆಗಳ ಹಾವಳಿ ನಿರ್ದಿಷ್ಟ ಪ್ರದೇಶದಲ್ಲಿ ಮಾತ್ರವೇ ಇದೆ ಎನ್ನುವ ಮಾತುಗಳು ಮರೆಯಾಗಿ ಅದೆಷ್ಟೋ ವರ್ಷಗಳೇ ಉರುಳಿ ಹೋಗಿದೆ. ಕೊಡಗಿನ ಬಹುತೇಕ ಕಾಫಿ ತೋಟಗಳಲ್ಲಿ ಆನೆಗಳು ಹೆಚ್ಚಾಗಿವೆ. ಕೊಡಗಿನ ವಿವಿಧ ಗ್ರಾಮಗಳ ಕಾಡಂಚಿನ ಭಾಗಗಳಲ್ಲಿ ಅರಣ್ಯದಿಂದ ಹೊರ ಬಂದ ಕಾಡಾನೆಗಳು ಕಾಫಿ ತೋಟಗಳನ್ನೇ ತಮ್ಮ ಆವಾಸ ಸ್ಥಾನವನ್ನಾಗಿ ಮಾಡಿಕೊಂಡು ಸಾಕಷ್ಟು ವರ್ಷಗಳು ಕಳೆದು ಹೋಗಿದೆ. ಕಾಫಿ ತೋಟಗಳಲ್ಲಿ ಇರುವ ಕಾಡಾನೆಗಳ ಅಂದಾಜು ಸಂಖ್ಯೆ 300ಕ್ಕೂ ಹೆಚ್ಚು ಎನ್ನಲಾಗುತ್ತಿದೆ.

ತೋಟಗಳೇ ತಮ್ಮ ಮನೆ: ಒಂದು ಕಾಲಘಟ್ಟದಲ್ಲಿ ಕಾಡಿನಿಂದ ಆಹಾರ ಅರಸಿ ಕಾಫಿ ತೋಟಗಳಿಗೆ ಬಂದ ಕಾಡಾನೆಗಳು ಬಳಿಕ ಕಾಡಿಗೆ ಮರಳದೆ ಇಲ್ಲಿಯೇ ವಾಸ್ತವ್ಯ ಹೂಡಿದವು. ಕಾಲ ಕ್ರಮೇಣ ಕಾಫಿ ತೋಟದ ಒಳಗೆಯೇ ತಮ್ಮ ಸಂತತಿಗಳನ್ನು ಹೆಚ್ಚಿಸಿಕೊಂಡು ಕಾಫಿ ತೋಟವನ್ನೇ ತಮ್ಮ ತವರು ಮನೆಯಾಗಿಸಿಕೊಂಡವು. ಈ ವೇಳೆ ಕಾಡಾನೆ ಮಾನವ ಸಂಘರ್ಷ ಕಂಡು ಬಂದ ಸಂದರ್ಭ ಕಾಫಿ ತೋಟಗಳಲ್ಲಿ ಬೀಡುಬಿಟ್ಟಿದ್ದ ಕಾಡಾನೆ ಹಿಂಡನ್ನು ಕಾಡಿಗಟ್ಟುವ ಪ್ರಯತ್ನಗಳು ನಡೆದವು. ಕಾರ್ಯಾಚರಣೆ ವೇಳೆ ಕೆಲವು ಕಾಡಾನೆಗಳು ಕಾಡಿಗೆ ಮರಳಿದರೆ, ಕಾಫಿ ತೋಟದಲ್ಲೇ ಹುಟ್ಟಿ ಬೆಳೆದು ಇದನ್ನೇ ಕಾಡು ಎಂದು ಭಾವಿಸಿಕೊಂಡ ದೈತ್ಯ ದೇಹಿ ಕಾಡಾನೆಗಳು ಅರಣ್ಯ ಸಿಬ್ಬಂದಿ ಮೇಲೆಯೇ ಮುಗಿಬೀಳುವುದು, ಬಲವಂತವಾಗಿ ರಾತ್ರಿ ಕಾಡಿಗಟ್ಟಿದರೂ ಬೆಳಗಾಗುವುದರೊಳಗೆ ಮತ್ತೆ ಕಾಫಿ ತೋಟದಲ್ಲಿ ಪ್ರತ್ಯಕ್ಷವಾಗುವುದನ್ನೇ ರೂಢಿಸಿಕೊಂಡಿವೆ. ಈ ಆನೆಗಳು ಇದೀಗ ಕೊಡಗು ಜಿಲ್ಲೆಯ ವಿವಿಧ ಕಡೆಗಳಲ್ಲಿ ಉಪಟಳ ಮುಂದುವರೆಸಿದ್ದು, ಮನೆಗಳ ಅಂಗಳ ಹಾಗೂ ಪಟ್ಟಣದ ಹೃದಯ ಭಾಗಕ್ಕೂ ಬಂದು ತಲುಪಿವೆ.

ತೋಟಗಳಿಗೆ ವಲಸೆ

ಕಾಫಿ ತೋಟಗಳಲ್ಲೇ ಹುಟ್ಟಿ ಬೆಳೆದ ಕಾಡಾನೆಗಳು ವಲಸೆ ಆಹಾರ ಪದ್ಧತಿಯನ್ನು ತಮ್ಮದಾಗಿಸಿಕೊಂಡಿವೆ. ಹುಲ್ಲು, ಹಲಸಿನ ಹಣ್ಣು, ಬಾಳೆ, ಅಡಕೆ, ತೆಂಗು, ಬಿದಿರು, ಹಣ್ಣಿನ ಮರಗಳ ಸಹಿತ ಆಹಾರ ಅರಸಿಕೊಂಡು ಒಂದು ತೋಟದಿಂದ ಮತ್ತೊಂದು ತೋಟಕ್ಕೆ ಸರ್ವ ಋತುವಿನಲ್ಲಿ ವಲಸೆ ಹೋಗುತ್ತವೆ.

ಜಿಲ್ಲೆಯಲ್ಲಿ ಸಾವಿರಾರು ಎಕರೆ ಕಾಫಿ ತೋಟಗಳಿದ್ದು, ತೋಟಗಳಿಗೆ ಈ ಆನೆಗಳು ತಮ್ಮ 'ಪರಿವಾರ' ಸಹಿತ ವಲಸೆ ಹೋಗುತ್ತವೆ. ಕುಡಿಯುವ ನೀರು ಯಥೇಚ್ಛವಾಗಿರುವ ತೋಟದ ಕೆರೆಗಳಿಗೆ ನೀರು ಕುಡಿಯಲು ಆಗಮಿಸಿ ಕೆರೆಯಲ್ಲಿ ಈಜಾಡಿ ಮತ್ತೆ ಮೇಲೆ ಬರಲಾಗದೇ ಅಲ್ಲೇ ಪರದಾಡುವ ಹಾಗೂ ನೀರಿನಲ್ಲಿ ಮುಳುಗಿ ಮೃತಪಡುವ ಘಟನೆಗಳು ಕಾಫಿ ತೋಟದ ಆನೆಗಳ ವಲಸೆ ನೀತಿಗೆ ಸಾಕ್ಷಿ ಹೇಳುತ್ತವೆ.

ಅರಣ್ಯಕ್ಕೆ ಅಟ್ಟುವ ಕಾರ್ಯಾಚರಣೆ: ಜಿಲ್ಲೆಯಲ್ಲಿ ಕಾಡಾನೆಗಳ ಉಪಟಳ 1990ರ ದಶಕದ ಬಳಿಕ ಏರುಗತಿಯಲ್ಲಿ ಸಾಗಿದ್ದು, ಅದು ನಿರಂತರವಾಗಿ ಮುಂದುವರೆದಿದೆ. ಈ ಹಂತದಲ್ಲೇ ಸರ್ಕಾರ, ಜನಪ್ರತಿನಿಧಿಗಳು ಶಾಶ್ವತ ಪರಿಹಾರದ ಭರವಸೆಗಳನ್ನು ನೀಡುತ್ತಲೇ ಬಂದಿದ್ದಾರೆ. ಆದರೆ, ಯಾವುದು ಇಲ್ಲಿಯವರೆಗೆ ಪರಿಪೂರ್ಣವಾಗಿ ಕಾರ್ಯಗತವಾಗದಿರುವುದು ಕಾಡಾನೆಗಳ ಉಪಟಳ ಮುಂದುವರಿಯುವುದಕ್ಕೆ ಪ್ರಮುಖ ಕಾರಣ.

ಜಿಲ್ಲೆಯ ಆಯಾ ಭಾಗಗಳಲ್ಲಿ ಕಾಡಾನೆಗಳ ಹಾವಳಿ ಕಂಡು ಬಂದ ಹಂತದಲ್ಲಿ ಅರಣ್ಯ ಇಲಾಖೆ ಅವುಗಳನ್ನು ಕಾಡಿಗಟ್ಟುವ ಕಾರ್ಯಾಚರಣೆ ನಡೆಸುತ್ತದೆ. ಆ ಸಂದರ್ಭ ಸೀಮಿತವಾಗಿ ಅದು ಸಮಸ್ಯೆಯನ್ನು ಬಗೆಹರಿಸಿದಂತೆ ಕಂಡು ಬರುತ್ತದೆ. ಕಾರ್ಯಾಚರಣೆ ಮುಗಿದ ಕೆಲವೇ ದಿನಗಳಲ್ಲಿ ಮತ್ತೆ ಕಾಡಾನೆಗಳ ಉಪಟಳ ನಿರಾತಂಕವಾಗಿ ಮುಂದುವರಿಯುತ್ತದೆ. ಇದಕ್ಕೆ ಕೊನೆಯೇ ಇಲ್ಲವೆ ಎನ್ನುವ ಜಿಲ್ಲೆಯ ಕೃಷಿಕರ ಕೂಗು ಕೇವಲ ಅರಣ್ಯ ರೋಧನವಾಗಿರುವುದು ವಿಪರ್ಯಾಸ.

ರೈಲ್ವೆ ಹಳಿ–ಸೋಲಾರ್ ಬೇಲಿ: ಆಯಾ ಪಕ್ಷಗಳು ಅಧಿಕಾರದಲ್ಲಿದ್ದ ಸಂದರ್ಭಗಳಲ್ಲಿ ಆನೆ ಹಾವಳಿ ಇರುವ ಕಡೆಗಳಲ್ಲಿ ಕಂದಕ, ಒಂದಷ್ಟು ರೈಲ್ವೆ ಬ್ಯಾರಿಕೇಡ್‌ಗಳು, ಸೋಲಾರ್ ಬೇಲಿಗಳನ್ನು ಅಳವಡಿಸಿದ್ದರು. ಅದು ಪೂರ್ಣವಾಗದ ಮತ್ತು ಇರುವ ಬೇಲಿಗಳ ನಿರ್ವಹಣೆ ಸಮರ್ಪಕವಾಗಿಲ್ಲದ ಕಾರಣ ಕಾಡಾನೆಗಳ ಹಾವಳಿಗೆ ಬ್ರೇಕ್ ಇಲ್ಲದಾಗಿದೆ. ಕಾಡಾನೆಗಳೊಂದಿಗೆ ದಕ್ಷಿಣ ಕೊಡಗಿನ ಭಾಗದಲ್ಲಿ ಕಾಣಿಸಿಕೊಂಡಿರುವ ಹುಲಿ, ಚಿರತೆ ಹಾವಳಿ, ಕಾಡುಹಂದಿಗಳ ಉಪಟಳ ಕೃಷಿಕರ ಬದುಕಿನ ಸಂಕಷ್ಟಗಳನ್ನು ಮತ್ತಷ್ಟು ಹೆಚ್ಚಿಸಲು ಇಂಬು ನೀಡುತ್ತಲೇ ಇವೆ. ಆಳುವ ಸರ್ಕಾರಗಳು ಭರವಸೆಗಳ ಮೇಲಷ್ಟೇ ಸವಾರಿ ಮಾಡುತ್ತಿವೆ. ಇನ್ನಾದರೂ ಮೂಲ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವ ನಿಟ್ಟಿನ ಗಟ್ಟಿ ನಿರ್ಧಾರಗಳನ್ನು ಸರ್ಕಾರ ತೆಗೆದುಕೊಳ್ಳುವುದು ಜಿಲ್ಲೆಯ ಜನರ ಬದುಕಿನ ದೃಷ್ಟಿಯಿಂದ ಅನಿವಾರ್ಯವಾಗಿದೆ.

ಮಡಿಕೇರಿಯಲ್ಲಿ 2 ಲೀಟರ್‌ಗಿಂತ ಕಡಿಮೆ ಪ್ರಮಾಣದ ಪ್ಲಾಸ್ಟಿಕ್ ಬಾಟಲ್ ಬಳಕೆ ನಿಷೇಧ

ಮಡಿಕೇರಿ, ಫೆ.9– ಮಂಜಿನ ನಗರಿಯ ಪ್ರವಾಸಿ ತಾಣಗಳಲ್ಲಿ ಸ್ವಚ್ಛತೆ ಕಾಪಾಡುವ ಹಾಗೂ ಪ್ಲಾಸ್ಟಿಕ್ ತ್ಯಾಜ್ಯಕ್ಕೆ ಕಡಿವಾಣ ಹಾಕುವ ಉದ್ದೇಶದಿಂದ 2 ಲೀಟರ್‌ಗಿಂತಲೂ ಕಡಿಮೆ ಪ್ರಮಾಣದ ತಾತ್ಕಾಲಿಕ ಪ್ಲಾಸ್ಟಿಕ್ ಬಾಟಲಿಗಳ ಬಳಕೆಯನ್ನು ಸಂಪೂರ್ಣ ನಿಷೇಧಿಸಿ ನಗರ ಸಭೆ ಆದೇಶ ಹೊರಡಿಸಿದೆ.



ಮಡಿಕೇರಿ ಪ್ರವಾಸಿಗರ ಪಾಲಿನ ಹಾಟ್‌ಸ್ಪಾಟ್ ಆಗಿದೆ. ವಾರಾಂತ್ಯದಲ್ಲಿ ಪ್ರವಾಸಿ ತಾಣಗಳಿಗೆ ದಾಂಗುಡಿ ಇಡುವವರ ಸಂಖ್ಯೆ ತುಸು ಹೆಚ್ಚೇ ಇರುತ್ತದೆ. ಬರುವವರು ನೀರು ಕುಡಿದ ಬಳಿಕ ತಾವು ತರುವ ಪ್ಲಾಸ್ಟಿಕ್ ಬಾಟಲಿಗಳನ್ನು ಎಲ್ಲೆಂದರಲ್ಲಿ ಎಸೆದು ಹೋಗುತ್ತಿದ್ದಾರೆ. ಇದರಿಂದ ಪ್ರತಿನಿತ್ಯ ನಗರದಲ್ಲಿ ಸಾವಿರಕ್ಕೂ ಅಧಿಕ ಕೆಜಿಯಷ್ಟು ಪ್ಲಾಸ್ಟಿಕ್ ಸಂಗ್ರಹವಾಗುತ್ತಿದೆ. ಇದರಿಂದ ನಗರದ ಸ್ವಚ್ಛತೆಯೂ ಹಾಳಾಗುತ್ತಿದೆ. ಅಲ್ಲದೇ ಪ್ಲಾಸ್ಟಿಕ್ ತ್ಯಾಜ್ಯದಿಂದ ಪರಿಸರಕ್ಕೂ ಮಾರಕವಾಗುತ್ತಿದೆ. ಇದಕ್ಕೆ ಕಡಿವಾಣ ಹಾಕಲು ನಿರ್ಧರಿಸಿರುವ ಮಡಿಕೇರಿ ನಗರಸಭೆ 2 ಲೀ.ಗಿಂತಲೂ ಕಡಿಮೆ ಪ್ರಮಾಣದ ತಾತ್ಕಾಲಿಕ ಪ್ಲಾಸ್ಟಿಕ್ ಬಾಟಲಿಗಳನ್ನು ಸಂಪೂರ್ಣ ನಿಷೇಧಿಸಿದೆ.

ಈಗಾಗಲೇ ನಗರದ ವರ್ತಕರಿಗೆ ಪ್ರಕಟಣೆ ಮೂಲಕ ನೋಟಿಸ್ ಕೊಡಲಾಗಿದೆ. ಜೊತೆಗೆ ಪ್ರತಿ ಅಂಗಡಿ ಮುಂಗಟ್ಟುಗಳಿಗೆ ಭಿತ್ತಿಪತ್ರ ಅಂಟಿಸಿ, ಪ್ಲಾಸ್ಟಿಕ್ ಬಾಟಲಿಗಳಿಂದ ಪರಿಸರಕ್ಕೆ ಆಗುತ್ತಿರುವ ಹಾನಿಯ ಬಗ್ಗೆ ಜಾಗೃತಿ ಮೂಡಿಸಲಾಗುತ್ತಿದೆ. ಈಗಾಗಲೇ ಖರೀದಿ ಮಾಡಿರುವ ಬಾಟಲಿಗಳ ಮಾರಾಟಕ್ಕೆ ಅವಕಾಶವಿದ್ದು, ಹೊಸದಾಗಿ ತರಿಸದಂತೆ ನಗರಸಭೆ ಸೂಚನೆ ಕೊಟ್ಟಿದೆ. ಅಲ್ಲದೇ ನಗರಕ್ಕೆ ಬರುವ ಪ್ರವಾಸಿಗರು ಪ್ಲಾಸ್ಟಿಕ್ ಬಾಟಲಿ ತರದಂತೆ ಅಲ್ಲಲ್ಲಿ ಸೂಚನಾ ಫಲಕ ಅಳವಡಿಸಲಾಗಿದೆ. ಮುಂದಿನ ಎರಡು ತಿಂಗಳವರೆಗೆ ಅರಿವು ಮೂಡಿಸಿ ಬಳಿಕ ಕ್ರಮ ಕೈಗೊಳ್ಳಲಾಗುತ್ತದೆ ಎಂದು ನಗರ ಸಭೆಯ ಅಧಿಕಾರಿಗಳು ತಿಳಿಸಿದ್ದಾರೆ.

ಮಡಿಕೇರಿ ನಗರಸಭೆಯ ನಿರ್ಧಾರವನ್ನು ಸಾರ್ವಜನಿಕರು ಸ್ವಾಗತಿಸಿದ್ದಾರೆ. ಕೊಡಗು ಜಿಲ್ಲೆ ಪ್ರವಾಸಿಗರಿಂದ ಕಸದ ತೊಟ್ಟಿಯಾಗುವುದು ಬೇಡ ಎಂದು ಸ್ಥಳೀಯರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಸಿಎನ್‌ಸಿಯಿಂದ ಕೊಡವ ಸಾಂಪ್ರದಾಯಿಕ ಉಡುಪಿನ ಜಾಗೃತಿ

ಮಡಿಕೇರಿ, ಫೆ.9–ಕೊಡವ ಬುಡಕಟ್ಟು ಜನರ ಸಾಂಪ್ರದಾಯಿಕ ಉಡುಪಿನ ಮಹತ್ವ ಕುರಿತು ಕಳೆದ 35 ವರ್ಷಗಳಿಂದ ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ಜಾಗೃತಿ ಮೂಡಿಸುತ್ತಲೇ ಬಂದಿದೆ. ನಮ್ಮ ಪ್ರಯತ್ನದ ಫಲ ನೀಡಿರುವುದಕ್ಕೆ ಕೊಡವರ ಬೃಹತ್ ಪಾದಯಾತ್ರೆಯಲ್ಲಿ ಸಾಂಪ್ರದಾಯಿಕ ಉಡುಪಿನಲ್ಲಿ ಕೊಡವರು ರಾರಾಜಿಸಿರುವುದೇ ಸಾಕ್ಷಿಯಾಗಿದೆ ಎಂದು ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ ಹರ್ಷ ವ್ಯಕ್ತಪಡಿಸಿದ್ದಾರೆ.

ಫೆ.7ರಂದು ಮಡಿಕೇರಿಯಲ್ಲಿ ನಡೆದ ಬೃಹತ್ ಪಾದಯಾತ್ರೆಯಲ್ಲಿ ಪಾಲ್ಗೊಂಡ ಸಹಸ್ರಾರು ಕೊಡವರು ಕೆಂಪು ತಲೆವಸ್ತ್ರ, ಕುಪ್ಯಚೇಲೆ ಮತ್ತು ಕೊಡವ ಪೊಡೆಯ ಉಡುಪಿನಲ್ಲಿ ಸಾಗುವ ಮೂಲಕ ಧೀರ ಕೊಡವರ ಗಾಂಭೀರ್ಯವನ್ನು ಪ್ರದರ್ಶಿಸಿದ್ದಾರೆ.




ಮಡಿಕೇರಿಯಲ್ಲಿ ನಡೆದ ಬೃಹತ್ ಪಾದಯಾತ್ರೆಯಲ್ಲಿ ಕೊಡವ ಸಾಂಪ್ರದಾಯಿಕ ಉಡುಪಿನೊಂದಿಗೆ ಭಾಗವಹಿಸಿದ್ದ ಸಿಎನ್‌ಸಿ ಕಾರ್ಯಕರ್ತರು.

ಇದಕ್ಕಾಗಿ ಪಾದಯಾತ್ರೆಯಲ್ಲಿ ಪಾಲ್ಗೊಂಡ ಎಲ್ಲಾ ಕೊಡವರಿಗೆ ಕೃತಜ್ಞತೆ ಸಲ್ಲಿಸುವುದಾಗಿ ತಿಳಿಸಿದ್ದಾರೆ.

ಕೊಡವ ಲ್ಯಾಂಡ್ ಭೂ–ರಾಜಕೀಯ ಸ್ವಾಯತ್ತತೆ, ಸ್ವ–ಆಡಳಿತ ಮತ್ತು ಸ್ವ–ನಿರ್ಣಯದ ಹಕ್ಕು ಹಾಗೂ ಎಸ್‌ಟಿ ಟ್ಯಾಗ್‌ಗಾಗಿ ನಿರಂತರ ಶಾಂತಿಯುತ ಹೋರಾಟವನ್ನು ನಾವು ಮುಂದುವರೆಸುತ್ತಿದ್ದೇವೆ. ಕೊಡವರ ಸಾಂಪ್ರದಾಯಿಕ ವಸ್ತ್ರ ಮತ್ತು ಆಚರಣೆಗಳು ಕೊಡವರ ಹೆಗ್ಗುರುತು ಎನ್ನುವುದನ್ನು ಮನದಟ್ಟು ಮಾಡಲು 35 ವರ್ಷಗಳೇ ಬೇಕಾಯಿತು ಎಂದು ನಾಚಪ್ಪ ಅಭಿಪ್ರಾಯಪಟ್ಟಿದ್ದಾರೆ.

ಹಲ್ಲೆ ನಡೆಸಿದ್ದ ಐವರ ಬಂಧನ, ಬಿಡುಗಡೆ



ಮಡಿಕೇರಿ, ಫೆ.9– ಕುಟ್ಟದಲ್ಲಿರುವ ಅನುಗ್ರಹ ಪೆಟ್ರೋಲ್ ಬಂಕ್‌ನಲ್ಲಿ ಸಿಗರೇಟು ಸೇವನೆ ಮಾಡಿದ್ದನ್ನು ಆಕ್ಷೇಪಿಸಿದ್ದಕ್ಕಾಗಿ ಬಂಕ್ ಸಿಬ್ಬಂದಿ ಮೇಲೆ ಹಲ್ಲೆ ನಡೆಸಿದ್ದ ಐವರು ಆರೋಪಿಗಳನ್ನು ಪೊಲೀಸರು ಬಂಧಿಸಿ, ಕ್ಷಮಾಪಣಾ ಮುಚ್ಚಳಿಕೆ ಪತ್ರ ಬರೆಸಿಕೊಂಡು ನಂತರ ಬಿಡುಗಡೆ ಮಾಡಿದ್ದಾರೆ.

ಕೇರಳದ ಮಲಪುರಂ ಜಿಲ್ಲೆಯ ಹರಿಕೋಡ ಗ್ರಾಮದ ರಿಜ್ವಾನ್, ಸೈಫುದ್ದೀನ್, ಸಿಬಿಲ್, ನಯಾಜ್, ಶಾಫಿ ಮುಚ್ಚಳಿಕೆ ಪತ್ರ ಬರೆದು ಕ್ಷಮಾಪಣೆ ಕೋರಿದ್ದಾರೆ.

ಫೆ.3ರಂದು ಮುಂಜಾನೆ 4 ಗಂಟೆಗೆ ಕುಟ್ಟದ ಹೆಚ್‌ಪಿ ಬಂಕ್‌ಗೆ ಪೆಟ್ರೋಲ್ ಹಾಕಿಸಿಕೊಳ್ಳಲು ಕಪ್ಪು ಬಣ್ಣದ ಕೇರಳ ನೋಂದಣಿ ವಾಹನ (ಕೆ.ಎಲ್.04.3355) ಆಗಮಿಸಿತ್ತು. ವಾಹನದಲ್ಲಿ ಒಟ್ಟು 5 ಪ್ರಯಾಣಿಕರಿದ್ದು, ಓರ್ವ ಸಿಗರೇಟು ಸೇವನೆ ಮಾಡುತ್ತಿದ್ದ. ಇದನ್ನು ಬಂಕ್ ಸಿಬ್ಬಂದಿ ಗಿರೀಶ್ ಆಕ್ಷೇಪಿಸಿದರು. ಈ ವೇಳೆ ಓರ್ವ ಕಾರಿನಿಂದ ಇಳಿದು ಗಿರೀಶ್ ಮೇಲೆ ಹಲ್ಲೆ ನಡೆಸಿ ಅವಾಚ್ಯ ಪದಗಳಿಂದ ಬೈದು ಸ್ಥಳದಿಂದ ಪರಾರಿಯಾಗಿದ್ದರು.

ಈ ಕುರಿತು ಕುಟ್ಟ ಪೊಲೀಸ್ ಠಾಣೆಗೆ ದೂರು ನೀಡಲಾಗಿತ್ತು. ನಂತರ ಪೊಲೀಸರು ಕಾರಿನ ಮಾಲೀಕರನ್ನು ಪತ್ತೆ ಹಚ್ಚಿ ಐವರನ್ನು ಬಂಧಿಸಿ, ಠಾಣೆಗೆ ಕರೆತಂದು ಮುಚ್ಚಳಿಕೆ ಬರೆಸಿಕೊಂಡು ಬಳಿಕ ಬಿಡುಗಡೆ ಮಾಡಿದ್ದಾರೆ.

ಕೋಪಟ್ಟಿ ಬೆಟ್ಟಕ್ಕೆ ಕಿಡಿಗೇಡಿಗಳಿಂದ ಬೆಂಕಿ

ಮಡಿಕೇರಿ, ಫೆ.9–ಚೇರಂಬಾಣೆ ಸಮೀಪದ ಕೋಪಟ್ಟಿ ಬೆಟ್ಟಕ್ಕೆ ಕಿಡಿಗೇಡಿಗಳು ಬೆಂಕಿ ಹಚ್ಚಿದ್ದು, ಹತ್ತಾರು ಎಕರೆ ಅರಣ್ಯ ಸಂಪತ್ತು ಸುಟ್ಟು ಕರಕಲಾಗಿದೆ.

ಈ ಬೆಟ್ಟ ಶ್ರೇಣಿ ತೀರಾ ಕಡಿದಾದ ಇಳಿಜಾರು ಹೊಂದಿದ್ದು, ರಸ್ತೆ ಮಾರ್ಗಗಳಿಲ್ಲ. ಕೇವಲ ಅರಣ್ಯ ಸಿಬ್ಬಂದಿ ಸಂಚರಿಸಲು ಮಾತ್ರ ಕಾಲು ದಾರಿ ಇರುವ ಕಾರಣ ಬೆಂಕಿ ನಂದಿಸಲು ಅರಣ್ಯ ಸಿಬ್ಬಂದಿ ಹರಸಾಹಸಪಡುತ್ತಿದ್ದಾರೆ. ಮಡಿಕೇರಿ ಅರಣ್ಯ ಉಪ ವಿಭಾಗದ ಭಾಗಮಂಡಲ ಅರಣ್ಯ ವಲಯದ ಕೋಪಟ್ಟಿ ಗ್ರಾಮದ ಬೆಟ್ಟ ಇದಾಗಿದ್ದು, ಗಾಳಿಯ ತೀವ್ರತೆ ಇರುವ ಕಾರಣ ಬೆಂಕಿಯ ಕೆನ್ನಾಲಿಗೆ ಮತ್ತಷ್ಟು ಪ್ರದೇಶಕ್ಕೆ ವ್ಯಾಪಿಸುವಂತಾಗಿದೆ.



ಚೇರಂಬಾಣೆ ಸಮೀಪದ ಕೋಪಟ್ಟಿ ಬೆಟ್ಟಕ್ಕೆ ಕಿಡಿಗೇಡಿಗಳು ಬೆಂಕಿ ಹಚ್ಚಿರುವುದು.

ತರಕಾರಿ ಅಂಗಡಿಗೆ ಬೆಂಕಿ ಲಕ್ಷಾಂತರ ರೂ. ನಷ್ಟ



ಕೊಳ್ಳೇಗಾಲದಲ್ಲಿ ತರಕಾರಿ ಮಳಿಗೆಗೆ ಬಿದ್ದ ಬೆಂಕಿಯನ್ನು ಅಗ್ನಿಶಾಮಕ ಸಿಬ್ಬಂದಿ ನಂದಿಸಿದರು.

ಕೊಳ್ಳೇಗಾಲ: ಪಟ್ಟಣದ ಕನ್ನಿಕಾ ಪರಮೇಶ್ವರಿ ದೇವಸ್ಥಾನ ರಸ್ತೆಯಲ್ಲಿರುವ ಮಹೇಶ್ ಸ್ಟೋರ್ ತರಕಾರಿ ಅಂಗಡಿಗೆ ಆಕಸ್ಮಿಕ ಬೆಂಕಿ ತಗುಲಿದ ಪರಿಣಾಮ ಲಕ್ಷಾಂತರ ರೂ. ನಷ್ಟವಾಗಿದೆ.

ಭಾನುವಾರ ಬೆಳಗ್ಗೆ ಸಿದ್ದರಾಜು ನಾಯಕ ಅವರಿಗೆ ಸೇರಿದ ತರಕಾರಿ ಅಂಗಡಿಗೆ ಆಕಸ್ಮಿಕವಾಗಿ ಬೆಂಕಿ ತಗುಲಿದೆ. ಪರಿಣಾಮ ಅಂಗಡಿಯಲ್ಲಿದ್ದ 80 ಸಾವಿರ ರೂ. ನಗದು ಸೇರಿದಂತೆ ಲಕ್ಷಾಂತರ ರೂ. ನಷ್ಟವಾಗಿದೆ. ತಕ್ಷಣ ಆಗಮಿಸಿದ ಅಗ್ನಿಶಾಮಕ ಸಿಬ್ಬಂದಿ ಬೆಂಕಿ ನಂದಿಸಿ ಹೆಚ್ಚಿನ ಅನಾಹುತ ತಪ್ಪಿಸಿದರು. ಈ ಸಂಬಂಧ ಪಟ್ಟಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮಹದೇಶ್ವರ, ಸಿದ್ದಪ್ಪಾಜಿ, ಮಂಟೇಸ್ವಾಮಿ ಪವಾಡ ಚಿರಪರಿಚಿತ

● ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅಭಿಮತ ● ದಂಟಳ್ಳಿ ಗ್ರಾಮದಲ್ಲಿ ದೇವಸ್ಥಾನ ನಿರ್ಮಾಣಕ್ಕೆ ಶಂಕುಸ್ಥಾಪನೆ



ದಂಟಳ್ಳಿ ಗ್ರಾಮದಲ್ಲಿ ಮಹದೇಶ್ವರ, ಸಿದ್ದಪ್ಪಾಜಿ ದೇವಸ್ಥಾನ ನಿರ್ಮಾಣಕ್ಕೆ ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಶಂಕುಸ್ಥಾಪನೆ ನೆರವೇರಿಸಿದರು.

ಹನೂರು, ಫೆ.9–ಮಹದೇಶ್ವರ, ಘನ ನೀಲಿ ಸಿದ್ದಪ್ಪಾಜಿ, ಮಂಟೇಸ್ವಾಮಿ ಅವರ ಪವಾಡ, ಕಂಸಾಳೆ, ಪದ್ಯಗಳು ಕನ್ನಡ ಸಾಹಿತ್ಯದಲ್ಲಿ ಚಿರಪರಿಚಿತವಾಗಿರುವುದು ಸಂತಸದ ವಿಚಾರ ಎಂದು ಸುತ್ತೂರು ವೀರ ಸಿಂಹಾಸನ ಮಠಾಧ್ಯಕ್ಷರಾದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ತಿಳಿಸಿದರು.

ತಾಲೂಕಿನ ರಾಮಾಪುರ ಹೋಬಳಿಯ ದಂಟಳ್ಳಿ ಗ್ರಾಮದಲ್ಲಿ ಮಹದೇಶ್ವರ, ಸಿದ್ದಪ್ಪಾಜಿ ಹಾಗೂ ಶಕ್ತಿ ದೇವತೆಗಳ ದೇವಸ್ಥಾನ ನಿರ್ಮಾಣಕ್ಕೆ ಶಂಕುಸ್ಥಾಪನೆ ಸಮಾರಂಭದಲ್ಲಿ ಮಾತನಾಡಿದ ಅವರು, ಮಹದೇಶ್ವರ, ಸಿದ್ದಪ್ಪಾಜಿ ಪವಾಡಗಳನ್ನು ಪ್ರತಿಯೊಬ್ಬರು ತಿಳಿದುಕೊಳ್ಳಲೇಬೇಕು. ಇಂತಹ ಮಹನೀಯರ ದೇವಸ್ಥಾನವನ್ನು ಕಾಡಂಚಿನ ಗ್ರಾಮದಲ್ಲಿ ನಿರ್ಮಿಸುತ್ತಿರುವುದು ಸಂತಸದ ವಿಚಾರ ಎಂದರು.

ಶೇಖರ್ ಕುಟುಂಬದವರು ದಂಟಳ್ಳಿ ಗ್ರಾಮದಲ್ಲೇ ಮಹದೇಶ್ವರ, ಸಿದ್ದಪ್ಪಾಜಿ ದೇವಸ್ಥಾನವನ್ನು ನಿರ್ಮಿಸುತ್ತಿರುವುದರಿಂದ ಮುಂದಿನ ದಿನಗಳಲ್ಲಿ ಎಲ್ಲಾ ದೇವರನ್ನು ಒಂದೇ ಕಡೆ ನೋಡಬಹುದು. ಈ ಸ್ಥಳ ಮುಂದಿನ ದಿನಗಳಲ್ಲಿ ಪ್ರಸಿದ್ಧ ಧಾರ್ಮಿಕ ಯಾತ್ರಾ ಸ್ಥಳವಾಗಲಿದೆ. ಪಾದಯಾತ್ರೆ ಮೂಲಕ ಬರುವ ಭಕ್ತರಿಗೆ ಪ್ರವೇಶ ದ್ವಾರದಲ್ಲೇ ಮಹದೇಶ್ವರರು ದರ್ಶನ ನೀಡಲಿದ್ದಾರೆ. ಗ್ರಾಮದ ಒಳಿತಿಗಾಗಿ ನಿರ್ಮಿಸುತ್ತಿರುವ ದೇವಸ್ಥಾನ ಶೀಘ್ರ ಪೂರ್ಣಗೊಳ್ಳಲಿ ಎಂದು ಹಾರೈಸಿದರು.

ಶ್ರೀಕ್ಷೇತ್ರ ಮಹದೇಶ್ವರಬೆಟ್ಟದಲ್ಲಿ ನೆಲೆಸಿರುವ ಮಹದೇಶ್ವರರ ಪವಾಡ ಸದೃಶ್ಯ, ಸಂಗತಿಗಳು ಕೂಡ ಪ್ರತಿಯೊಬ್ಬ ಭಕ್ತನ ಮನಸ್ಸಿನ ಮೇಲೆ ಅಪಾರ ಪ್ರಭಾವ ಬೀರಲಿದೆ. ಯಾರಾರು ಮಾದಪ್ಪನನ್ನು ನಂಬಿದ್ದಾರೋ ಅವರ ಮನೆಯಲ್ಲಿ ಮಾದಪ್ಪನ ಆಶೀರ್ವಾದ ಸಿಗುತ್ತದೆ. ಗುಡಿಗೆ ಹೋಗಿ ನಮಸ್ಕಾರ ಮಾಡಬೇಕಿಲ್ಲ ಮನಸ್ಸಿನಲ್ಲೇ ನಮಸ್ಕರಿಸಬಹುದು. ಮಹದೇಶ್ವರಬೆಟ್ಟದ ಜಾತ್ರಾ ಮಹೋತ್ಸವಗಳ ಸಂದರ್ಭಗಳಲ್ಲಿ ಲಕ್ಷಾಂತರ ಭಕ್ತರು ಸ್ವಾಮಿಯ ದರ್ಶನಕ್ಕೆ ಬಿಸಿಲು, ಚಳಿ, ಮಳೆ ಎನ್ನದೆ ಪಾದಯಾತ್ರೆ ಮೂಲಕ ಆಗಮಿಸುತ್ತಾರೆ ಎಂದು ಹೇಳಿದರು.

ಮಾಜಿ ಶಾಸಕ ಆರ್.ನರೇಂದ್ರ ಮಾತನಾಡಿ, ದಂಟಳ್ಳಿ ಶೇಖರ್ ಕುಟುಂಬದವರು ಗ್ರಾಮದ ಒಳಿತಿಗಾಗಿ ಮಹದೇಶ್ವರ, ಸಿದ್ದಪ್ಪಾಜಿ, ಶಕ್ತಿ ದೇವತೆಗಳ ದೇವಸ್ಥಾನ ನಿರ್ಮಿಸುತ್ತಿರುವುದು ಐತಿಹಾಸಿಕ ಕಾರ್ಯ. ಗ್ರಾಮದಲ್ಲಿ ಸಾವು–ನೋವು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ವಿವಿಧ ದೇವರುಗಳ ದೇವಸ್ಥಾನ ನಿರ್ಮಿಸುತ್ತಿದ್ದಾರೆ. ಮುಂದಿನ ದಿನಗಳಲ್ಲಿ ಇದು ಎರಡನೇ ಮಹದೇಶ್ವರಬೆಟ್ಟವಾಗಿ, ಪವಾಡ ಪುರುಷ ಸಿದ್ದಪ್ಪಾಜಿ ಕ್ಷೇತ್ರವಾಗಿ ಅಭಿವೃದ್ಧಿಯಾಗಲಿ. ಜಾತ್ರಾ ಮಹೋತ್ಸವ ಸಂದರ್ಭಗಳಲ್ಲಿ ಮಹದೇಶ್ವರ ಬೆಟ್ಟಕ್ಕೆ ಹೆಚ್ಚಿನ ಭಕ್ತರು ಇದೇ ಗ್ರಾಮದ ಮೂಲಕ ತೆರಳುವುದರಿಂದ ಪ್ರಸಾದ ನಿಲಯ ತೆರೆದು ನಿರಂತರವಾಗಿ ದಾಸೋಹ ಮಾಡುವಂತೆ ತಿಳಿಸಿದರು.

ಸಾಲೂರು ಮಠಾಧ್ಯಕ್ಷರಾದ ಶ್ರೀ ಶಾಂತಮಲ್ಲಿಕಾರ್ಜುನ ಸ್ವಾಮೀಜಿ ಮಾತನಾಡಿ, ಮಹದೇಶ್ವರರು ಉತ್ತರದಿಂದ ಕತ್ತಲ ರಾಜ್ಯಕ್ಕೆ ಬಂದು ಬೆಳಕು ಚೆಲ್ಲಿದ ಮಹಾಪುರುಷರು. ಭಾರತ ಸನಾತನ ಸಂಸ್ಕೃತಿಯಲ್ಲಿ ದೇವರು ಹಾಗೂ ಪ್ರಕೃತಿ ಮಾತೆಗೆ ಹಿಂದೂ ಧರ್ಮದಲ್ಲಿ ವಿಶೇಷ ಸ್ಥಾನವಿದೆ ಎಂದರು.

ಮಾಜಿ ಶಾಸಕಿ ಪರಿಮಳಾ ನಾಗಪ್ಪ ಮಾತನಾಡಿದರು. ಸಿದ್ಧಗಂಗಾ ಮಠದ ಕಿರಿಯಶ್ರೀ ಶಿವಸಿದ್ದೇಶ್ವರ ಸ್ವಾಮೀಜಿ, ಕನಕಪುರ ದೇಗುಲ ಮಠದ ಶ್ರೀ ಚನ್ನಬಸವ ಸ್ವಾಮೀಜಿ, ಶಾಸಕ ಗಣೇಶ್ ಪ್ರಸಾದ್, ಕಾಡಾ ಅಧ್ಯಕ್ಷ ಮರಿಸ್ವಾಮಿ, ವಿಧಾನಪರಿಷತ್ ಮಾಜಿ ಸದಸ್ಯ ಮಲ್ಲಿಕಾರ್ಜುನಪ್ಪ ಜಿಪಂ ಮಾಜಿ ಸದಸ್ಯ ಬಸವರಾಜು, ಮುಖಂಡರಾದ ನಟರಾಜು, ಸದಾಶಿವಮೂರ್ತಿ, ಈಶ್ವರ್, ಶೇಖರ್ ಮತ್ತು ಕುಟುಂಬದವರು, ವೀರಶೈವ ಲಿಂಗಾಯತ ಸಮುದಾಯದ ಜಿಲ್ಲಾ ಮತ್ತು ತಾಲೂಕು ಅಧ್ಯಕ್ಷರು ಹಾಗೂ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಶಾಸಕ ಪುಟ್ಟರಂಗಶೆಟ್ಟಿ ರಾಜೀನಾಮೆಗೆ ಆಗ್ರಹ



ಚಾಮರಾಜನಗರ: ಆರು ವರ್ಷಗಳ ಹಿಂದೆ ವಿಧಾನಸೌಧದಲ್ಲಿ 25.75 ಲಕ್ಷ ಹಣ ದೊರೆತ ಪ್ರಕರಣಕ್ಕೆ ಸಂಬಂಧಿಸಿದಂತೆ ಲೋಕಾಯುಕ್ತ ನ್ಯಾಯಾಲಯದಿಂದ ಮರು ತನಿಖೆಗೆ ಆದೇಶ ನೀಡಿದ ಹಿನ್ನೆಲೆ ಶಾಸಕ ಸಿ.ಪುಟ್ಟರಂಗಶೆಟ್ಟಿ ರಾಜೀನಾಮೆ ನೀಡಬೇಕು ಎಂದು ಬಿಜೆಪಿ ಮುಖಂಡ ಜಿ.ನಿಜಗುಣರಾಜು ಒತ್ತಾಯಿಸಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 2019ರಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಸಚಿವರಾಗಿದ್ದ ಸಿ.ಪುಟ್ಟರಂಗಶೆಟ್ಟಿ ಕಚೇರಿಯಲ್ಲಿ ಅವರ ಆಪ್ತ ಸಹಾಯಕನಿಂದ 25.75 ಲಕ್ಷ ರೂ. ಅನ್ನು ಪೊಲೀಸರು ವಶಪಡಿಸಿಕೊಂಡಿದ್ದರು. ಆ ಸಂದರ್ಭದಲ್ಲಿ ಪುಟ್ಟರಂಗಶೆಟ್ಟಿ , ವಿಧಾನಸೌಧದಲ್ಲಿ ಸಿಕ್ಕ ಹಣಕ್ಕೂ, ನನಗೂ ಯಾವುದೇ ಸಂಬಂಧವಿಲ್ಲ ಎಂಬ ಹೇಳಿಕೆ ನೀಡಿದ್ದರು. ಪ್ರಸ್ತುತ ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಲೋಕಾಯುಕ್ತ ನ್ಯಾಯಾಲಯ ಮರು ತನಿಖೆಗೆ ಆದೇಶಿಸಿದೆ ಎಂದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಸಿ.ಪುಟ್ಟರಂಗಶೆಟ್ಟಿ ಅವರನ್ನು ನಿಗಮದ ಅಧ್ಯಕ್ಷ ಸ್ಥಾನದಿಂದ ವಜಾಗೊಳಿಸಬೇಕು. ಪುಟ್ಟರಂಗಶೆಟ್ಟಿ ಶಾಸಕ ಸ್ಥಾನಕ್ಕೆ ನೈತಿಕ ಹೊಣೆ ಹೊತ್ತು ರಾಜೀನಾಮೆ ನೀಡಬೇಕು. ನೀಡದಿದ್ದಲ್ಲಿ ಜಿಲ್ಲಾದ್ಯಂತ ಪಕ್ಷದ ವತಿಯಿಂದ ಹೋರಾಟ ನಡೆಸಲಾಗುವುದು ಎಂದು ಎಚ್ಚರಿಸಿದರು.

ಸುದ್ದಿಗೋಷ್ಠಿಯಲ್ಲಿ ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮೂಡ್ನಾಕೂಡು ಪ್ರಕಾಶ್, ಜಿಪಂ ಮಾಜಿ ಸದಸ್ಯ ಸಿ.ಎನ್.ಬಾಲರಾಜು, ರಾಮಸಮುದ್ರ ಶಿವು, ವೇಣುಗೋಪಾಲ್ ಹಾಜರಿದ್ದರು.

ಬಸ್ ಚಲಿಸುತ್ತಿದ್ದಾಗಲೇ ಚಾಲಕನಿಗೆ ಹಠಾತ್ ಮೂರ್ಛೆ, ಮರಕ್ಕೆ ಅಪ್ಪಳಿಸಿದ ಕೆಎಸ್‌ಆರ್‌ಟಿಸಿ ಬಸ್

ಹನೂರು, ಫೆ.9– ಬಸ್ ಚಲಾಯಿಸುತ್ತಿರುವಾಗಲೇ ಚಾಲಕನಿಗೆ ಮೂರ್ಛೆ ಬಂದ ಪರಿಣಾಮ ಕೆಎಸ್‌ಆರ್‌ಟಿಸಿ ಬಸ್ ಮರಕ್ಕೆ ಡಿಕ್ಕಿ ಹೊಡೆದ ಘಟನೆ ಹನೂರು ತಾಲೂಕಿನ ಚಿಕ್ಕರಂಗಶೆಟ್ಟಿದೊಡ್ಡಿ ಗ್ರಾಮದಲ್ಲಿ ನಡೆದಿದ್ದು, ದುರ್ಘಟನೆಯಲ್ಲಿ ಐವರು ಪ್ರಯಾಣಿಕರು ಗಾಯಗೊಂಡಿದ್ದಾರೆ. ಅದೃಷ್ಟವಶಾತ್ ಯಾವುದೇ ಪ್ರಾಣಹಾನಿಯಾಗಿಲ್ಲ.

ಬಸ್ ಹನೂರು ತಾಲೂಕಿನ ಒಡೆಯರಪಾಳ್ಯ ಗ್ರಾಮದಿಂದ ಮೈಸೂರಿಗೆ ತೆರಳುತ್ತಿತ್ತು. ಬಸ್‌ನಲ್ಲಿ ಸುಮಾರು 40 ಪ್ರಯಾಣಿಕರಿದ್ದರು ಎನ್ನಲಾಗಿದೆ. ವೇಗವಾಗಿ ಚಲಿಸುತ್ತಿದ್ದ ಬಸ್ ಚಿಕ್ಕರಂಗಶೆಟ್ಟಿದೊಡ್ಡಿ ಗ್ರಾಮದ ಬಳಿ ಬರುತ್ತಲೇ ಬಸ್ ಚಾಲಕನಿಗೆ ಹಠಾತ್ ಮೂರ್ಛೆ ಬಂದಿದೆ. ಈ ವೇಳೆ ಚಾಲಕನ ನಿಯಂತ್ರಣ ಕಳೆದುಕೊಂಡಿದ್ದು, ಬಸ್ ವೇಗದಲ್ಲೇ ಅಡ್ಡಾದಿಡ್ಡಿ ಚಲಿಸಿ, ಕೊನೆಗೆ ಮರಕ್ಕೆ ಡಿಕ್ಕಿ ಹೊಡೆದಿದೆ. ಡಿಕ್ಕಿ ಹೊಡೆದ ರಭಸಕ್ಕೆ ಬಸ್ ಮುಂಭಾಗ ನುಜ್ಜುಗುಜ್ಜುಗೊಂಡಿದೆ. ಮುಂಭಾಗದಲ್ಲಿ ಕುಳಿತಿದ್ದ ಐವರು ಪ್ರಯಾಣಿಕರಿಗೆ ಗಾಯಗಳಾಗಿವೆ. ಗಾಯಾಳುಗಳನ್ನು ಸಮೀಪದ ಆಸ್ಪತ್ರೆಗೆ ದಾಖಲಿಸಲಾಗಿದೆ.

ಪಡಿತರ ಅಕ್ಕಿ ಸಾಗಿಸುತ್ತಿದ್ದವನ ಬಂಧನ



ನರೀಪುರ ಕ್ರಾಸ್ ಬಳಿ ಪೊಲೀಸರು ಮತ್ತು ಆಹಾರ ಇಲಾಖೆ ಅಧಿಕಾರಿಗಳು ಅಕ್ರಮ ಪಡಿತರ ಅಕ್ಕಿ ವಶಪಡಿಸಿಕೊಂಡಿರುವುದು.

ಕೊಳ್ಳೇಗಾಲ, ಫೆ.9–ಅಕ್ರಮವಾಗಿ ಪಡಿತರ ಅಕ್ಕಿ ಸಾಗಿಸುತ್ತಿದ್ದ ವ್ಯಕ್ತಿಯನ್ನು ಆಹಾರ ಇಲಾಖೆ ಅಧಿಕಾರಿಗಳು ಮತ್ತು ಪೊಲೀಸರು ಬಂಧಿಸಿ, ಆಟೋ ಹಾಗೂ 14 ಮೂಟೆ ಅಕ್ಕಿ ವಶಪಡಿಸಿಕೊಂಡಿದ್ದಾರೆ.

ಪಟ್ಟಣದ ನಾಯಕರ ಬೀದಿ ನಿವಾಸಿ ಈಶ್ವರ್ ಬಂಧಿತ ಆರೋಪಿ. ಈತ ಕಡಿಮೆ ಬೆಲೆಯಲ್ಲಿ ಕೊಳ್ಳೇಗಾಲದ ಹಲವೆಡೆ ಪಡಿತರ ಅಕ್ಕಿಯನ್ನು ಖರೀದಿಸಿ, ಹೆಚ್ಚಿನ ಬೆಲೆಗೆ ಮಾರಾಟ ಮಾಡಲು ಮಳವಳ್ಳಿ ಕಡೆಗೆ ಸಾಗಿಸುತ್ತಿದ್ದ. ಇದೇ ವೇಳೆ ನರೀಪುರ ಕ್ರಾಸ್ ಬಳಿ ಗ್ರಾಮಾಂತರ ಪೊಲೀಸ್ ಠಾಣೆ ಪಿಎಸ್‌ಐ ಸುಪ್ರೀತ್, ಆಹಾರ ಇಲಾಖೆ ಪ್ರಸಾದ್, ಪೊಲೀಸ್ ಸಿಬ್ಬಂದಿ ಪೂಜಾರಿ, ವಿಜಯಕುಮಾರ್, ಪುಂಡರಿಕ ಚೌಹಣ್ ದಾಳಿ ನಡೆಸಿದ್ದಾರೆ.

ಪಿಎಲ್‌ಡಿ ಬ್ಯಾಂಕ್ ಚುನಾವಣೆ ಶಾಂತಿಯುತ

ಚಾಮರಾಜನಗರ, ಫೆ.9–ತಾಲೂಕು ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣಾ ಅಭಿವೃದ್ಧಿ ಬ್ಯಾಂಕ್ ಆಡಳಿತ ಮಂಡಳಿಗೆ ಭಾನುವಾರ ಶಾಂತಿಯುತವಾಗಿ ಚುನಾವಣೆ ನಡೆಯಿತು.

15 ನಿರ್ದೇಶಕ ಪೈಕಿ ಏಳು ಮಂದಿ ಅವಿರೋಧ ಆಯ್ಕೆಯಾಗಿದ್ದರು. ಉಳಿದ 8 ಕ್ಷೇತ್ರಗಳಿಗೆ ನಗರದ ಪೇಟೆ ಪ್ರೈಮರಿ ಶಾಲೆಯಲ್ಲಿ ಬೆಳಗ್ಗೆ 7 ಗಂಟೆಯಿಂದ ಸಂಜೆ 4ರವರೆಗೆ ಚುನಾವಣೆ ನಡೆಯಿತು.



ಚಾಮರಾಜನಗರ ತಾಲೂಕು ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ಆಡಳಿತ ಮಂಡಳಿಗೆ ಚುನಾವಣೆ ನಡೆಯಿತು.

ಫಲಿತಾಂಶ ಪ್ರಕಟ: ಚುನಾವಣೆಯಲ್ಲಿ ಕೊತ್ತಲವಾಡಿ ಸಾಲಗಾರರ ಮಹಿಳಾ ಮೀಸಲು ಕ್ಷೇತ್ರದಿಂದ ಮಾದಲಾಂಬಿಕಾ, ಹರವೆಯಿಂದ ನಂದೀಶ, ಅಟ್ಟುಗೂಳಿಪುರದಿಂದ ಜಿ.ಪ್ರವೀಣ್ ನಾಯಕ, ಕುದೇರಿನಿಂದ ದೊರೆಸ್ವಾಮಿ, ಸಾಲಗಾರರಲ್ಲದ ಸಾಮಾನ್ಯ ಕ್ಷೇತ್ರದಿಂದ ಬಿ.ಎಸ್.ಶಂಕರಮೂರ್ತಿ, ಬದನಗುಪ್ಪೆಯಿಂದ ಬಸುಮರಿ, ಅರಕಲವಾಡಿಯಿಂದ ರವಿ ಜಯ ಗಳಿಸಿದ್ದಾರೆ ಎಂದು ಚುನಾವಣಾ ಅಧಿಕಾರಿ ಸಹಕಾರ ಸಂಘಗಳ ಸಹಾಯಕ ನಿಬಂಧಕಿ ಶೋಭಾ ಘೋಷಿಸಿದರು.

ಮಾದಲಾಂಬಿಕಾ 17 ಮತ ಪಡೆದು ಜಯಗಳಿಸಿದರೆ, ಸರ್ವಮಂಗಳಮ್ಮ 10 ಮತ ಪಡೆದರು. ನಂದೀಶ 27 ಮತ ಪಡೆದು 2 ಮತಗಳ ಅಂತರದಿಂದ ಜಯ ಗಳಿಸಿದರೆ, ಎಸ್.ಸಿ.ಬಸವರಾಜು 25 ಮತ ಪಡೆದರು. ರವಿ 25 ಮತ ಪಡೆದು 3 ಮತಗಳ ಅಂತರದಿಂದ ಜಯ ಗಳಿಸಿದರೆ, ಎಂ.ಶಿವಕುಮಾರ್ 22, ಬಿ.ಎಸ್.ಅನಿಲ್ 17 ಮತ ಪಡೆದರು. ಎ.ದೊರೆಸ್ವಾಮಿ 17 ಮತ ಪಡೆದು 10 ಮತಗಳ ಅಂತರದಿಂದ ಜಯ ಗಳಿಸಿದರೆ, ಎಸ್.ಜಗದೀಶ್ 7 ಮತ ಪಡೆದರು. ಬಿ.ಎಸ್.ಶಂಕರಮೂರ್ತಿ 188 ಮತ ಪಡೆದು 116 ಮತಗಳಿಂದ ಜಯಗಳಿಸಿದರೆ, ವಿ.ಗುರುಪ್ರಸಾದ್ 72 ಮತ ಪಡೆದರು. ಬಸುಮರಿ 11 ಮತ ಪಡೆದು ಒಂದು ಮತದ ಅಂತರದಿಂದ ಜಯ ಗಳಿಸಿದರೆ, ಎ.ಬಸವರಾಜು 10 ಮತ ಪಡೆದರು.

ಅವಿರೋಧ ಆಯ್ಕೆ: ಹರದನಹಳ್ಳಿ ಕ್ಷೇತ್ರದಿಂದ ಹೆಚ್.ಎಂ.ಬಸವಣ್ಣ, ಉಡಿಗಾಲದಿಂದ ಶ್ರೀಕಂಠಪ್ರಸಾದ್, ಚಂದಕವಾಡಿಯಿಂದ ಮಹದೇವಪ್ಪ ಸಂತೇಮರಹಳ್ಳಿಯಿಂದ ಜ್ಯೋತಿ, ಚಾಮರಾಜನಗರ ಟೌನ್‌ನಿಂದ ಮಹದೇವನಾಯಕ, ಶಿವಪುರದಿಂದ ರಾಜು ಮತ್ತು ನಿಂಗೇಗೌಡ, ಮಲೆಯೂರು ಕ್ಷೇತ್ರದಿಂದ ಅಶೋಕ ಮತ್ತು ರೇವಣ್ಣ ನಾಮಪತ್ರ ಸಲ್ಲಿಸಿದ್ದರು. ಆದರೆ, ರಾಜು ಮತ್ತು ಅಶೋಕ ನಾಮಪತ್ರ ಹಿಂಪಡೆದ ಹಿನ್ನೆಲೆಯಲ್ಲಿ ನಿಂಗೇಗೌಡ ಮತ್ತು ರೇವಣ್ಣ ಸೇರಿದಂತೆ 7 ಕ್ಷೇತ್ರಗಳಿಗೆ ಅವಿರೋಧವಾಗಿ ಆಯ್ಕೆ ಮಾಡಲಾಯಿತು. ಅಧ್ಯಕ್ಷರ ಆಯ್ಕೆ 15 ದಿನಗಳೊಳಗೆ ನಡೆಯಲಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದರು.

ಅತ್ಯುತ್ತಮವಾಗಿ ನರೇಗಾ ಯೋಜನೆ ಅನುಷ್ಠಾನ

ನಂಜನಗೂಡಿಗೆ ಅತ್ಯುತ್ತಮ ತಾಲೂಕು ಪಂಚಾಯಿತಿ ಪ್ರಶಸ್ತಿ



ಅತ್ಯುತ್ತಮ ತಾಪಂ ಪ್ರಶಸ್ತಿಯನ್ನು ಇಓ ಜೆರಾಲ್ಡ್ ರಾಜೇಶ್ ಸ್ವೀಕರಿಸಿದರು.

ನಂಜನಗೂಡು 45 ಗ್ರಾಪಂಗಳನ್ನು ಹೊಂದಿರುವ ದೊಡ್ಡ ತಾಲೂಕಾಗಿದ್ದು, ನರೇಗಾ ಯೋಜನೆಯಡಿ ಹೆಚ್ಚು ಮಾನವ ದಿನಗಳನ್ನು ಸೃಜನೆ ಮಾಡಲಾಗಿದೆ. ಅದಕ್ಕಾಗಿ ತಾಲೂಕಿಗೆ ಒಟ್ಟು 3 ಪ್ರಶಸ್ತಿ ಲಭಿಸಿದ್ದು, ಭವಿಷ್ಯದಲ್ಲಿ ಇನ್ನಷ್ಟು ಉತ್ತಮ ಕೆಲಸ ಮಾಡಲು ಪ್ರೇರಣೆ ಯಾಗಿದೆ.

- ಜೆರಾಲ್ಡ್ ರಾಜೇಶ್, ತಾಪಂ ಇಓ.

ನಂಜನಗೂಡು, ಫೆ.9– 2023–24ನೇ ಸಾಲಿನಲ್ಲಿ ಅತ್ಯುತ್ತಮವಾಗಿ ನರೇಗಾ ಯೋಜನೆ ಅನುಷ್ಠಾನಗೊಳಿಸಿದಕ್ಕಾಗಿ ಜಿಪಂ ಸಿಇಓ ಕೆ.ಎಂ.ಗಾಯತ್ರಿ ಅವರು ನಂಜನಗೂಡು ತಾಪಂಗೆ ಅತ್ಯುತ್ತಮ ತಾಲೂಕು ಪಂಚಾಯಿತಿ ಪ್ರಶಸ್ತಿ ನೀಡಿ ಗೌರವಿಸಿದರು.

ನರೇಗಾ ದಿನಾಚರಣೆ ಹಿನ್ನೆಲೆಯಲ್ಲಿ ಮೈಸೂರು ಜಿಪಂ ವತಿಯಿಂದ ನಗರದ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ನಡೆದ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಯಿತು. ನರೇಗಾ ಯೋಜನೆ ಅನುಷ್ಠಾನದಲ್ಲಿ 3,47,288 ಮಾನವ ದಿನಗಳ ಸೃಜನೆ ಮಾಡಿದಕ್ಕಾಗಿ ತಾಪಂ ಇಓ ಹಾಗೂ ನರೇಗಾ ಸಹಾಯಕ ನಿರ್ದೇಶಕರಿಗೆ ಅತ್ಯುತ್ತಮ ತಾಪಂ ಪ್ರಶಸ್ತಿ ಹಾಗೂ ಪ್ರಮಾಣಪತ್ರ ನೀಡಲಾಯಿತು.

ನೆಲ್ಲಿತಾಳಪುರ ಉತ್ತಮ ಗ್ರಾಪಂ: ತಾಲೂಕಿನ ನೆಲ್ಲಿತಾಳಪುರ ಗ್ರಾಪಂ ನರೇಗಾ ಅನುಷ್ಠಾನದಲ್ಲಿ 24,230 ಮಾನವ ದಿನಗಳನ್ನು ಸೃಜನೆ ಮಾಡಿದ್ದಕ್ಕಾಗಿ ತಾಲೂಕಿನ ಉತ್ತಮ ಗ್ರಾಪಂ ಆಗಿ ಗುರ್ತಿಸಲಾಗಿದ್ದು, ಸಮಾರಂಭದಲ್ಲಿ ಪಿಡಿಓ, ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಸದಸ್ಯರು ಭಾಗಿಯಾಗಿ ಪ್ರಶಸ್ತಿ ಸ್ವೀಕರಿಸಿದರು.

ಇದೇ ವೇಳೆ ನರೇಗಾ ಯೋಜನೆ ಅನುಷ್ಠಾನದಲ್ಲಿ 90212 ಮಾನವ ದಿನಗಳನ್ನು ಸೃಜನೆ ಮಾಡಿದ್ದ ತೋಟಗಾರಿಕೆ ಇಲಾಖೆಗೆ ಉತ್ತಮ ಅನುಷ್ಠಾನ ಇಲಾಖೆ ಪ್ರಶಸ್ತಿ ನೀಡಲಾಯಿತು. ಕಾರ್ಯಕ್ರಮದಲ್ಲಿ ಜಿಪಂ ಹಾಗೂ ತಾಪಂ ಸಿಬ್ಬಂದಿ ವರ್ಗ ಹಾಜರಿದ್ದರು.

ಇಂದಿನಿಂದ ಭೀಮನಕೊಲ್ಲಿ ಶ್ರೀಮಹದೇಶ್ವರಸ್ವಾಮಿ ಜಾತ್ರಾ ಮಹೋತ್ಸವ



ಹೆಚ್.ಡಿ.ಕೋಟೆ ತಾಲೂಕಿನ ಶ್ರೀಕ್ಷೇತ್ರ ಭೀಮನಕೊಲ್ಲಿ ದೇವಸ್ಥಾನ.



ಹೆಚ್.ಡಿ.ಕೋಟೆ, ಫೆ.9– ತಾಲೂಕಿನ ಪ್ರಸಿದ್ಧ ಭೀಮನಕೊಲ್ಲಿ ಶ್ರೀಮಹದೇಶ್ವರ ಸ್ವಾಮಿ ಜಾತ್ರಾ ಮಹೋತ್ಸವ ಫೆ.10ರಿಂದ 12ರವರೆಗೆ ನಡೆಯಲಿದ್ದು, ಜಾತ್ರೆಗೆ ಎಲ್ಲಾ ಸಕಲ ಸಿದ್ಧತೆ ಕೈಗೊಳ್ಳಲಾಗಿದೆ ಎಂದು ದೇವಾಲಯದ ಟ್ರಸ್ಟ್ ಅಧ್ಯಕ್ಷ ಎಂಪಿಎನ್ ಮೂರ್ತಿ ತಿಳಿಸಿದರು.

ದೇವಾಲಯದ 3 ಕಡೆ ಕಬಿನಿ ಹಿನ್ನೀರಿದ್ದು, ದ್ವೀಪದ ನಡುವೆ ದೇವಸ್ಥಾನ ಇದೆ. ಜಾತ್ರಾ ಮಹೋತ್ಸವ ಅಂಗವಾಗಿ ದೇವಸ್ಥಾನವನ್ನು ತಳಿರು ತೋರಣ, ವಿದ್ಯುತ್ ದೀಪಗಳಿಂದ ಅಲಂಕರಿಸಲಾಗಿದೆ. ಭಕ್ತರ ಅನುಕೂಲಕ್ಕಾಗಿ ಕೆಎಸ್ಆರ್‌ಟಿಸಿ ವತಿಯಿಂದ ಹೆಚ್.ಡಿ.ಕೋಟೆ, ಸರಗೂರು ಮತ್ತು ಮೈಸೂರಿನಿಂದ ಬಸ್ ವ್ಯವಸ್ಥೆ ಮಾಡಲಾಗಿದೆ. ಕಬಿನಿ ಹಿನ್ನೀರಿನಲ್ಲಿರುವ ಕಾರಾಪುರ, ಎನ್.ಬೆಳತ್ತೂರು, ಮಗ್ಗೆ, ಮಳಲಿ, ಕೆ.ಆರ್.ಪುರ ಇನ್ನಿತರ ಗ್ರಾಮಸ್ಥರು ಜಾತ್ರೆಗೆ ಆಗಮಿಸಲು ಕಬಿನಿ ಹಿನ್ನೀರಿನ ಮೂಲಕ ಬರಲು ಸರ್ಕಾರ ಯಾಂತ್ರಿಕ ಮೋಟಾರ್ ಬೋಟ್ ವ್ಯವಸ್ಥೆ ಮಾಡಲಾಗಿದೆ. ಭಕ್ತರು ಬೆಳಗ್ಗೆ 7ರಿಂದ ಸಂಜೆ 6 ಗಂಟೆವರೆಗೆ ಈ ಬೋಟ್‌ನಲ್ಲಿ ಸಂಚರಿಸಬಹುದಾಗಿದೆ ಎಂದರು.

ಜಾತ್ರಾ ಮಹೋತ್ಸವದ ಅಂಗವಾಗಿ ಮಹಾ ರಥೋತ್ಸವ, ಕಬಿನಿ ಹಿನ್ನೀರಿನಲ್ಲಿ ತೆಪ್ಪೋತ್ಸವ, ದನಗಳ ಪ್ರದರ್ಶನ, ಧಾರ್ಮಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ. ಫೆ.12 ರಂದು ನಡೆಯುವ ರಥೋತ್ಸವದಂದು ಭಕ್ತರಿಗೆ ಅನ್ನದಾನದ ವ್ಯವಸ್ಥೆ ಮಾಡಲಾಗಿದೆ ಎಂದರು.

ಜಾತ್ರೆ ಯಶಸ್ವಿಗಾಗಿ ಮಹದೇಶ್ವರಸ್ವಾಮಿ ಭಕ್ತ ಮಂಡಳಿಯಿಂದ ಸಕಲ ಸಿದ್ಧತೆ ಕೈಗೊಳ್ಳಲಾಗಿದ್ದು, ಅಹಿತಕರ ಘಟನೆ ನಡೆಯದಂತೆ ಮುಂಜಾಗ್ರತಾ ಕ್ರಮವಾಗಿ ಕೋಟೆ, ಸರಗೂರು ಮತ್ತು ಅಂತರಸಂತೆ ಪೊಲೀಸರು ಬಿಗಿ ಬಂದೋಬಸ್ತ್ ಕೈಗೊಂಡಿದ್ದಾರೆ ಎಂದರು.

ಭೀಮನಕೊಲ್ಲಿ ಮಹದೇಶ್ವರ ಟ್ರಸ್ಟ್ ಪ್ರಧಾನ ಕಾರ್ಯದರ್ಶಿ ಜಗದೀಶ್ ಮಾತನಾಡಿ, ಜಾತ್ರಾ ಮಹೋತ್ಸವಕ್ಕೆ ಕೋಟೆ, ಸರಗೂರು ತಾಲೂಕು ಸೇರಿದಂತೆ ವಿವಿಧೆಡೆಗಳಿಂದ 15 ಸಾವಿರಕ್ಕೂ ಹೆಚ್ಚು ಭಕ್ತರು ಆಗಮಿಸುವ ನಿರೀಕ್ಷೆ ಇದೆ. ಒಟ್ಟಾರೆ ಈ ಭಾಗದ ಜನತೆ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಜಾತ್ರೆಯಶಸ್ವಿಗೊಳಿಸಬೇಕು ಎಂದರು.

ಕಾರ್ಯಕ್ರಮಗಳು: ಫೆ.10 ರಂದು ಬೆಳಗ್ಗೆ 6 ಗಂಟೆಗೆ ಹೋಮ, ಮಹಾರುದ್ರಾಭಿಷೇಕ, 9 ಗಂಟೆಗೆ ಮಹಾ ಮಂಗಳಾರತಿ, ರಾತ್ರಿ 12 ಗಂಟೆಗೆ ಹಾಲರವಿ ಸೇವೆ, ದೇವರ ಮೆರವಣಿಗೆ, ಕೊಂಡೋತ್ಸವ. ಫೆ.11 ರಂದು ಮುಂಜಾನೆ ಸಹಸ್ರ ಬಿಲ್ವಾರ್ಚನೆ, 9 ಗಂಟೆಗೆ ಮಹಾಮಂಗಳಾರತಿ, 10 ಗಂಟೆಗೆ ಮಹಾರಥೋತ್ಸವ ರಾತ್ರಿ 12 ಗಂಟೆಗೆ ಆನೆ ಮಹೋತ್ಸವ, ಫೆ.12 ರಂದು ಬೆಳಗ್ಗೆ 6ಗಂಟೆಗೆ ಸಹಸ್ರ ಬಿಲ್ವಾರ್ಚನೆ, ಇತರೆ ಪೂಜಾ ಕಾರ್ಯಕ್ರಮಗಳು ಹಾಗೂ ಬೆಳಗ್ಗೆ 9 ಗಂಟೆಗೆ ಮಹಾಮಂಗಳಾರತಿ, ರಾತ್ರಿ 12ರ ನಂತರ ತೆಪ್ಪೋತ್ಸವ ನಡೆಯಲಿದೆ.

ಈ ವೇಳೆ ದೇವಸ್ಥಾನ ಟ್ರಸ್ಟ್ ಉಪಾಧ್ಯಕ್ಷ ಗುರುಮಲ್ಲಪ್ಪ, ಎನ್.ಬೇಗೂರು ಗ್ರಾಪಂ ಅಧ್ಯಕ್ಷ ಶೈಲೇಂದ್ರ ಇನ್ನಿತರರಿದ್ದರು.

ಬಸ್ಸುಗಳ ನಿರ್ವಹಣಾ ಖರ್ಚು ಹೆಚ್ಚಳ ಹಿನ್ನೆಲೆ

ಖಾಸಗಿ ಬಸ್‌ಗಳ ಟಿಕೆಟ್ ದರ ಏರಿಕೆಗೆ ನಿರ್ಧಾರ



ಖಾಸಗಿ ಬಸ್ ಮಾಲೀಕರ ಸಂಘದ ಸಭೆಯಲ್ಲಿ ಬಸ್ ದರ ಏರಿಕೆ ಬಗ್ಗೆ ಚರ್ಚಿಸಲಾಯಿತು.

ತಿ.ನರಸೀಪುರ, ಫೆ.9– ಡೀಸೆಲ್, ವಾಹನಗಳ ಬಿಡಿಭಾಗಗಳ ಬೆಲೆ, ಆಯಿಲ್ ಸರ್ವಿಸ್ ಹಾಗೂ ಬಸ್ಸುಗಳ ನಿರ್ವಹಣೆ ಖರ್ಚು ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಖಾಸಗಿ ಬಸ್ಸುಗಳ ಟಿಕೆಟ್ ದರ ಏರಿಕೆ ಮಾಡಲು ಮೈಸೂರು ಹಾಗೂ ಚಾಮರಾಜನಗರ ಜಿಲ್ಲಾ ಖಾಸಗಿ ಬಸ್ ಮಾಲೀಕರ ಸಂಘದ ಸಭೆಯಲ್ಲಿ ತೀರ್ಮಾನಿಸಲಾಯಿತು.

ಮೈಸೂರು ಸಂಘದ ಅಧ್ಯಕ್ಷ ಶಿವಲಿಂಗೇಗೌಡ ಹಾಗೂ ಚಾಮರಾಜನಗರದ ಸಂಘದ ಅಧ್ಯಕ್ಷ ಅನ್ವರ್ ಅಧ್ಯಕ್ಷತೆಯಲ್ಲಿ ನಡೆದ ಖಾಸಗಿ ಬಸ್ ಮಾಲೀಕರ ಸಭೆಯಲ್ಲಿ ಎರಡು ಜಿಲ್ಲೆಗಳ ಪ್ರಯಾಣ ದರದಲ್ಲಿ ಏರಿಕೆ ಮಾಡಿ, ಮಾರ್ಪಾಡು ಮಾಡುವ ನಿರ್ಧಾರ ತೆಗೆದುಕೊಳ್ಳಲಾಯಿತು.

ಅದರಂತೆ ಮೈಸೂರಿನಿಂದ ತಿ.ನರಸೀಪುರಕ್ಕೆ 40 ರೂ., ಕೊಳ್ಳೇಗಾಲಕ್ಕೆ 75 ರೂ., ಶ್ರೀಮಲೆ ಮಹದೇಶ್ವರಬೆಟ್ಟಕ್ಕೆ 180 ರೂ., ಸಂತೆ ಮರಳ್ಳಿಗೆ 60 ರೂ., ಚಾಮರಾಜನಗರಕ್ಕೆ 75 ರೂ., ಯಳಂದೂರಿಗೆ 60 ರೂ., ಕೊಳ್ಳೇಗಾಲದಿಂದ–ನರಸೀಪುರಕ್ಕೆ 40ರೂ., ಶ್ರೀ ಮಲೆ ಮಹದೇಶ್ವರ ಬೆಟ್ಟಕ್ಕೆ 110 ರೂ., ಚಾಮರಾಜನಗರಕ್ಕೆ 40 ರೂ. ಹಾಗೂ ನರಸೀಪುರದಿಂದ–ನಂಜನಗೂಡು 35 ರೂ.ಗಳನ್ನು ನಿಗದಿ ಮಾಡಲಾಗಿದ್ದು, ಫೆ.20ರಿಂದ ಪರಿಷ್ಕೃತ ದರ ಜಾರಿಗೆ ಬರಲಿದೆ. ಕೆಎಸ್ಆರ್‌ಟಿಸಿ ಬಸ್‌ಗಿಂತ ಕಡಿಮೆ ದರದಲ್ಲಿ ಪ್ರಯಾಣಿಕರಿಗೆ ಅನುಕೂಲ ಮಾಡಿಕೊಡಲೆಂದು ದರ ನಿಗದಿಪಡಿಸಿದ್ದೇವೆ. ಆದ್ದರಿಂದ ಪ್ರಯಾಣಿಕರು ಸಹಕರಿಸಬೇಕು ಎಂದು ಬಸ್ಸುಗಳ ಮಾಲೀಕರು ಮನವಿ ಮಾಡಿದ್ದಾರೆ. ಈ ದರ ಮೈಸೂರು ಹಾಗೂ ಚಾಮರಾಜನಗರ ಜಿಲ್ಲೆಯ ಗ್ರಾಮಾಂತರ ಪ್ರದೇಶಗಳಿಗೂ ಒಳಪಟ್ಟಿರುತ್ತದೆ.

ಸಭೆಯಲ್ಲಿ ಮೈಸೂರು ಹಾಗೂ ಚಾಮರಾಜನಗರ ಜಿಲ್ಲಾ ಬಸ್ ಮಾಲೀಕರ ಸಂಘದ ಕೆ.ನಾಗೇಂದ್ರ, ಹೋಟೆಲ್ ರಾಜಣ್ಣ, ಮನು, ಆರ್.ಡಿ.ಕುಮಾರ್, ವಿಜಯ ಕೃಷ್ಣ, ಎಸ್ಎಂಆರ್ ಪಾರಿ, ತಿಲಕ್ ಕುಮಾರ್, ಶ್ರೀನಿವಾಸ, ಮುರುಳಿ, ಆರ್‌ಟಿಸಿ ಸ್ವಾಮಿ, ಗೋವಿಂದ, ಎಸ್‌ಪಿಎಸ್ ಗಂಗಾಧರ್, ರಾಜೀವ, ಚೇತನ್, ಗಿರೀಶ್, ಎಂಕೆಪಿ ರಂಗಸ್ವಾಮಿ ಹಾಗೂ ಮಾಲೀಕರು ಹಾಜರಿದ್ದರು.

ನರೇಗಾ ಯೋಜನೆ ಅನುಷ್ಠಾನದಲ್ಲಿ

ಮೈಸೂರು ಜಿಲ್ಲೆಗೆ ಹೆಚ್.ಡಿ.ಕೋಟೆ ತಾಪಂ ಪ್ರಥಮ



ಅತ್ಯುತ್ತಮ ತಾಪಂ ಪ್ರಶಸ್ತಿಯನ್ನು ಇಓ ಧರಣೇಶ್ ಸ್ವೀಕರಿಸಿದರು.

ಸರ್ಕಾರದ ಯೋಜನೆಗಳನ್ನು ಜನರಿಗೆ ಸಮರ್ಪಕವಾಗಿ ತಲುಪಿಸಬೇಕಿರುವುದು ನಮ್ಮ ಕರ್ತವ್ಯ ಅದನ್ನು ಅಚ್ಚುಕಟ್ಟಾಗಿ ಮಾಡಿದಾಗ ತಾಲೂಕಿಗೆ ಮತ್ತು ಅಧಿಕಾರಿ ವರ್ಗಕ್ಕೆ ಗೌರವ ಸಿಗಲಿದೆ. ಶಾಸಕರು, ಸಂಸದರು ಮತ್ತು ಜಿಲ್ಲಾ ಮಟ್ಟದ ಅಧಿಕಾರಿಗಳ ನಿರ್ದೇಶನ, ತಾಲೂಕು ಮಟ್ಟದ ಅಧಿಕಾರಿಗಳ ಸಹಕಾರ ಮತ್ತು ಶ್ರಮದಿಂದ ಪ್ರಶಸ್ತಿ ಬಂದಿದೆ. ಇನ್ನೂ ಹೆಚ್ಚಿನ ರೀತಿ ಕೆಲಸ ಮಾಡಲು ಪ್ರಶಸ್ತಿ ಪ್ರೇರಣೆಯಾಗಿದೆ.

- ಎಸ್.ಪಿ.ಧರಣೇಶ್, ತಾಪಂ ಇಓ.

ಹೆಚ್.ಡಿ.ಕೋಟೆ, ಫೆ.9– ನರೇಗಾ ಯೋಜನೆ ಅನುಷ್ಠಾನದಲ್ಲಿ ಮೈಸೂರು ಜಿಲ್ಲೆಗೆ ಹೆಚ್.ಡಿ.ಕೋಟೆ ತಾಪಂ ಪ್ರಥಮ ಸ್ಥಾನ ಪಡೆದು ಪ್ರಶಸ್ತಿ ತನ್ನದಾಗಿಸಿಕೊಂಡಿದೆ.

ಮೈಸೂರಿನ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ಮೈಸೂರು ಜಿಪಂ ವತಿಯಿಂದ ಹಮ್ಮಿಕೊಂಡಿದ್ದ ನರೇಗಾ ದಿನಾಚರಣೆಯಲ್ಲಿ ಸಿಇಓ ಗಾಯತ್ರಿ ಅವರು ತಾಪಂ ಇಓ ಎಸ್.ಪಿ.ಧರಣೇಶ್ ಅವರಿಗೆ ಪ್ರಶಸ್ತಿ ಹಾಗೂ ಪ್ರಮಾಣ ಪತ್ರ ನೀಡಿ ಗೌರವಿಸಿದರು.

ನರೇಗಾ ದಿನಾಚರಣೆ ಅಂಗವಾಗಿ 2023–24 ನೇ ಸಾಲಿನಲ್ಲಿ ನರೇಗಾ ಯೋಜನೆಯ ಅತ್ಯುತ್ತಮ ಅನುಷ್ಠಾನಕ್ಕಾಗಿ ಪ್ರಶಸ್ತಿ ನೀಡಲಾಗಿದ್ದು, ಕೋಟೆ ತಾಪಂ 4,08,890 ಮಾನವ ದಿನಗಳನ್ನು ಸೃಜನೆ ಮಾಡುವ ಮೂಲಕ ಪ್ರಥಮ ಸ್ಥಾನ ಪಡೆದಿದೆ. ಹೆಚ್.ಡಿ.ಕೋಟೆ ತಾಲೂಕಿನ 26 ಗ್ರಾಪಂಗಳ ಪೈಕಿ ಚಕ್ಕೋಡನಹಳ್ಳಿ ಗ್ರಾಪಂ 41,119 ಮಾನವ ದಿನಗಳನ್ನು ಸೃಜನೆ ಮಾಡಿರುವುದಕ್ಕೆ ಉತ್ತಮ ಗ್ರಾಪಂ ಪ್ರಶಸ್ತಿ ಪಡೆದುಕೊಂಡಿದೆ.

ತಾಲೂಕು ಮಟ್ಟದ ಅನುಷ್ಠಾನ ಇಲಾಖೆಗಳಲ್ಲಿ ಹೆಚ್.ಡಿ.ಕೋಟೆ ಸಾಮಾಜಿಕ ಅರಣ್ಯ ಇಲಾಖೆಯು 64,825 ಮಾನವ ದಿನಗಳನ್ನು ಸೃಜನೆ ಮಾಡಿರುವುದರಿಂದ ಉತ್ತಮ ಅನುಷ್ಠಾನ ಇಲಾಖೆ ಪ್ರಶಸ್ತಿ ಪಡೆದುಕೊಂಡಿದೆ. ಆಲನಹಳ್ಳಿ ಗ್ರಾಪಂ ವ್ಯಾಪ್ತಿಯ ಆಲನಹಳ್ಳಿ ಗ್ರಾಮದ ಶಿವರಾಜು ರಾಜಪ್ಪ ಅವರಿಗೆ (ರೇಷ್ಮೆ ಇಲಾಖೆ) ವೈಯಕ್ತಿಕ ಫಲಾನುಭವಿ ಪ್ರಶಸ್ತಿ ದೊರೆತಿದೆ.

ಕಾರ್ಯಕ್ರಮದಲ್ಲಿ ಜಿಪಂ ಉಪ ಕಾರ್ಯದರ್ಶಿ ಡಾ.ಎಂ.ಕೃಷ್ಣರಾಜು, ಸವಿತಾ, ಮುಖ್ಯ ಯೋಜನಾಧಿಕಾರಿ ಪ್ರಭುಸ್ವಾಮಿ, ಅನುಷ್ಠಾನ ಇಲಾಖೆ ಅಧಿಕಾರಿ ರಘುನಾಥ್, ತಾಲೂಕಿನ 26 ಗ್ರಾಪಂಗಳ ಪಿಡಿಓಗಳು, ಇತರ ಅಧಿಕಾರಿಗಳು ಉಪಸ್ಥಿತರಿದ್ದರು.

ಸೋಮನಾಥಪುರ ಪಿಎಸಿಎಸ್ ಚುನಾವಣೆ: 6 ನಿರ್ದೇಶಕರು ಆಯ್ಕೆ



ಚುನಾವಣೆಯಲ್ಲಿ 12 ನಿರ್ದೇಶಕರು ಆಯ್ಕೆಯಾದರು.

ತಿ.ನರಸೀಪುರ, ಫೆ.9– ತಾಲೂಕಿನ ಸೋಮನಾಥಪುರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಆಡಳಿತ ಮಂಡಳಿಗೆ ನಡೆದ ಚುನಾವಣೆಯಲ್ಲಿ 6 ಮಂದಿ ನಿರ್ದೇಶಕರು ಆಯ್ಕೆಯಾದರು.

ಭಾನುವಾರ ಸಹಕಾರ ಸಂಘದಲ್ಲಿ ಮುಂದಿನ 5 ವರ್ಷಗಳ ಅವಧಿಗೆ ನಿರ್ದೇಶಕರ ಆಯ್ಕೆಗಾಗಿ ನಡೆದ ಚುನಾವಣೆಯಲ್ಲಿ ಬಿರುಸಿನ ಮತದಾನ ನಡೆಯಿತು. ಸಾಲಗಾರರ ಕ್ಷೇತ್ರದಿಂದ 255 ಹಾಗೂ ಸಾಲಗಾರರಲ್ಲದ 38 ಅರ್ಹ ಮತದಾರರು ತಮ್ಮ ಹಕ್ಕು ಚಲಾಯಿಸಿದರು.

ಸಂಜೆ 4 ಗಂಟೆ ನಂತರ ಮತ ಎಣಿಕೆ ನಡೆದು ಸಾಲಗಾರರ ಕ್ಷೇತ್ರದಿಂದ ಕೆ.ಎಂ.ಚಂದ್ರಶೇಖರ್ ಹಾಗೂ ಎಸ್.ನಾಗರಾಜು ತಲಾ 163 ಮತ ಪಡೆದು ನಿರ್ದೇಶಕರಾಗಿ ಆಯ್ಕೆಯಾದರೆ, ಆರ್.ರಂಗಸ್ವಾಮಿ (136), ಗಿರೀಶ್‌ಗೌಡ(119) ಹಾಗೂ 112 ಮತ ಪಡೆದು ಎಂ.ಮಹದೇವು ಜಯಗಳಿಸಿದರು. ಸಾಲಗಾರರಲ್ಲದ ಕ್ಷೇತ್ರದಿಂದ 23 ಮತ ಪಡೆದು ಉಷಾ ಗೆಲುವು ಸಾಧಿಸಿದರು.

ಇನ್ನುಳಿದ 6 ಸ್ಥಾನಕ್ಕೆ ಅವಿರೋಧ ಆಯ್ಕೆ ನಡೆದು ಪ.ಪಂಕ್ತಿ ಮೀಸಲಾದ ಸ್ಥಾನಕ್ಕೆ ಶ್ರೀರಂಗರಾಜಪುರ ಎಂ.ಸಿದ್ದರಾಜು, ಹಿಂದುಳಿದ ಪ್ರವರ್ಗ 'ಬಿ' ಯಿಂದ ಡಿ.ಶಿವಣ್ಣ, ಹಿಂದುಳಿದ ಪ್ರವರ್ಗ 'ಎ' ಯಿಂದ ಮರಮ್ಮ, ಮಹಿಳಾ ಮೀಸಲು ಸ್ಥಾನಕ್ಕೆ ಸುಂದ್ರಮ್ಮ, ಪ.ಜಾತಿಗೆ ಮೀಸಲಾದ ಸ್ಥಾನಕ್ಕೆ ಸಿ.ನಂಜುಂಡಯ್ಯ ಆಯ್ಕೆಯಾದರೆ ಸಾಲಗಾರರಲ್ಲದ ಕ್ಷೇತ್ರದಿಂದ ಮಹಿಳಾ ಮೀಸಲಿನಡಿ ಅನುಸೂಯ ಆಯ್ಕೆಗೊಂಡರು.

ಚುನಾವಣಾಧಿಕಾರಿ ಅಶ್ವಿನ್ ಕುಮಾರ್ ಚುನಾವಣಾ ಪ್ರಕ್ರಿಯೆ ನಡೆಸಿಕೊಟ್ಟರು.

ಪ್ರಥಮ ದರ್ಜೆ ಗುತ್ತಿಗೆದಾರ ಎಂ.ಸಿದ್ದರಾಜು ಮಾತನಾಡಿ, ತಮ್ಮನ್ನು ಅವಿರೋಧವಾಗಿ ಆಯ್ಕೆ ಮಾಡಿದ ಮತದಾರರು ನನ್ನ ಮೇಲಿಟ್ಟಿರುವ ನಂಬಿಕೆ ಉಳಿಸಿಕೊಂಡು ಪ್ರಾಮಾಣಿಕವಾಗಿ ಕೆಲಸ ಮಾಡುತ್ತೇನೆ. ಸಹಕಾರ ಸಂಘದಿಂದ ಸದಸ್ಯರಿಗೆ ದೊರಕಬಹುದಾದ ಎಲ್ಲ ಸವಲತ್ತುಗಳನ್ನು ಸರ್ವ ಸದಸ್ಯರ ಸಹಕಾರದೊಂದಿಗೆ ದೊರಕಿಸಿಕೊಡಲು ಬದ್ಧನಾಗಿದ್ದೇನೆ ಎಂದರು. ಈ ವೇಳೆ ಉಕ್ಕಲಗೆರೆ ಶಿವು, ಶ್ರೀನಿವಾಸ್‌ಗೌಡ, ಗ್ರಾಪಂ ಮಾಜಿ ಅಧ್ಯಕ್ಷ ಪುಟ್ಟಸ್ವಾಮಿ, ರಾಜೇಶ್, ದಯಾನಂದ ಪಟೇಲ್, ತಾಪಂ ಮಾಜಿ ಸದಸ್ಯ ರಾಮಲಿಂಗು, ಶಿವಸ್ವಾಮಿ, ಸುಬ್ಬೇಗೌಡ, ನಾಗರಾಜು, ರಾಮಾಚಾರಿ ರಂಗಸ್ವಾಮಿ, ಕಗ್ಗಲೀಪುರ ಮಹೇಶ್ ಸೇರಿದಂತೆ ಇತರರಿದ್ದರು.

ತ್ರಿವೇಣಿ ಸಂಗಮದಲ್ಲಿ ಸಿದ್ಧತೆ ಪರಿಶೀಲನೆ



ತಿ.ನರಸೀಪುರದ ತ್ರಿವೇಣಿ ಸಂಗಮದಲ್ಲಿ ಸೋಮವಾರದಿಂದ ದಕ್ಷಿಣ ಭಾರತದ ಕುಂಭಮೇಳ ನಡೆಯುವ ಹಿನ್ನೆಲೆಯಲ್ಲಿ ಭಾನುವಾರ ಸಂಜೆ ಸಿದ್ಧತೆಗಳನ್ನು ಸುತ್ತೂರು ಮಠದ ಶ್ರೀಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಹಾಗೂ ಸಂಸದ ಸುನೀಲ್ ಬೋಸ್ ಪರಿಶೀಲಿಸಿದರು. ಈ ವೇಳೆ ಆದಿಚುಂಚನಗಿರಿ ಶಾಖಾ ಮಠದ ಶ್ರೀಸೋಮೇಶ್ವರನಾಥ ಸ್ವಾಮೀಜಿ, ಮೈಸೂರು ಜಿಲ್ಲಾ ಎಸ್ಪಿ ವಿಷ್ಣುವರ್ಧನ, ಎಡಿಸಿ ಡಾ.ಪಿ.ಶಿವರಾಜು, ಉಪವಿಭಾಗಾಧಿಕಾರಿ ರಕ್ಷಿತ್, ತಹಸೀಲ್ದಾರ್ ಸುರೇಶಾಚಾರ್, ಸ್ವಾಮಿನಾಥಗೌಡ, ರಾಜಣ್ಣ, ಎಸ್.ಕೆ.ಕಿರಣ ಇತರರಿದ್ದರು.

ತಿ.ನರಸೀಪುರದಲ್ಲಿ ಇಂದು ದ್ವಾದಶ ಜ್ಯೋತಿರ್ಲಿಂಗಗಳ ಪುಣ್ಯದರ್ಶನ

ಮೈಸೂರು: ತಿರಮಕೂಡಲು ಅಂತಾರಾಷ್ಟ್ರೀಯ ಆಧ್ಯಾತ್ಮಿಕ ಸಂಸ್ಥೆ ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವ ವಿದ್ಯಾಲಯದ ವತಿಯಿಂದ ದಕ್ಷಿಣ ಭಾರತದ



ಮಹಾಕುಂಭ ಮೇಳದ ಪವಿತ್ರ ಪ್ರಾಂಗಣದಲ್ಲಿ ದ್ವಾದಶ ಜ್ಯೋತಿರ್ಲಿಂಗಗಳ ಪುಣ್ಯದರ್ಶನ ಹಾಗೂ ಶಿವದರ್ಶನ ಪ್ರದರ್ಶನದ ಉದ್ಘಾಟನಾ ಕಾರ್ಯಕ್ರಮವನ್ನು ಫೆ.10ರ ಸಂಜೆ 4 ಗಂಟೆಗೆ ಹಮ್ಮಿಕೊಳ್ಳಲಾಗಿದೆ.

ದಿವ್ಯಸಾನ್ನಿಧ್ಯವನ್ನು ಶ್ರೀ ಸಿದ್ದಲಿಂಗ ಶಿವಾಚಾರ್ಯ ಮಹಾಸ್ವಾಮೀಜಿ ವಹಿಸಲಿದ್ದಾರೆ. ಶ್ರೀ ಸೋಮನಾಥ ಸ್ವಾಮೀಜಿ ಉದ್ಘಾಟಿಸಲಿದ್ದಾರೆ. ಬಿಕೆ ಲಕ್ಷ್ಮೀಜೀಯವರು ಅಧ್ಯಕ್ಷತೆ ವಹಿಸಲಿದ್ದಾರೆ. ಪ್ರಭಾಮಣೀಜಿಯವರು ಸಂದೇಶ ನೀಡಲಿದ್ದಾರೆ.

ಯೋಗಾನುಭೂತಿಯನ್ನು ರಾಜಯೋಗಿನಿ ಬ್ರಹ್ಮಾಕುಮಾರಿ ದಾನೇಶ್ವರೀಜೀಯವರು ಮಾಡಿಸಲಿದ್ದಾರೆ. ಹಳೇ ತಿರುಮಕೂಡಲು ಶ್ರೀ ಚೌಡೇಶ್ವರಿ ದೇವಾಲಯದ ಮುಂಭಾಗದಲ್ಲಿ ಹಾಕಲಾಗಿರುವ ಓಂ ಶಾಂತಿ ಮಂಟಪದಲ್ಲಿ ಸಾರ್ವಜನಿಕರಿಗಾಗಿ ಬೆಳಗ್ಗೆ 7ರಿಂದ ಸಂಜೆ 9ಗಂಟೆಯವರೆಗೆ ಮೂರು ದಿನಗಳು ಉಚಿತವಾಗಿ ತೆರೆಯಲಾಗಿರುತ್ತದೆ. ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಪುಣ್ಯದರ್ಶನ ಮಾಡುವಂತೆ ಆಧ್ಯಾತ್ಮಿಕ ಸಂಸ್ಥೆ ಸಂಚಾಲಕಿ ರಾಜಯೋಗಿನಿ ಬ್ರಹ್ಮಾಕುಮಾರಿ ಶಾಂಭವೀಜೀ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಂಬೇಡ್ಕರ್ ಪುತ್ಥಳಿ ಅನಾವರಣಕ್ಕೆ ದಿನಾಂಕ ನಿಗದಿ



ದೇವಲಾಪುರಕ್ಕೆ ಶಾಸಕ ಅನಿಲ್ ಭೇಟಿ ನೀಡಿ ಮಾತನಾಡಿದರು.

ಸರಗೂರು, ಫೆ.9– ತಾಲೂಕಿನ ದೇವಲಾಪುರದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಪುತ್ಥಳಿ ಅನಾವರಣಕ್ಕೆ ದಿನಾಂಕ ನಿಗದಿ ಮಾಡಲಾಗುವುದು ಎಂದು ಶಾಸಕ ಅನಿಲ್ ತಿಳಿಸಿದರು.

ಗ್ರಾಮಕ್ಕೆ ಭೇಟಿ ನೀಡಿ ಗ್ರಾಮಸ್ಥರೊಂದಿಗೆ ಮಾತನಾಡಿದ ಅವರು, ಅಂಬೇಡ್ಕರ್ ಪುತ್ಥಳಿ ನಿರ್ಮಾಣ ಕಾರ್ಯ ಮುಗಿಯುವ ಹಂತ ತಲುಪಿದೆ. ಹೀಗಾಗಿ ಅಂಬೇಡ್ಕರ್ ಪುತ್ಥಳಿ ಅನಾವರಣ ಕಾರ್ಯಕ್ರಮಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಸಂಸದ ಸುನೀಲ್ ಬೋಸ್ ಅವರನ್ನು ಭೇಟಿ ಮಾಡಿ ದಿನಾಂಕ ನಿಗದಿ ಮಾಡಲಾಗುವುದು ಎಂದು ತಿಳಿಸಿದರು.

ಈ ವೇಳೆ ಎಪಿಎಂಸಿ ಮಾಜಿ ಅಧ್ಯಕ್ಷ ಸಿದ್ದರಾಜು, ಜಿಪಂ ಮಾಜಿ ಸದಸ್ಯ ಪಿ.ರವಿ, ಮೈಮುಲ್ ನಿರ್ದೇಶಕರಾದ ಕೆ.ಈರೇಗೌಡ, ಡಾ.ಮರಿದೇವಯ್ಯ, ಯಜಮಾನರಾದ ಶಿವಣ್ಣ, ಪುಟ್ಟರಾಜು, ಸಿಂಗರಾಜು, ಗ್ರಾಪಂ ಸದಸ್ಯ ಶಿವಶಂಕರ್, ಮಾಜಿ ಉಪಾಧ್ಯಕ್ಷ ದೊಡ್ಡಾಜಿ, ಮಾಜಿ ಸದಸ್ಯ ಡಿ.ಎನ್.ಪ್ರಭಾಕರ್, ಚಿನ್ನಣ್ಣ, ಮುಖಂಡರಾದ ಡಿ.ಜಿ.ಸೋಮಣ್ಣ, ರಮೇಶ್ ಕುಮಾರ್, ನಂಜಪ್ಪ, ಮಹೇಶ್, ಗಿರಿಯಯ್ಯ, ಶಿವಣ್ಣ, ಶಿವ, ಡಿ.ಪಿ.ಪ್ರಕಾಶ್, ನಾರಾಯಣ, ಮಹದೇವಯ್ಯ, ಡಿ.ಎಸ್.ಎಸ್.ಮಹೇಶ್, ಚಲುವರಾಜು, ಶಿವಣ್ಣ, ಸೋಮಣ್ಣ ಸೇರಿದಂತೆ ಇನ್ನಿತರರಿದ್ದರು.

ಹಾಡ್ಯ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಚುನಾವಣೆ

12 ಸ್ಥಾನಗಳಲ್ಲೂ ಕಾಂಗ್ರೆಸ್ ಬೆಂಬಲಿತರ ಭರ್ಜರಿ ಗೆಲುವು



ಕಾಂಗ್ರೆಸ್ ಬೆಂಬಲಿತರು ಗೆಲುವು ಸಾಧಿಸಿದ ಹಿನ್ನೆಲೆಯಲ್ಲಿ ವಿಜಯೋತ್ಸವ ಆಚರಿಸಲಾಯಿತು.

ಚುಂಚನಕಟ್ಟೆ, ಫೆ.9– ಸಾಲಿಗ್ರಾಮ ತಾಲೂಕಿನ ಹಾಡ್ಯ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಆಡಳಿತ ಮಂಡಳಿ ನಿರ್ದೇಶಕ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಎಲ್ಲಾ 12 ಸ್ಥಾನಗಳಲ್ಲಿ ಕಾಂಗ್ರೆಸ್ ಬೆಂಬಲಿತರು ಗೆಲುವು ಸಾಧಿಸಿದ್ದು, ಆ ಮೂಲಕ ಹಾಡ್ಯ ಪಿಎಸಿಎಸ್ ಅನ್ನು ಕಾಂಗ್ರೆಸ್ ತನ್ನ ತೆಕ್ಕೆಗೆ ತೆಗೆದುಕೊಂಡಿದೆ.

ಸಾಲಗಾರರ ಕ್ಷೇತ್ರದ 11 ನಿರ್ದೇಶಕ ಸ್ಥಾನಗಳು ಮತ್ತು ಸಾಲಗಾರರ 1 ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ಸಿಗರು ಅತ್ಯಧಿಕ ಬಹುಮತದೊಂದಿಗೆ ಜಯಭೇರಿ ಬಾರಿಸಿದರು. ಸಾಲಗಾರರ ಕ್ಷೇತ್ರದಿಂದ ಸ್ಪರ್ಧಿಸಿದ್ದ ಹೆಚ್.ಡಿ.ವೀರಭದ್ರಪ್ಪ, ಹೆಚ್.ಸಿ.ಮಹದೇವಪ್ಪ, ಶಂಕರ್, ಕೆಂಪೇಗೌಡ, ಎಂ.ಈರಯ್ಯ, ವೃಷಬೇಂದ್ರಪ್ಪ, ಕೃಷ್ಣ, ಎ.ಜೆ.ಹರೀಶ್, ಕೆ.ಟಿ.ರಾಮಕೃಷ್ಣ, ಎಸ್.ಕವಿತಾ, ಕಾತ್ಯಾಯಿನಿ ಮತ್ತು ಸಾಲಗಾರರಲ್ಲದ ಕ್ಷೇತ್ರದಿಂದ ಕಣದಲ್ಲಿದ್ದ ಚಂದ್ರಶೇಖರ್ ಜಯ ಗಳಿಸಿದರು. ಫಲಿತಾಂಶ ಪ್ರಕಟವಾಗುತ್ತಿದ್ದಂತೆ ಕಾಂಗ್ರೆಸ್ ಮುಖಂಡರು ಮತ್ತು ಕಾರ್ಯಕರ್ತರು ಶಾಸಕ ಡಿ.ರವಿಶಂಕರ್ ಮತ್ತು ಕೆಪಿಸಿಸಿ ಕಾರ್ಯಕಾರಿಣಿ ಸದಸ್ಯ ದೊಡ್ಡಸ್ವಾಮೇಗೌಡ ಹಾಗೂ ಪಕ್ಷದ ಪರ ಘೋಷಣೆ ಮೊಳಗಿಸಿದರು.

ತಾಪಂ ಮಾಜಿ ಅಧ್ಯಕ್ಷ ಮಹದೇವಸ್ವಾಮಿ ಮಾತನಾಡಿ, ಇಲ್ಲಿನ ಪಿಎಸಿಎಸ್‌ನ ಚುನಾವಣೆಯಲ್ಲಿ 12 ಸ್ಥಾನಗಳಲ್ಲೂ ಕಾಂಗ್ರೆಸ್ ಬೆಂಬಲಿತರು ಜಯ ಗಳಿಸಿದ್ದಾರೆ. ಇದು ಶಾಸಕ ಡಿ.ರವಿಶಂಕರ್ ಮತ್ತು ಕೆಪಿಸಿಸಿ ಕಾರ್ಯಕಾರಿಣಿ ಸದಸ್ಯ ದೊಡ್ಡಸ್ವಾಮೇಗೌಡರ ನಾಯಕತ್ವಕ್ಕೆ ಸಂದ ಜಯ ಎಂದರು.

ಕಳೆದ 5 ವರ್ಷದಲ್ಲಿ ಪಕ್ಷದ ಬೆಂಬಲಿತ ನಿರ್ದೇಶಕರು ಮಾಡಿದ ಅಭಿವೃದ್ಧಿ ಕೆಲಸಗಳನ್ನು ಮೆಚ್ಚಿ ಮತದಾರರು ಮತ್ತೆ ಬೆಂಬಲ ನೀಡಿದ್ದು, ಇದಕ್ಕಾಗಿ ಪಕ್ಷದ ಪರವಾಗಿ ರೈತ ಸದಸ್ಯರನ್ನು ಅಭಿನಂದಿಸುತ್ತೇನೆ ಎಂದರು.

ಮುಂದಿನ ದಿನಗಳಲ್ಲಿ ಶಾಸಕ ಡಿ.ರವಿಶಂಕರ್ ಅವರ ಮಾರ್ಗದರ್ಶನದಲ್ಲಿ ಆಡಳಿತ ಮಂಡಳಿ ಕೆಲಸ ನಿರ್ವಹಿಸಿ ಸರ್ಕಾರದಿಂದ ದೊರೆಯುವ ಎಲ್ಲಾ ಸವಲತ್ತುಗಳನ್ನು ರೈತರ ಮನೆ ಬಾಗಿಲಿಗೆ ತಲುಪಿಸಲಿದ್ದು, ಈ ವಿಚಾರದಲ್ಲಿ ನಾವು ಪ್ರಾಮಾಣಿಕವಾಗಿ ಕೆಲಸ ಮಾಡುತ್ತೇವೆ ಎಂದು ಭರವಸೆ ನೀಡಿದರು. ನೂತನ ಆಡಳಿತ ಮಂಡಳಿಯ ಎಲ್ಲಾ ನಿರ್ದೇಶಕರು ಮತ್ತು ಕಾಂಗ್ರೆಸ್ ಪಕ್ಷದ ಮುಖಂಡರು ಶಾಸಕರನ್ನು ಭೇಟಿಯಾಗಿ ಅಭಿನಂದಿಸಿ ಅವರ ಸಹಕಾರ ಕೋರುವುದಾಗಿ ಪ್ರಕಟಿಸಿದರು.

ಪಿಎಲ್‌ಡಿ ಬ್ಯಾಂಕ್ ಮಾಜಿ ಅಧ್ಯಕ್ಷ ಎನ್.ಸಿ.ಪ್ರಸಾದ್, ಸಂಘದ ಮಾಜಿ ಅಧ್ಯಕ್ಷ ಟಿ.ಸಿ.ವಿಶ್ವನಾಥ್, ಮಾಯಿಗೌಡನಹಳ್ಳಿ ಗ್ರಾಪಂ ಅಧ್ಯಕ್ಷ ಕರಿಯಪ್ಪ, ಜಗದೀಶ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಉದಯಶಂಕರ್, ಮಾಜಿ ಗ್ರಾಪಂ ಅಧ್ಯಕ್ಷ ಬೀರೇಗೌಡ, ಮಹೇಶ್, ಮಾಜಿ ಸದಸ್ಯರಾದ ಆರ್ಶಿ ಮಲ್ಲಿಕಾರ್ಜುನ, ರಘು, ಹೆಚ್.ಜೆ.ರಮೇಶ್, ಮುಖಂಡರಾದ ಷಣ್ಮುಖ, ಕಿರಣ್, ಜಲೇಂದ್ರ, ರಾಕೇಶ್, ಮಹದೇವ್, ಮುತ್ತು, ರಾಜಶೇಖರಯ್ಯ, ಚೌಡನಾಯಕ ಮತ್ತಿತರರು ನೂತನ ನಿರ್ದೇಶಕರನ್ನು ಅಭಿನಂದಿಸಿದರು.

ದೆಹಲಿ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಗೆಲುವು ಹಿನ್ನೆಲೆ

ತಿ.ನರಸೀಪುರದಲ್ಲಿ ಕಾರ್ಯಕರ್ತರ ವಿಜಯೋತ್ಸವ



ದೆಹಲಿಯಲ್ಲಿ ಬಿಜೆಪಿ ಗೆಲುವು ಹಿನ್ನೆಲೆ ಕಾರ್ಯಕರ್ತರು, ಮುಖಂಡರು ವಿಜಯೋತ್ಸವ ಆಚರಿಸಿದರು.

ತಿ.ನರಸೀಪುರ, ಫೆ.9– ದೆಹಲಿ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಗೆಲುವು ಸಾಧಿಸಿದ ಹಿನ್ನೆಲೆಯಲ್ಲಿ ಪಟ್ಟಣದಲ್ಲಿ ಬಿಜೆಪಿ ಕಾರ್ಯಕರ್ತರು ಹಾಗೂ ಮುಖಂಡರು ಪಟಾಕಿ ಸಿಡಿಸಿ ವಿಜಯೋತ್ಸವ ಆಚರಿಸಿದರು.

ದೆಹಲಿ ವಿಧಾನಸಭಾ ಚುನಾವಣೆ ಫಲಿತಾಂಶ ಪ್ರಕಟಗೊಳ್ಳುತ್ತಿದ್ದಂತೆ ಪಟ್ಟಣದ ಖಾಸಗಿ ಬಸ್ ನಿಲ್ದಾಣದ ವೃತ್ತದಲ್ಲಿ ಪಕ್ಷದ ಬಾವುಟ ಹಿಡಿದು ಘೋಷಣೆ ಕೂಗುತ್ತಾ ಜಮಾವಣೆಗೊಂಡ ಕಾರ್ಯಕರ್ತರು ಹಾಗೂ ಮುಖಂಡರು ಪಟಾಕಿ ಸಿಡಿಸಿ, ಸಿಹಿ ಹಂಚಿ ಸಂಭ್ರಮಿಸಿದರು. ಬಿಜೆಪಿ ಮುಖಂಡ ಡಾ.ರೇವಣ್ಣ ಮಾತನಾಡಿ, ಪ್ರಧಾನಿ ಮೋದಿ ಅವರ ನಾಯಕತ್ವ ಹಾಗೂ ಆಡಳಿತ ಮೆಚ್ಚಿರುವ ದೆಹಲಿ ಜನತೆ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿಗೆ ಬಹುಮತ ಕೊಟ್ಟು, ವಿಪಕ್ಷಗಳಾದ ಆಮ್ ಆದ್ಮಿ ಹಾಗೂ ಕಾಂಗ್ರೆಸ್ ಪಕ್ಷಗಳನ್ನು ತಿರಸ್ಕರಿಸಿದ್ದಾರೆ. ಮುಂದಿನ ಚುನಾವಣೆಗಳಲ್ಲಿ ಬಿಜೆಪಿ ಅಭ್ಯರ್ಥಿಗಳು ಗೆಲ್ಲಲು ದೆಹಲಿ ಫಲಿತಾಂಶ ಹುಮ್ಮಸ್ಸು ನೀಡಿದೆ ಎಂದರು.

ಕ್ಷೇತ್ರಾಧ್ಯಕ್ಷ ಶಿವಕುಮಾರ್ ಮಾತನಾಡಿ, 27 ವರ್ಷಗಳ ಸುದೀರ್ಘ ಅವಧಿಯ ಬಳಿಕ ದೆಹಲಿಯಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದಿದೆ. ಇದಕ್ಕೆ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ, ಪ್ರಧಾನಿ ಮೋದಿ, ಗೃಹ ಸಚಿವ ಅಮಿತ್ ಶಾ ಕಾರಣ. ಬಿಜೆಪಿ ಈ ಬಾರಿ ಅತ್ಯಂತ ವ್ಯವಸ್ಥಿತವಾಗಿ ಪ್ರಚಾರ ಮಾಡಿತು. ಹಾಗಾಗಿ ದೆಹಲಿ ಜನರು ಬಿಜೆಪಿಗೆ ಜನಾದೇಶ ನೀಡಿದ್ದಾರೆ. ದೆಹಲಿ ಚುನಾವಣೆಯ ತಂತ್ರಗಾರಿಕೆಯನ್ನೇ ಮುಂಬರುವ ಎಲ್ಲಾ ರಾಜ್ಯಗಳ ಚುನಾವಣೆಗೂ ಮಾಡಲಾಗುವುದು. ಅರವಿಂದ್ ಕೇಜ್ರಿವಾಲ್ ಜೈಲಿಗೆ ಹೋದರೂ ರಾಜೀನಾಮೆ ನೀಡಲಿಲ್ಲ. ಜೈಲಿನಿಂದಲೇ ಆಡಳಿತ ನಡೆಸುತ್ತೇನೆಂದು ಪ್ರಜಾಪ್ರಭುತ್ವ ವ್ಯವಸ್ಥೆಗೆ ವಿರುದ್ಧವಾಗಿ ನಡೆದುಕೊಂಡರು. ಆಪ್ ಸರ್ಕಾರದ ಹಲವು ಸಚಿವರು ಹಗರಣದಲ್ಲಿ ಭಾಗಿಯಾಗಿ ಜೈಲುವಾಸ ಅನುಭವಿಸಿದರು. ಆಪ್ ಸರ್ಕಾರದ ವ್ಯಾಪಕ ಭ್ರಷ್ಟಾಚಾರದಿಂದ ಬೇಸತ್ತ ದೆಹಲಿ ಜನರು ಬಿಜೆಪಿಗೆ ಅಧಿಕಾರ ನೀಡಿದ್ದಾರೆ ಎಂದರು.

ಹಿರಿಯ ಮುಖಂಡ ಕರೋಹಟ್ಟಿ ಮಹದೇವಯ್ಯ, ಮುಖಂಡ ತೋಟದಪ್ಪ ಬಸವರಾಜು, ಹಿಂದುಳಿದ ವರ್ಗಗಳ ಮೋರ್ಚಾ ಮಾಜಿ ಜಿಲ್ಲಾಧ್ಯಕ್ಷ ವೆಂಕಟರಮಣಶೆಟ್ಟಿ, ಕಾರ್ಯದರ್ಶಿ ಡಾ.ಟಿ.ಎಸ್.ಮಲ್ಲಿಕಾರ್ಜುನಸ್ವಾಮಿ, ತಾಪಂ ಮಾಜಿ ಸದಸ್ಯ ಬಸವರಾಜು, ಪುರಸಭೆ ಸದಸ್ಯ ಕೆ.ಕಿರಣ್, ಚೌಹಳ್ಳಿ ಸಿದ್ದರಾಜು, ಗ್ರಾಪಂ ಸದಸ್ಯ ಬಿ.ಎಮ್.ಪ್ರಕಾಶ್, ಬೆನಕನಹಳ್ಳಿ ವಿಜಯ ಕುಮಾರ್, ಸೋಮಶೇಖರಪ್ಪ, ಕೆ.ನಂಜುಂಡಸ್ವಾಮಿ, ಮುಖಂಡರಾದ ಮೂಗೂರು ಸಿದ್ದರಾಜು, ಪೂಜಿತ್ ಮೆಡಿಕಲ್ಸ್ ಕುಮಾರ್, ಕಾರ್ ಮಲ್ಲಪ್ಪ, ರಾಜಶೇಖರ್ ಇತರರಿದ್ದರು.

ಮೈಸೂರು ಮಿತ್ರ ಸೋಮವಾರ 10 ಫೆಬ್ರವರಿ 2025

ಬೇಸಿಗೆ ಆರಂಭ: ಮೈಸೂರು ಜಿಲ್ಲೆಯಲ್ಲಿ ಅಗ್ನಿಶಾಮಕ ವಾಹನಗಳ ಕೊರತೆ

ಜಿಲ್ಲೆಯಲ್ಲಿರುವ 10 ಠಾಣೆಗಳಲ್ಲಿ ತಲಾ ಒಂದೊಂದೇ ವಾಹನ ವ್ಯವಸ್ಥೆ



ಮೈಸೂರು,ಫೆ.9(ಆರ್‌ಕೆ)– ಚಳಿಗಾಲ ಕಳೆದು ಇದೀಗ ಬೇಸಿಗೆ ಕಾಲ ಆರಂಭವಾಗಿದ್ದು, ಈ ಬಾರಿ ಬಿಸಿಲಿನ ಝಳ ಅತಿರೇಕಕ್ಕೆ ಹೋಗುವ ಸಾಧ್ಯತೆ ಇದೆ.

ಸುಡು ಬಿಸಿಲಲ್ಲಿ ಚಾಮುಂಡಿಬೆಟ್ಟ, ಇತರೆ ಸಾಮಾಜಿಕ ಅರಣ್ಯ ಪ್ರದೇಶ, ಒಣಗಿದ ಹುಲ್ಲುಗಾವಲು ಹಾಗೂ ಇತರ ಬಯಲು ಪ್ರದೇಶಗಳಲ್ಲಿ ಅಧಿಕ ತಾಪಮಾನದಿಂದ ಅಗ್ನಿ ಅವಘಡಗಳು ಸಂಭವಿಸುವ ಸಾಧ್ಯತೆ ಹೆಚ್ಚಿದೆ. ಗುಜರಿ, ಗೋದಾಮು, ಕಾರ್ಖಾನೆ, ಪ್ಲಾಸ್ಟಿಕ್ ತ್ಯಾಜ್ಯದ ರಾಶಿಗಳಿಗೆ ಬೆಂಕಿ ತಗುಲುವಂತಹ ಸಾಧ್ಯತೆಗಳಿವೆ.

ಬೆಂಕಿ ತುಲಿದಾಗ ತಕ್ಷಣ ಸ್ಥಳಕ್ಕೆ ಧಾವಿಸಿ ಅತ್ಯಾಧುನಿಕ ಸಲಕರಣೆಗಳೊಂದಿಗೆ ಕಾರ್ಯಾಚರಣೆ ನಡೆಸಲು ಸಿದ್ಧರಾಗಿರುವ ಅಗ್ನಿಶಾಮಕ ಅಧಿಕಾರಿಗಳು ಹಾಗೂ ಸಿಬ್ಬಂದಿಗೆ ಬೆಂಕಿ ನಂದಿಸುವ ವಾಹನಗಳ ಕೊರತೆ ಉಂಟಾಗಿದೆ. ಮೈಸೂರು ನಗರದ ಸರಸ್ವತಿಪುರಂ, ಬನ್ನಿಮಂಟಪ, ಹೆಬ್ಬಾಳು ಸೇರಿದಂತೆ ಜಿಲ್ಲೆಯಾದ್ಯಂತ 10 ಠಾಣೆಗಳಲ್ಲಿ ತಲಾ ಒಂದು ಅಗ್ನಿಶಾಮಕ ವಾಹನವಿದೆ.

15 ವರ್ಷ ಪೂರ್ಣಗೊಂಡಿರುವ ವಾಹನಗಳನ್ನು ಬಳಸಬಾರದೆಂದು ಸುಪ್ರೀಂಕೋರ್ಟ್ ಆದೇಶವಿರುವ ಕಾರಣ ಆರ್‌ಟಿಓ ಕಚೇರಿಯಲ್ಲಿ ಆ ವಾಹನಗಳಿಗೆ ಆರ್‌ಸಿ ಕ್ಯಾನ್ಸಲ್ ಮಾಡುತ್ತಿದ್ದು, ಎಫ್‌ಸಿ ರಿನೀವಲ್ ಮಾಡುತ್ತಿಲ್ಲವಾದ್ದರಿಂದ ಅವುಗಳನ್ನು ಹೊರಗೆ ತೆಗೆಯಲು ಸಾಧ್ಯವಿಲ್ಲ.

ಫೆಬ್ರವರಿ 10ರಿಂದ 12ರವರೆಗೆ ತಿ.ನರಸೀಪುರದ ತ್ರಿವೇಣಿ ಸಂಗಮ ತಿರುಮಕೂಡಲುವಿನಲ್ಲಿ 13ನೇ ಕುಂಭಮೇಳ 'ಮಹೋದಯ ಪುಣ್ಯಕಾಲದ ಮಹಾಮಾಘ ಸ್ನಾನ' ಧಾರ್ಮಿಕ ಕಾರ್ಯಕ್ರಮ ನಡೆಯಲಿದ್ದು, ಸಾವಿರಾರು ಮಂದಿ ಭಾಗವಹಿಸಲಿದ್ದಾರೆ.

ಫೆಬ್ರವರಿ 10ರಿಂದ 14ರವರೆಗೆ ಬೆಂಗಳೂರಲ್ಲಿ ಬೃಹತ್ ಏರ್‌ಶೋ ನಡೆಯಲಿದೆ. ಫೆ.16ರಂದು ಚಾಮರಾಜನಗರದಲ್ಲಿ ಬೃಹತ್ ಸರ್ಕಾರಿ ಕಾರ್ಯಕ್ರಮ, ಫೆ.17ರಂದು ಜಿಲ್ಲೆಯ ಮಲೆಮಹದೇಶ್ವರ ಬೆಟ್ಟದಲ್ಲಿ ಸಚಿವ ಸಂಪುಟ ಸಭೆ ನಿಗದಿಯಾಗಿದೆ. ಈ ಎಲ್ಲಾ ಕಾರ್ಯಕ್ರಮಗಳಿಗೂ ಮೈಸೂರಿಂದ ಅಗ್ನಿಶಾಮಕ ವಾಹನಗಳು ಹಾಗೂ ಸಿಬ್ಬಂದಿಗಳನ್ನು ನಿಯೋಜಿಸಲಾಗಿದೆ. ಅಲ್ಲದೆ, ಬೇಸಿಗೆ ಆರಂಭವಾಗಿರುವುದರಿಂದ ಅರಣ್ಯ ಇಲಾಖೆಯವರು ತಮಗೆ 2 ವಾಹನಗಳನ್ನು ಮೀಸಲಿರಿಸಬೇಕು. ಕಾಡ್ಗಿಚ್ಚು ಸಂಭವಿಸಿದರೆ ಹೆಚ್ಚು ವಾಹನಗಳು ಬೇಕಾಗುತ್ತವೆ ಎಂದು ಜಿಲ್ಲಾ ಅಗ್ನಿಶಾಮಕ ಅಧಿಕಾರಿಗಳಿಗೆ ಪತ್ರ ಬರೆದಿದ್ದಾರೆ.

ತುರ್ತು ಸಂದರ್ಭ ಮತ್ತು ಏಕಕಾಲದಲ್ಲಿ ಹಲವು ಬೃಹತ್ ಸಭೆ–ಸಮಾರಂಭಗಳು ನಿಗದಿಯಾಗಿದ್ದಾಗ ಹೆಚ್ಚು ವಾಹನಗಳ ಅಗತ್ಯವಿದೆ. ಅದನ್ನು ಹೊರತುಪಡಿಸಿಯೂ ಮೈಸೂರು ನಗರ ಮತ್ತು ಜಿಲ್ಲೆಯಾದ್ಯಂತ ಈಗಿರುವ ವಾಹನಗಳ ಜೊತೆಗೆ ಎಲ್ಲಾ 10 ಠಾಣೆಗಳಿಗೂ ತಲಾ ಎರಡೆರಡು ಅಗ್ನಿಶಾಮಕ ವಾಹನಗಳ ಅಗತ್ಯವಿದೆ.

ಹೆಚ್ಚುವರಿಯಾಗಿ 20 ಅಗ್ನಿಶಾಮಕ ವಾಹನಗಳ ಅಗತ್ಯವಿದೆ ಎಂದು ವಲಯ ಅಗ್ನಿಶಾಮಕ ಅಧಿಕಾರಿ ಕಚೇರಿಯಿಂದ ಒಂದು ವರ್ಷದ ಹಿಂದೆಯೇ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಆದರೆ, ಈವರೆಗೆ ಯಾವುದೇ ಕ್ರಮ ವಹಿಸಿಲ್ಲದ ಕಾರಣ ಜಿಲ್ಲೆಯ ಅಗ್ನಿಶಾಮಕ ಠಾಣೆಗಳಲ್ಲಿ ವಾಹನಗಳ ಕೊರತೆ ಎದುರಾಗಿದೆ.

ಸರ್ಕಾರ ವಾಹನಗಳ ಖರೀದಿಗೆ ಅನುಮತಿ ಕೊಟ್ಟರೂ ಉದ್ದೇಶಕ್ಕೆ ತಕ್ಕಂತೆ ವಾಹನ ಅಣಿಗೊಳಿಸಿ ಕೊಡಲು ಕಂಪನಿಗಳಿಗೆ ಕನಿಷ್ಠ 1 ವರ್ಷ ಬೇಕಾಗಲಿದೆ. ಹೀಗಾಗಿ ಈ ಬೇಸಿಗೆಯಲ್ಲಿ ಬೆಂಕಿ ಅವಘಡಗಳು ಸಂಭವಿಸಿದರೆ ಪರಿಸ್ಥಿತಿ ನಿಭಾಯಿಸುವುದು ಹೇಗೆ ಎಂಬ ಚಿಂತೆ ಕಾಡುತ್ತಿದೆ. ಎಲ್ಲಾ ಠಾಣೆಗಳಿಂದ 537 ಸಿಬ್ಬಂದಿ ಕರ್ತವ್ಯ ನಿರ್ವಹಿಸುತ್ತಿರುವುದರಿಂದ ಅಗ್ನಿಶಾಮಕ ಅಧಿಕಾರಿಗಳು ಹಾಗೂ ಸಿಬ್ಬಂದಿ ಕೊರತೆ ಮಾತ್ರ ಎದುರಾಗಿಲ್ಲ.

ಸೀವೇಜ್ ಫಾರಂನಲ್ಲಿ ಬೆಂಕಿ: ಅಪಾರ ಪ್ರಮಾಣದ ತ್ಯಾಜ್ಯ ನಾಶ



ಮೈಸೂರಿನ ಸೀವೇಜ್ ಫಾರಂನಲ್ಲಿರುವ ಕಸದ ರಾಶಿಗೆ ಬೆಂಕಿ ಬಿದ್ದಿರುವುದು.

ಮೈಸೂರು,ಫೆ.9(ಎಂಟಿವೈ)–ಮೈಸೂರಿನ ವಿದ್ಯಾರಣ್ಯಪುರಂನಲ್ಲಿರುವ ಸೀವೇಜ್ ಫಾರಂನಲ್ಲಿ ಸಂಗ್ರಹವಾಗಿರುವ ಕಸದ ರಾಶಿಗೆ ಆಕಸ್ಮಿಕ ಬೆಂಕಿ ಬಿದ್ದು ಅಪಾರ ಪ್ರಮಾಣದ ತ್ಯಾಜ್ಯ ನಾಶವಾಗಿದೆಯಲ್ಲದೆ, ದಟ್ಟ ಹೊಗೆಯಿಂದಾಗಿ ಸ್ಥಳೀಯರು ಆತಂಕಕ್ಕೆ ಒಳಗಾಗಿದ್ದರು.

ಕಸ ಸಂಗ್ರಹ ತಾಣವಾಗಿರುವ ಸೀವೇಜ್ ಫಾರಂನಲ್ಲಿ ಹಲವು ದಶಕಗಳಿಂದ ಸಂಗ್ರಹವಾಗಿದ್ದ ಪ್ಲಾಸ್ಟಿಕ್‌ಯುಕ್ತ ಕಸದ ರಾಶಿಗೆ ಭಾನುವಾರ ಮಧ್ಯಾಹ್ನ ಬೆಂಕಿ ತಗುಲಿತ್ತು. ಇದರಿಂದ ಬೆಂಕಿಯ ತೀವ್ರತೆಗೆ ಕಸದ ರಾಶಿಯ ಐದಾರು ಸ್ಥಳಗಳಲ್ಲಿ ಬೆಂಕಿ ಆವರಿಸಿದ್ದರಿಂದ ಆತಂಕ ಮನೆ ಮಾಡಿತ್ತು. ಬೆಂಕಿ ನಂದಿಸಲು ಸೀವೇಜ್ ಫಾರಂನ ಸಿಬ್ಬಂದಿ ಎಷ್ಟೇ ಪ್ರಯತ್ನಿಸಿದರೂ, ಅದು ಸಾಧ್ಯವಾಗಲಿಲ್ಲ. ನಂತರ ಅಗ್ನಿಶಾಮಕ ಠಾಣೆಗೆ ಮಾಹಿತಿ ನೀಡಿದರು. ಸ್ಥಳಕ್ಕೆ ಆಗಮಿಸಿದ ಒಂದು ಅಗ್ನಿಶಾಮಕ ವಾಹನ ಕಾರ್ಯಾಚರಣೆ ನಡೆಸಿ ಬೆಂಕಿ ಹತೋಟಿಗೆ ತರುವಲ್ಲಿ ಯಶಸ್ವಿಯಾದರು. ಇದೇ ವೇಳೆ ಸೀವೇಜ್ ಫಾರಂನ ಸಿಬ್ಬಂದಿ ಬೆಂಕಿ ನಂದಿಸುವ ಕಾರ್ಯಾಚರಣೆಯಲ್ಲಿ ಪಾಲ್ಗೊಂಡು ಮತ್ತಷ್ಟು ಕಸದ ರಾಶಿಗೆ ಬೆಂಕಿ ವ್ಯಾಪಿಸದಂತೆ ಮುಂಜಾಗ್ರತಾ ಕ್ರಮ ಕೈಗೊಂಡರು.

ದಟ್ಟ ಹೊಗೆ: ಕಸದ ರಾಶಿಗೆ ಬೆಂಕಿ ಆವರಿಸಿದ್ದರಿಂದ ದಟ್ಟ ಹೊಗೆ ವ್ಯಾಪಿಸಿತ್ತು. ಅಲ್ಲದೇ ಪ್ಲಾಸ್ಟಿಕ್ ಸುಟ್ಟ ಪರಿಣಾಮ ಕೆಟ್ಟ ವಾಸನೆ ಬರುತ್ತಿರುವುದರಿಂದ ಸೀವೇಜ್ ಫಾರಂ ಸುತ್ತಮುತ್ತಲಿನ ಬಡಾವಣೆಗಳ ನಿವಾಸಿಗಳು ಪರಿತಪಿಸುವಂತಾಯಿತು. ಬೆಂಕಿ ನಂದಿಸಿದ್ದರೂ ಕಸದ ರಾಶಿಯಿಂದ ಹೊಗೆ ಬರುತ್ತಿದ್ದ ಹಿನ್ನೆಲೆಯಲ್ಲಿ ಮತ್ತೆ ಬೆಂಕಿ ಉಂಟಾಗುವ ಆತಂಕ ಅಲ್ಲಿನ ಸಿಬ್ಬಂದಿಗಳಲ್ಲಿ ಮನೆ ಮಾಡಿತು.

ಸಂಜೆಯಾದರೂ ಬೆಂಕಿಯ ಕಿಡಿ: ಸೀವೇಜ್ ಫಾರಂ ಕಸದ ರಾಶಿಗೆ ಬಿದ್ದಿದ್ದ ಬೆಂಕಿ ನಂದಿಸುವ ಕಾರ್ಯದಲ್ಲಿ ಅಗ್ನಿಶಾಮಕ ಠಾಣೆಯ ಸಿಬ್ಬಂದಿಗಳು ಸತತ ಪ್ರಯತ್ನಪಟ್ಟು ಬೆಂಕಿಯನ್ನು ಹತೋಟಿಗೆ ತರಲು ಯಶಸ್ವಿಯಾದರು. ಆದರೆ ಸಂಜೆಯಾದರೂ ಕೆಲವೆಡೆ ಬೆಂಕಿಯ ಕಿಡಿ ಕಂಡುಬರುತ್ತಿತ್ತು. ಅಲ್ಲದೇ ನಿರಂತರವಾಗಿ ಹೊಗೆಯಾಡುತ್ತಲೇ ಇತ್ತು. ಇದರಿಂದ ರಾತ್ರಿ ವೇಳೆ ಮತ್ತೆ ಬೆಂಕಿ ಕಾಣಿಸಿಕೊಳ್ಳಬಹುದೆಂಬ ಅನುಮಾನ ಸಿಬ್ಬಂದಿಗಳಲ್ಲಿ ಕಾಡುತ್ತಿತ್ತು.

ನೆಲ ಬೆಂಕಿ ತಡೆಗಟ್ಟಿ: ಬೇಸಿಗೆ ಆರಂಭವಾಗಿರುವ ಹಿನ್ನೆಲೆಯಲ್ಲಿ ಎಲ್ಲೆಡೆ ಅಗ್ನಿ ಅವಘಡದ ಆತಂಕ ಉಂಟಾಗಿದೆ. ವಾಹನ ಸವಾರರು ಧೂಮಪಾನ ಮಾಡಿ ಕಿಡಿಯನ್ನು ನಂದಿಸದೇ ಬಿಡಿ–ಸಿಗರೇಟ್ ತುಂಡನ್ನು ರಸ್ತೆ ಬದಿ ಬೀಸಾಡುವುದರಿಂದ ರಸ್ತೆ ಪಕ್ಕದ ಒಣ ಹುಲ್ಲುಗಳಿಗೆ ಬೆಂಕಿ ಬಿದ್ದು ಗಿಡ–ಮರಗಳು ಬೆಂಕಿಗೆ ಆಹುತಿಯಾಗುವ ಸಾಧ್ಯತೆ ಹೆಚ್ಚಾಗಿದೆ. ಈ ನೆಲ ಬೆಂಕಿಯಿಂದ ಅರಣ್ಯ ಪ್ರದೇಶಕ್ಕೆ ಕಾಡ್ಗಿಚ್ಚು ಹಬ್ಬುವ ಸಾಧ್ಯತೆ ಇದ್ದು, ಜನರು ರಸ್ತೆ ಪಕ್ಕ ಬೀಡಿ–ಸಿಗರೇಟ್ ಅನ್ನು ಕಿಡಿ ಆರಿಸದೇ ಎಸೆಯಬಾರದೆಂದು ಅಗ್ನಿಶಾಮಕ ಅಧಿಕಾರಿಗಳು ಮನವಿ ಮಾಡಿದ್ದಾರೆ.

ಪ್ರಯಾಗ್‌ರಾಜ್‌ನ ತ್ರಿವೇಣಿ ಸಂಗಮದಲ್ಲಿ ಡಿ.ಕೆ.ಶಿವಕುಮಾರ್ ದಂಪತಿ ಪುಣ್ಯಸ್ನಾನ



ಪ್ರಯಾಗ್‌ರಾಜ್‌ನಲ್ಲಿ ಭಾನುವಾರ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಪತ್ನಿ ಉಷಾ ಅವರೊಂದಿಗೆ ತ್ರಿವೇಣಿ ಸಂಗಮದಲ್ಲಿ ಪುಣ್ಯ ಸ್ನಾನ ಮಾಡಿದರು.

ಪ್ರಯಾಗ್‌ರಾಜ್: 144 ವರ್ಷಗಳಿಗೊಮ್ಮೆ ಉತ್ತರಪ್ರದೇಶದ ಪ್ರಯಾಗ್‌ರಾಜ್‌ನಲ್ಲಿ ನಡೆಯುತ್ತಿರುವ ಮಹಾ ಕುಂಭಮೇಳದಲ್ಲಿ ಕರ್ನಾಟಕದ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಪತ್ನಿ ಉಷಾ ಅವರೊಂದಿಗೆ ಸಂಗಮದಲ್ಲಿ ಪವಿತ್ರ ಸ್ನಾನ ಮಾಡಿದ್ದಾರೆ.

ಈಗಾಗಲೇ ಡಿಕೆಶಿ ಪುತ್ರಿ ಐಶ್ವರ್ಯಾ ಅವರು ಪ್ರಯಾಗ್‌ರಾಜ್‌ಗೆ ತೆರಳಿ ಪವಿತ್ರ ಸ್ನಾನ ಮಾಡಿದ್ದರು. ಈಗ ಡಿಕೆಶಿ ದಂಪತಿ ತ್ರಿವೇಣಿ ಸಂಗಮದಲ್ಲಿ ಮಿಂದೆದ್ದಿದ್ದಾರೆ.

ಡಿ.ಕೆ.ಶಿವಕುಮಾರ್ ಅವರಿಗೆ ನೊಣವಿನಕೆರೆ ಕಾಡಸಿದ್ದೇಶ್ವರ ಮಠದ ಕರಿವೃಷಭ ರಾಜದೇಶಿ ಕೇಂದ್ರ ಶಿವಯೋಗೀಶ್ವರ ಶಿವಾಚಾರ್ಯ ಸ್ವಾಮೀಜಿ ಅವರೂ ಕೂಡ ಸಾಥ್ ನೀಡಿದರು. ಅವರ ಜೊತೆಯಲ್ಲೇ ಡಿಕೆಶಿ ದಂಪತಿ ಕುಂಭಮೇಳಕ್ಕೆ ತೆರಳಿ ತ್ರಿವೇಣಿ ಸಂಗಮದಲ್ಲಿ ಮಿಂದೆದ್ದರು.

ವಿಶೇಷ ಪೂಜೆ: ಗಂಗಾ, ಯಮುನಾ ಮತ್ತು ಸರಸ್ವತಿ ಎಂಬ ಮೂರು ನದಿಗಳ ಸಂಗಮದಲ್ಲಿ ಕರಿವೃಷಭ ರಾಜದೇಶಿ ಕೇಂದ್ರ ಶಿವಯೋಗೀಶ್ವರ ಶಿವಾಚಾರ್ಯ ಸ್ವಾಮೀಜಿ ನೇತೃತ್ವದಲ್ಲಿ ಡಿಕೆ ಶಿವಕುಮಾರ್ ಹಾಗೂ ಪತ್ನಿ ಉಷಾ ಅವರು ಆರತಿ ಬೆಳಗಿ ವಿಶೇಷ ಪೂಜೆ ಸಲ್ಲಿಸಿದರು.

ಪುಣ್ಯಸ್ನಾನ ಮಾಡಿರುವ ಫೋಟೋಗಳನ್ನು ಡಿಕೆಶಿ ತಮ್ಮ ಸಾಮಾಜಿಕ ಜಾಲತಾಣಗಳ ಖಾತೆಗಳಲ್ಲಿ ಹಂಚಿಕೊಂಡಿದ್ದು, ಪ್ರಯಾಗ್‌ರಾಜ್‌ನಲ್ಲಿ ನಡೆಯುತ್ತಿರುವ ಮಹಾಕುಂಭಮೇಳದಲ್ಲಿ ಕುಟುಂಬ ಸಮೇತ ಪಾಲ್ಗೊಂಡು, ತ್ರಿವೇಣಿ ಸಂಗಮದಲ್ಲಿ ಪುಣ್ಯಸ್ನಾನ ಮಾಡಿದೆ. 144 ವರ್ಷಗಳಿಗೊಮ್ಮೆ ನಡೆಯುವ ಮಹಾ ಕುಂಭದಲ್ಲಿ ಪಾಲ್ಗೊಳ್ಳಲು ಅವಕಾಶ ಸಿಕ್ಕಿದ್ದು ನಿಜಕ್ಕೂ ಖುಷಿ ತಂದಿದೆ ಎಂದು ಬರೆದುಕೊಂಡಿದ್ದಾರೆ.

ಪವಿತ್ರ ಸ್ನಾನದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕುಂಭಮೇಳವನ್ನು ಇಷ್ಟೊಂದು ಪವಿತ್ರ ರೀತಿಯಲ್ಲಿ ನಡೆಸಿದ್ದಕ್ಕಾಗಿ ಎಲ್ಲಾ ಸಂಘಟಕರಿಗೆ ನಾನು ಧನ್ಯವಾದ ಹೇಳಲು ಬಯಸುತ್ತೇನೆ. ಇದು ಒಬ್ಬರ ಜೀವನದಲ್ಲಿ ಒಂದು ಐತಿಹಾಸಿಕ ಕ್ಷಣವಾಗಿದೆ. ಇಲ್ಲಿ ನೆರೆದಿರುವ ಲಕ್ಷಾಂತರ ಜನರು ವ್ಯವಸ್ಥೆಗಳನ್ನು ವೀಕ್ಷಿಸುತ್ತಿದ್ದಾರೆ. ಅಂತಹ ಕಾರ್ಯಕ್ರಮವನ್ನು ಆಯೋಜಿಸುವುದು ಸಣ್ಣ ಕೆಲಸವಲ್ಲ ಎಂದು ನನಗೆ ಅರ್ಥವಾಗಿದೆ. ಇದನ್ನು ಸಾಧ್ಯವಾಗಿಸಲು ಎಷ್ಟು ಶ್ರಮ ಬೇಕಾಗುತ್ತದೆ ಎಂದು ನನಗೆ ತಿಳಿದಿದೆ ಎಂದರು.

ಪವಿತ್ರಸ್ನಾನ ಟೀಕಿಸಿದ್ದ ಖರ್ಗೆ: ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಮಹಾ ಕುಂಭದಲ್ಲಿ ಪುಣ್ಯಸ್ನಾನ ಮಾಡಿದ್ದಕ್ಕೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಟೀಕೆ ಮಾಡಿದ್ದರು. ಇದು ಭಾರಿ ಪರ ವಿರೋಧ ಚರ್ಚೆಗೆ ಗ್ರಾಸವಾಗಿತ್ತು. ಇದರ ಬೆನ್ನಲ್ಲೇ ಇದೀಗ ಕರ್ನಾಟಕ ಕಾಂಗ್ರೆಸ್ ಅಧ್ಯಕ್ಷ, ಡಿಸಿಎಂ ಡಿಕೆ ಶಿವಕುಮಾರ್ ಅವರು ತ್ರಿವೇಣಿ ಸಂಗಮದಲ್ಲಿ ಪುಣ್ಯ ಸ್ನಾನ ಮಾಡಿ ಗಮನಸೆಳೆದಿದ್ದಾರೆ.

ಶಿಶಿರ ಕಾವ್ಯೋತ್ಸವದಲ್ಲಿ ಕವಿಗಳಿಂದ ಕವಿತೆಗಳ ವಾಚನ

ಕವಿಯಾದವನಿಗೆ ಭಾಷೆ ಮೇಲೆ ಹಿಡಿತವಿರಬೇಕು



ಮೈಸೂರಿನ ವಿಜಯನಗರ ಒಂದನೇ ಹಂತದಲ್ಲಿರುವ ಕನ್ನಡ ಸಾಹಿತ್ಯ ಪರಿಷತ್ತಿನ ಭವನದಲ್ಲಿ ಸ್ವಜನ್ಯ ಕಲಾ ವೇದಿಕೆ ಮತ್ತು ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಆಯೋಜಿಸಿದ್ದ ಶಿಶಿರ ಕಾವ್ಯೋತ್ಸವವನ್ನು ಡಾ.ಎಸ್.ಡಿ.ಶಶಿಕಲಾ ಉದ್ಘಾಟಿಸಿದರು.

ಮೈಸೂರು, ಫೆ.9(ಜಿಎ)–ಕವಿಯಾಗ ಬಯಸುವವರಿಗೆ ಭಾಷೆ ಮೇಲೆ ಹಿಡಿತವಿರಬೇಕು ಎಂದು ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಪ್ರಾಧ್ಯಾಪಕಿ ಹಾಗೂ ವಿಮರ್ಶಕರಾದ ಡಾ.ಎಸ್.ಡಿ.ಶಶಿಕಲಾ ಅಭಿಪ್ರಾಯಪಟ್ಟರು.

ಮೈಸೂರಿನ ವಿಜಯನಗರದಲ್ಲಿರುವ ಕನ್ನಡ ಸಾಹಿತ್ಯ ಪರಿಷತ್ತಿನ ಭವನದಲ್ಲಿ ಸ್ವಜನ್ಯ ಕಲಾ ವೇದಿಕೆ ಮತ್ತು ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಆಯೋಜಿಸಿದ್ದ ಶಿಶಿರ ಕಾವ್ಯೋತ್ಸವವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಕವಿ ಆಗಲು ಪ್ರಮುಖವಾಗಿ ಅಭ್ಯಾಸ, ಪ್ರತಿಭೆ, ಭಾಷೆ ಮುಖ್ಯ ಅಂಶವಾಗಿದ್ದು, ಇವುಗಳನ್ನು ಅಳವಡಿಸಿಕೊಳ್ಳಬೇಕು. ಜೊತೆಗೆ ನಾವು ಕಾವ್ಯ ರಚನೆ ಮಾಡಲು ಸಾಧ್ಯವೇ ಎಂಬುದರ ಬಗ್ಗೆ ಅರಿತುಕೊಳ್ಳಬೇಕು. ಪದಗಳ ಪುಂಜವೇ ಅಂತರಾಳದಲ್ಲಿ ಇರಿಸಿಕೊಂಡು ಕಾವ್ಯ ರಚನೆ ಮಾಡಿದರೆ, ಉತ್ತಮ ಕವಿತೆ ಹೊರಹೊಮ್ಮುತ್ತದೆ ಎಂದರು.

ಇತ್ತೀಚೆಗೆ ಕಾವ್ಯ ರಚನೆ ಮಾಡುತ್ತಿರುವವರು ಸಮಕಾಲೀನ ವಿಷಯಗಳನ್ನು ಇಟ್ಟುಕೊಂಡು ತಮ್ಮ ಪರ, ವಿರೋಧವನ್ನು ಹೊರ ಹಾಕುತ್ತಿದ್ದಾರೆ. ಆದರೆ, ಮುಖ್ಯವಾಗಿ ಕಾವ್ಯ ರಚನೆಯನ್ನೇ ಮರೆತು ಬಿಡುತ್ತಿದ್ದಾರೆ. ಅದಕ್ಕೆ ನವೋದಯದ ಕವಿಗಳಿಗಿಂತ ನವ್ಯದ ಕವಿಗಳು ಉತ್ತಮವಾಗಿ ಭಾಷೆಯನ್ನು ಬಳಸಿಕೊಂಡಿದ್ದಾರೆ ಎಂದು ತಿಳಿಸಿದರು.

ಕಾವ್ಯೋತ್ಸವದಲ್ಲಿ 25ಕ್ಕೂ ಹೆಚ್ಚು ಕವಿ, ಕವಿಯತ್ರಿಯರು ಕವನ ವಾಚನ ಮಾಡಿದರು. ಈ ವೇಳೆ ಹಿರಿಯ ಕವಿ ಡಾ.ಕೆ.ಪಿ.ಮಹಾದೇವಯ್ಯ, ಜಿಲ್ಲಾ ಸರ್ಕಾರಿ ನೌಕರರ ಸಂಘದ ನಿರ್ದೇಶಕ ಬಿ.ಎಸ್.ಸತೀಶ್, ಸಾಹಿತಿ ಡಿ.ಪಿ.ಚಿಕ್ಕಣ್ಣ (ದಾಮಚಿ), ಹಿರಿಯ ಪತ್ರಕರ್ತ ಎಸ್.ಶ್ರೀಧರ್, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿ ಲತಾ ಮೋಹನ್, ಸ್ಪಂದನ ಸಾಂಸ್ಕೃತಿಕ ಪರಿಷತ್ತಿನ ಸಂಸ್ಥಾಪಕ ಅಧ್ಯಕ್ಷ ಟಿ.ಸತೀಶ್ ಜವರೇಗೌಡ, ಸ್ವಜನ್ಯ ಕಲಾ ವೇದಿಕೆ ಅಧ್ಯಕ್ಷ ಎಸ್.ಶಿಶಿರಂಜನ್ ಇದ್ದರು.

ಆರ್‌ಓ ಘಟಕಗಳಿಗೆ ಬಿಐಎಸ್/ಐಎಸ್‌ಓ ಪ್ರಮಾಣ ಪತ್ರ ಕಡ್ಡಾಯ

ಮೈಸೂರು, ಫೆ.9(ಎಸ್‌ಪಿಎನ್)– ಮೈಸೂರು ನಗರಪಾಲಿಕೆ ವ್ಯಾಪ್ತಿಯ ಖಾಸಗಿ ಆರ್‌ಓ ಘಟಕಗಳ ನಿರ್ವಾಹಕರು ತಮ್ಮ ಘಟಕಗಳ ಜಲ ಶುದ್ಧೀಕರಣ, ಜಲಮೂಲ ಮಾದರಿ ಹಾಗೂ ಶುದ್ಧೀಕರಿಸಿದ ಮಾದರಿಗಳನ್ನು BIS Established water Testing Laboratory/Engineering College/Govt Research Laboratoryಗಳಲ್ಲಿ ಪರೀಕ್ಷಿಸಿಕೊಳ್ಳಬೇಕು. ಈ ಪರೀಕ್ಷಾ ವರದಿಯನ್ನು ತಮ್ಮ ಘಟಕಗಳಲ್ಲಿ ಸಾರ್ವಜನಿಕರಿಗೆ ಕಾಣುವಂತೆ ಪ್ರದರ್ಶಿಸಬೇಕು ಹಾಗೂ ಸದರಿ ಘಟಕಗಳಲ್ಲಿ ಉಪಯೋಗದಲ್ಲಿರುವ ಎಲ್ಲಾ ಉಪಕರಣಗಳು ಬಿಐಎಸ್/ಐಎಸ್‌ಓ ಪ್ರಮಾಣ ಪತ್ರ ಹೊಂದಿರಬೇಕು. ಆರ್‌ಓ ಘಟಕಗಳ ನಿಯಮಿತ ನಿರ್ವಹಣೆ ಕಡ್ಡಾಯವಾಗಿದ್ದು, ಸದರಿ ನಿರ್ದೇಶನಗಳನ್ನು ಕಡ್ಡಾಯವಾಗಿ ಪಾಲಿಸಲು ಸೂಚಿಸಿದೆ. ತಪ್ಪಿದ್ದಲ್ಲಿ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ನೀರು ಸರಬರಾಜು ಮತ್ತು ಒಳಚರಂಡಿ ವಿಭಾಗ (ಪಶ್ಚಿಮ)ದ ಕಾರ್ಯಪಾಲಕ ಅಭಿಯಂತರರು ಪ್ರಕಟಣೆ ಹೊರಡಿಸಿದ್ದಾರೆ.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	**(ದೂ: 2521923)**
ಡಾಕು ಮಹಾರಾಜ್(ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	**(ದೂ: 2422871)**
ತಂಡೇಲ್ (ತೆ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	**(ದೂ: 2497199)**
ದೇವ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	**(ಮೊ:9900820093)**
ವಿದಾಮುಯರ್ಚಿ (ತ)	4 ಪ್ರದರ್ಶನಗಳು
ಗಾಯಿತ್ರಿ	
ಮಾರ್ಕೋ (ತ)+ ಮಾರ್ಕೋ (ಕ)	1+4 ಪ್ರದರ್ಶನಗಳು
ರಾಜಕಮಲ್	
ವಿದಾಮುಯರ್ಚಿ (ತ)	4 ಪ್ರದರ್ಶನಗಳು
ಸಂಗಂ	
ರಾಯಲ್ (ಕ)	4 ಪ್ರದರ್ಶನಗಳು
ಲಿಡೋ	
ತಲ್ವಾರ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಡಾಕು ಮಹಾರಾಜ್ (ಹಿಂ)	4 ಪ್ರದರ್ಶನಗಳು
ಪ್ರಭಾ	
ರಾಜರಾಣಿ(ತ) + ಅಲ್ಲೇ ಡ್ರಾ ಅಲ್ಲೇ ಬಹುಮಾನ (ಕ)	2+2 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ವಿದ್ಗಾಮುಯರ್ಚಿ (ತ): ಬೆ.6.55ಕ್ಕೆ, ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.15ಕ್ಕೆ, ರಾ.10.24ಕ್ಕೆ.
ಸ್ಕ್ರೀನ್ 2	ನೋಡಿದವರು ಏನಂತಾರೆ (ಕ): ಮ.1.15ಕ್ಕೆ, ರುದ್ರ ಗರುಡ ಪುರಾಣ (ಕ): ಸಂ.4.10ಕ್ಕೆ, ರಾ.7.05ಕ್ಕೆ, ವಿದ್ಗಾಮುಯರ್ಚಿ (ತ): ರಾ.10ಕ್ಕೆ
ಸ್ಕ್ರೀನ್ 3	ಛೂ ಮಂತರ್ (ಕ): ಬೆ.10.45ಕ್ಕೆ, ರಾ.7.15ಕ್ಕೆ, ಕಾಡು ಮಲ್ಲೆ (ಕ): ಮ.1.40ಕ್ಕೆ, ಸ್ಕೈ ಫೋರ್ಸ್ (ಹಿಂ): ಸಂ.4.15ಕ್ಕೆ, ಪೊನ್ಮನ್ (ಮ): ರಾ.10.15.
ಸ್ಕ್ರೀನ್ 4	ಮ್ಯಾಕ್ಸ್ (ಕ): ಮ.1ಕ್ಕೆ, ದೇವ (ಹಿಂ): ಸಂ.4ಕ್ಕೆ, ರಾ.7.10ಕ್ಕೆ, ರಾ.10.20ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ರಾಯಲ್ (ಕ): ಬೆ.10.40ಕ್ಕೆ, ರುದ್ರ ಗರುಡ ಪುರಾಣ (ಕ): ಮ.1.30ಕ್ಕೆ, ಸಂ.6.45ಕ್ಕೆ, ಮ್ಯಾಕ್ಸ್ (ಕ): ಸಂ.4.15ಕ್ಕೆ, ಕುಜಂತೈಗಲ್ ಮುನ್ನೇತ್ರ ಕಳಗಂ (ತ): ರಾ.9.30ಕ್ಕೆ.
ಸ್ಕ್ರೀನ್ 2	ಫಾರೆಸ್ಟ್ (ಕ): ಮ.1.05ಕ್ಕೆ, ಮ.3.50ಕ್ಕೆ, ರಾಯಲ್ (ಕ): ಸಂ.6.35ಕ್ಕೆ, ಸ್ಕೈ ಫೋರ್ಸ್ (ಹಿಂ): ರಾ.9.30ಕ್ಕೆ.
ಸ್ಕ್ರೀನ್ 3	ಸ್ಕೈ ಫೋರ್ಸ್ (ಹಿಂ): ಬೆ.11ಕ್ಕೆ, ರಾ.7.05ಕ್ಕೆ, ರಾಯಲ್ (ಕ): ಮ.1.25ಕ್ಕೆ, ಡೊಮಿನಿಕ್ ಅಂಡ್ ದಿ ಲೇಡಿಸ್ ಪರ್ಸ್ (ಮ): ಸಂ.4.15ಕ್ಕೆ, ರಾ.9.30ಕ್ಕೆ
ಸ್ಕ್ರೀನ್ 4	ಫಾರೆಸ್ಟ್ (ಕ): ಬೆ.10.40ಕ್ಕೆ, ರಾ.9.20ಕ್ಕೆ, ಛೂ ಮಂತರ್ (ಕ): ಮ.1.30ಕ್ಕೆ, ಸಂ.6.40ಕ್ಕೆ, ಸ್ಕೈ ಫೋರ್ಸ್ (ಹಿಂ): ಸಂ.4.15ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ರಾಜ್ಯ ಯುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಆಯ್ಕೆ



ಮೈಸೂರು,ಫೆ.9(ಎಂಟಿವೈ)– ಕರ್ನಾಟಕ ಪ್ರದೇಶ ಯುವ ಕಾಂಗ್ರೆಸ್ ಸಮಿತಿಗೆ ಇತ್ತೀಚೆಗೆ ನಡೆದ ಚುನಾವಣೆಯಲ್ಲಿ ಮೈಸೂರಿನ ಎನ್.ಆರ್.ಮೊಹಲ್ಲಾದ ನಿವಾಸಿ ಎಸ್.ದೀಪಕ್‌ಕುಮಾರ್ 9795 ಮತ ಪಡೆದು ಪ್ರಧಾನ ಕಾರ್ಯದರ್ಶಿ ಸ್ಥಾನಕ್ಕೆ ಚುನಾಯಿತರಾಗಿದ್ದಾರೆ. ದೀಪಕ್‌ಕುಮಾರ್ ಈ ಹಿಂದೆ ನರಸಿಂಹರಾಜ ವಿಧಾನಸಭಾ ಕ್ಷೇತ್ರದ ಯುವ ಕಾಂಗ್ರೆಸ್ ಅಧ್ಯಕ್ಷ, ಮೈಸೂರು ಕೊಡಗು ಲೋಕಸಭಾ ಕ್ಷೇತ್ರ ಯುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿಯಾಗಿ ಹಾಗೂ ಎರಡು ಬಾರಿ ರಾಜ್ಯ ಯುವ ಕಾಂಗ್ರೆಸ್ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದ್ದಾರೆ.

ಹೂಟಗಳ್ಳಿ ಹೆಚ್.ಎಂ.ಶಿವಸ್ವಾಮಿ ನಿಧನ



ಮೈಸೂರು,ಫೆ.9–ಮೈಸೂರಿನ ಹೂಟಗಳ್ಳಿ ನಿವಾಸಿ ಹೆಚ್.ಎಂ.ಶಿವಸ್ವಾಮಿ(67) ಶನಿವಾರ ತಮ್ಮ ಸ್ವಗೃಹದಲ್ಲಿ ನಿಧನರಾದರು. ಮೃತರು ಕೇಂದ್ರೀಯ ರೇಷ್ಮೆ ಇಲಾಖೆ ನಿವೃತ್ತ ಸಿಬ್ಬಂದಿಯಾಗಿದ್ದು, ಪತ್ನಿ, ಇಬ್ಬರು ಮಕ್ಕಳು ಸೇರಿದಂತೆ ಅಪಾರ ಬಂಧು–ಬಳಗ, ಸ್ನೇಹಿತರನ್ನು ಅಗಲಿದ್ದಾರೆ. ಭಾನುವಾರ ಬೆಳಗ್ಗೆ 10.30ಕ್ಕೆ ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ದೇಶ - ವಿದೇಶ

ಡಜನ್‌ಗಟ್ಟಲೆ ಪ್ಯಾಲೇಸ್ಟಿನಿಯನ್ ಕೈದಿಗಳಿಗಾಗಿ ಮೂವರು ಇಸ್ರೇಲಿ ಒತ್ತೆಯಾಳುಗಳ ಬಿಡುಗಡೆ



ಗಾಜಾ: ಗಾಜಾಪಟ್ಟಿಯಲ್ಲಿ ಕದನ ವಿರಾಮ ಒಪ್ಪಂದದ ಭಾಗವಾಗಿ ಡಜನ್‌ಗಟ್ಟಲೆ ಪ್ಯಾಲೇಸ್ಟಿನಿಯನ್ ಕೈದಿಗಳಿಗಾಗಿ ಹಮಾಸ್ ಬಂಡುಕೋರರು ಶನಿವಾರ ಮತ್ತೆ ಮೂವರು ಒತ್ತೆಯಾಳುಗಳನ್ನು ಬಿಡುಗಡೆ ಮಾಡಿದ್ದಾರೆ. ಇವರೆಲ್ಲರೂ ಇಸ್ರೇಲಿ ನಾಗರಿಕರಾಗಿದ್ದಾರೆ. ಒತ್ತೆಯಾಳಾಗಿ ಇರಿಸಿಕೊಳ್ಳಲಾಗಿದ್ದ ಎಲಿ ಶರಾಬಿ (52), ಓಹದ್ ಬೆನ್ ಅಮಿ (56) ಮತ್ತು ಓರ್ ಲೆವಿ (34) ಅವರನ್ನು ಶಸ್ತ್ರಸಜ್ಜಿತ ಹಮಾಸ್ ಬಂಡುಕೋರರು ಬಿಳಿ ವ್ಯಾನ್‌ನಿಂದ ದೇರ್ ಅಲ್–ಬಾಲಾಹ್ ಪಟ್ಟಣದಲ್ಲಿ ವ್ಯವಸ್ಥೆ ಮಾಡಲಾಗಿದ್ದ ವೇದಿಕೆಗೆ ಕರೆದೊಯ್ಯುತ್ತಿದ್ದಂತೆ ಧೈರ್ಯಶಾಲಿ ಮತ್ತು ದೈಹಿಕವಾಗಿ ಬಳಲಿದಂತೆ ಕಂಡುಬಂದರು. ಕದನ ವಿರಾಮದ ಅವಧಿಯಲ್ಲಿ ಇಲ್ಲಿವರೆಗೂ ಬಿಡುಗಡೆಯಾಗಿರುವ ಇತರ 18 ಒತ್ತೆಯಾಳುಗಳ ಪೈಕಿ ಈ ಮೂವರು ದೈಹಿಕವಾಗಿ ತುಂಬಾ ಬಳಲಿದಂತೆ ಕಾಣಿಸಿಕೊಂಡರು. ಇವರೆಲ್ಲರನ್ನೂ ಅ.7, 2023ರಂದು ಇಸ್ರೇಲ್ ಮೇಲೆ ಹಮಾಸ್ ಬಂಡುಕೋರರ ದಾಳಿ ವೇಳೆ ಅಪಹರಿಸಲಾಗಿತ್ತು. ಅದು ಯುದ್ಧಕ್ಕೆ ಕಾರಣವಾಯಿತು. ಒತ್ತೆಯಾಳುಗಳನ್ನು ರೆಡ್‌ಕ್ರಾಸ್ ಅಧಿಕಾರಿಗಳಿಗೆ ಹಸ್ತಾಂತರಿಸುವ ಮುನ್ನಾ, ನೂರಾರು ಜನರ ಮುಂದೆ ಹಮಾಸ್ ಬಂಡುಕೋರರು ಮೈಕ್ರೋಫೋನ್ ಮೂಲಕ ಮಾತನಾಡಿದರು.

ಕುಂಭಮೇಳದಲ್ಲಿ ಮತ್ತೊಂದು ಅಗ್ನಿ ಅವಘಡ, ಕಲ್ಪವಾಸಿ ಟೆಂಟ್‌ನಲ್ಲಿ ಸಿಲಿಂಡರ್ ಸೋರಿಕೆ

ಪ್ರಯಾಗ್ ರಾಜ್: ಉತ್ತರ ಪ್ರದೇಶದ ಪ್ರಯಾಗ್‌ರಾಜ್‌ನಲ್ಲಿ ನಡೆಯುತ್ತಿರುವ ಮಹಾ ಕುಂಭಮೇಳದಲ್ಲಿ ಮತ್ತೊಂದು ಅಗ್ನಿ ಅವಘಡ ಸಂಭವಿಸಿದ್ದು, ಈ ಬಾರಿ ಸೆಕ್ಟರ್ 19ರಲ್ಲಿರುವ 'ಕಲ್ಪವಾಸಿ' ಟೆಂಟ್‌ನಲ್ಲಿ ಗ್ಯಾಸ್ ಸಿಲಿಂಡರ್ ಸೋರಿಕೆಯಾಗಿ ಬೆಂಕಿ ಕಾಣಿಸಿಕೊಂಡಿದೆ.

ಸ್ಥಳಕ್ಕಾಗಮಿಸಿದ ಅಗ್ನಿಶಾಮಕ ದಳದವರು 10 ನಿಮಿಷಗಳಲ್ಲಿ ಬೆಂಕಿಯನ್ನು ನಂದಿಸುವಲ್ಲಿ ಯಶಸ್ವಿಯಾದರು. ಇನ್ನು ಅವಘಡದಲ್ಲಿ ಯಾವುದೇ ಸಾವು–ನೋವುಗಳು ವರದಿಯಾಗಿಲ್ಲ. ಓಂ ಪ್ರಕಾಶ್ ಪಾಂಡೆ ಸೇವಾ ಸಂಸ್ಥಾನವು ಸ್ಥಾಪಿಸಿದ್ದ ಟೆಂಟ್‌ನಲ್ಲಿ ಬೆಂಕಿ ಕಾಣಿಸಿಕೊಂಡಿತ್ತು ಎಂದು ಮುಖ್ಯ ಅಗ್ನಿಶಾಮಕ ಅಧಿಕಾರಿ (ಕುಂಭ) ಪ್ರಮೋದ್ ಶರ್ಮಾ ತಿಳಿಸಿದ್ದಾರೆ. ಇದು ಪ್ರಯಾಗ್‌ರಾಜ್‌ನ ಕರ್ಮದ ನಿವಾಸಿ ರಾಜೇಂದ್ರ ಜೈಸ್ವಾಲ್ ಅವರಿಗೆ ಸೇರಿದೆ. ಕುಂಭಮೇಳದಲ್ಲಿ ಈವರೆಗೂ ಒಟ್ಟು 3 ಬೆಂಕಿ ಅವಘಡ ಸಂಭವಿಸಿದೆ. ಫೆ.7ರಂದು, ಮಹಾಕುಂಭನಗರದ ಇಸ್ಕಾನ್ ಶಿಬಿರದಲ್ಲಿ ಬೆಂಕಿ ಕಾಣಿಸಿಕೊಂಡು ಹತ್ತಿರದ ಒಂದು ಡಜನ್‌ಗೂ ಹೆಚ್ಚು ಶಿಬಿರಗಳಿಗೆ ಬೆಂಕಿ ಹರಡಿತು. ಇದಕ್ಕೂ ಮೊದಲು ಜ.19ರಂದು, ಕುಂಭಮೇಳ ಪ್ರದೇಶದ ಸೆಕ್ಟರ್ 19ರಲ್ಲಿ ಸಿಲಿಂಡರ್ ಸ್ಫೋಟದಿಂದಾಗಿ ಭಾರಿ ಬೆಂಕಿ ಕಾಣಿಸಿಕೊಂಡಿತು. ಜ.25ರಂದು, ಕುಂಭಮೇಳ ಪ್ರದೇಶದ ಸೆಕ್ಟರ್ 2ರಲ್ಲಿ 2 ಕಾರುಗಳಿಗೆ ಬೆಂಕಿ ಹೊತ್ತಿಕೊಂಡಿತು.

ಶ್ರೀಲಂಕಾ ನೌಕಾಪಡೆಯಿಂದ 14 ಭಾರತೀಯ ಮೀನುಗಾರರ ಬಂಧನ



ರಾಮನಾಥಪುರಂ: ಅಂತಾರಾಷ್ಟ್ರೀಯ ಕಡಲ ಗಡಿ ರೇಖೆ ಉಲ್ಲಂಘಿಸಿದ ಆರೋಪದ ಮೇಲೆ ಶ್ರೀಲಂಕಾ ನೌಕಾಪಡೆಯು ಶನಿವಾರ ರಾಮೇಶ್ವರಂ ಮತ್ತು ತಂಗಚಿಮಡಂನಿಂದ 14 ಮೀನುಗಾರರನ್ನು ಬಂಧಿಸಿದೆ. ಬಂಧಿತರನ್ನು ಕಾನೂನು ಪ್ರಕ್ರಿಯೆಗಾಗಿ ಶ್ರೀಲಂಕಾಕ್ಕೆ ಕರೆದೊಯ್ಯಲಾಗಿದೆ. ಮೀನುಗಾರಿಕಾ ಇಲಾಖೆಯ ಪ್ರಕಾರ, ಮೀನುಗಾರರು ಐಎಂಬಿಎಲ್ ಬಳಿ ಮೀನುಗಾರಿಕೆ ನಡೆಸುತ್ತಿದ್ದಾಗ ರಾಮೇಶ್ವರಂನಿಂದ 470 ದೋಣಿಗಳು ಶನಿವಾರ ಸಮುದ್ರಕ್ಕೆ ಇಳಿದಿದ್ದವು.

ಮೀನುಗಾರರ ಸಮೂಹವು ಶ್ರೀಲಂಕಾದ ಸಮುದ್ರಕ್ಕೆ ಪ್ರವೇಶಿಸಿದೆ ಎಂದು ವರದಿಯಾಗುತ್ತಿದ್ದಂತೆ, ಶ್ರೀಲಂಕಾ ನೌಕಾಪಡೆಯ ಗಸ್ತು ಘಟಕವು ಭಾರತೀಯ ಮೀನುಗಾರರನ್ನು ಓಡಿಸಿದೆ. ಎರಡು ದೋಣಿಗಳು ಶ್ರೀಲಂಕಾದ ನೀರಿನಲ್ಲಿ ಉಳಿದುಕೊಂಡಿದ್ದರಿಂದ ಶ್ರೀಲಂಕಾ ನೌಕಾಪಡೆಯು 14 ಮೀನುಗಾರರನ್ನು ಬಂಧಿಸಿದೆ. ರಾಮೇಶ್ವರಂನಿಂದ ಸಮುದ್ರಕ್ಕೆ ಇಳಿದ ಎರಡು ದೋಣಿಗಳು ಐಎಂಬಿಎಲ್ ಅನ್ನು ಉಲ್ಲಂಘಿಸಿ ಸಿಕ್ಕಿಬಿದ್ದಿವೆ ಎಂದು ಮೀನುಗಾರಿಕೆ ಇಲಾಖೆ ಮೂಲಗಳು ತಿಳಿಸಿವೆ.


ಛತ್ತೀಸ್‌ಗಡದಲ್ಲಿ ಎನ್‌ಕೌಂಟರ್; 31 ನಕ್ಸಲರ ಹತ್ಯೆ, ಇಬ್ಬರು ಪೊಲೀಸರು ಹುತಾತ್ಮ



ಬಿಜಾಪುರ (ಛತ್ತೀಸಗಢ): ನಕ್ಸಲ್ ವಿರೋಧಿ ಕಾರ್ಯಾಚರಣೆಯಲ್ಲಿ ಭದ್ರತಾ ಪಡೆಗಳು ಛತ್ತೀಸ್‌ಗಢದ ಬಿಜಾಪುರ ಜಿಲ್ಲೆಯಲ್ಲಿ ಭಾನುವಾರ ನಡೆಸಿದ ಎನ್‌ಕೌಂಟರ್‌ನಲ್ಲಿ 31 ನಕ್ಸಲರನ್ನು ಹೊಡೆದುರುಳಿಸಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ನಕ್ಸಲರೊಂದಿಗೆ ನಡೆದ ಗುಂಡಿನ ಚಕಮಕಿಯಲ್ಲಿ ಇಬ್ಬರು ಭದ್ರತಾ ಸಿಬ್ಬಂದಿಯೂ ಹುತಾತ್ಮರಾಗಿದ್ದಾರೆ ಮತ್ತು ಇಬ್ಬರು ಗಾಯಗೊಂಡಿದ್ದಾರೆ ಎಂದು ಹೇಳಿದರು. ಈ ಘಟನೆಯೊಂದಿಗೆ ಈ ವರ್ಷ ಇದುವರೆಗೆ ರಾಜ್ಯದಲ್ಲಿ ನಡೆದ ಪ್ರತ್ಯೇಕ ಎನ್‌ಕೌಂಟರ್‌ಗಳಲ್ಲಿ 81 ನಕ್ಸಲರನ್ನು ಭದ್ರತಾ ಪಡೆಗಳು ಹೊಡೆದುರುಳಿಸಿದ್ದಾರೆ. ಇಂದ್ರಾವತಿ ರಾಷ್ಟ್ರೀಯ ಉದ್ಯಾನವನ ಪ್ರದೇಶದ ಅರಣ್ಯದಲ್ಲಿ ಬೆಳಗ್ಗೆ ವಿವಿಧ ಭದ್ರತಾ ಪಡೆಗಳು ನಡೆಸಿದ ಜಂಟಿ ನಕ್ಸಲ್ ವಿರೋಧಿ ಕಾರ್ಯಾಚರಣೆ ವೇಳೆ ಗುಂಡಿನ ಚಕಮಕಿ ನಡೆದಿದೆ.

ಎನ್‌ಕೌಂಟರ್‌ನಲ್ಲಿ ಮೂವತ್ತೊಂದು ನಕ್ಸಲರು ಹತರಾಗಿದ್ದಾರೆ ಎಂದು ಬಸ್ತಾರ್ ರೇಂಜ್‌ನ ಪೊಲೀಸ್ ಮಹಾನಿರೀಕ್ಷಕ ಸುಂದರರಾಜ್ ಪಿ ತಿಳಿಸಿದ್ದಾರೆ. ಸ್ಥಳದಿಂದ ಅಪಾರ ಪ್ರಮಾಣದ ಶಸ್ತ್ರಾಸ್ತ್ರಗಳು ಮತ್ತು ಸ್ಫೋಟಕಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಅಧಿಕಾರಿ ತಿಳಿಸಿದ್ದಾರೆ.

ಉಕ್ರೇನ್ ಯುದ್ಧದ ಬಗ್ಗೆ ರಷ್ಯಾ ಅಧ್ಯಕ್ಷ ಪುಟಿನ್ ಜತೆ ಮಾತನಾಡಿದ್ದೇನೆ



ವಾಷಿಂಗ್ಟನ್: ಉಕ್ರೇನ್‌ನಲ್ಲಿ ನಡೆಯುತ್ತಿರುವ ಯುದ್ಧವನ್ನು ಕೊನೆಗೊಳಿಸಲು ಮಾತುಕತೆ ನಡೆಸಲು ರಷ್ಯಾದ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರೊಂದಿಗೆ ಮಾತನಾಡಿದ್ದೇನೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಬಹಿರಂಗಪಡಿಸಿದ್ದಾರೆ. 2022ರಲ್ಲಿ ತಾವು ಅಧಿಕಾರದಲ್ಲಿದ್ದರೆ ಸಂಘರ್ಷ ಸಂಭವಿಸುತ್ತಿರಲಿಲ್ಲ ಎಂದು ಪ್ರತಿಪಾದಿಸಿದ್ದಾರೆ. 'ದಿ ನ್ಯೂಯಾರ್ಕ್ ಪೋಸ್ಟ್'ಗೆ ನೀಡಿದ ಸಂದರ್ಶನದಲ್ಲಿ ಮಾತನಾಡಿರುವ ಟ್ರಂಪ್, ಯುದ್ಧದಲ್ಲಿ ಜನರು ಪ್ರಾಣ ಕಳೆದುಕೊಳ್ಳುವುದು ಪುಟಿನ್‌ಗೂ ಇಷ್ಟವಿಲ್ಲ. ಜನರ ಸಾವನ್ನು ತಡೆಯಬೇಕೆಂದು ಅವರು ಬಯಸುತ್ತಾರೆ. ಬೈಡನ್ ನಮ್ಮ ದೇಶಕ್ಕೆ ಮುಜುಗರ ತಂದೊಡ್ಡಿದ್ದರು ಎಂದಿದ್ದಾರೆ. ಸುಮಾರು 3 ವರ್ಷಗಳ ಸಂಘರ್ಷವನ್ನು ಕೊನೆಗೊಳಿಸಲು ನೇರ ಮಾತುಕತೆಗಳಲ್ಲಿ ತೊಡಗಿಸಿಕೊಳ್ಳುವ ಇಚ್ಛೆಯನ್ನು ಪುಟಿನ್ ವ್ಯಕ್ತಪಡಿಸಿದ್ದಾರೆ. ಉಕ್ರೇನಿಯನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್ಸ್ಕಿ ಅವರ ಅಧಿಕಾರಾವಧಿ ಮುಗಿದಿದೆ. ಹಾಗಾಗಿ ಅವರ ಜತೆ ಮಾತನಾಡಲು ಪುಟಿನ್ ಸಿದ್ಧರಿಲ್ಲ. ಟ್ರಂಪ್ ಉಕ್ರೇನ್‌ನೊಂದಿಗೆ 500 ಮಿಲಿಯನ್ ಡಾಲರ್‌ಗಳ ಒಪ್ಪಂದವನ್ನು ಪ್ರಸ್ತಾಪಿಸಿದ್ದಾರೆ. ಯುಕ್ರೇನ್ ಯುದ್ಧವನ್ನು ಕೊನೆಗೊಳಿಸಲು ರಷ್ಯಾ ಮುಂದಾಗದಿದ್ದರೆ ಮಾಸ್ಕೋ ವಿರುದ್ಧ ಕಠಿಣ ನಿರ್ಬಂಧಗಳನ್ನು ವಿಧಿಸಬಹುದು ಎಂದು ಡೊನಾಲ್ಡ್ ಟ್ರಂಪ್ ಈ ಹಿಂದೆ ರಷ್ಯಾಕ್ಕೆ ಎಚ್ಚರಿಕೆ ನೀಡಿದ್ದರು.

ಎಂಜಿಪಿಯಲ್ಲಿ ಗ್ರಾಹಕರ ಕುಂದುಕೊರತೆ ಸಭೆ

ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗಕ್ಕೆ ಆನ್‌ಲೈನ್ ಮೂಲಕವೇ ದೂರು ಸಲ್ಲಿಸಬೇಕು

ಯಾವುದೇ ನಿಗದಿತ ನಮೂನೆ ಅಗತ್ಯವಿಲ್ಲ ; ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಅಧ್ಯಕ್ಷೆ ಎ.ಕೆ.ನವೀನ್‌ಕುಮಾರಿ ಮಾಹಿತಿ

ಮೈಸೂರು,ಫೆ.9(ಪಿಎಂ)– ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗಕ್ಕೆ ಆನ್‌ಲೈನ್ ಮೂಲಕವೇ ದೂರು ಸಲ್ಲಿಸಬೇಕಿದ್ದು, ವಕೀಲರು ಇಲ್ಲದೆಯೂ ಗ್ರಾಹಕರೇ ಸ್ವತಃ ವಕಾಲತ್ತು ವಹಿಸಲೂ ಅವಕಾಶವಿದೆ ಎಂದು ಮೈಸೂರು ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಅಧ್ಯಕ್ಷೆ ಎ.ಕೆ.ನವೀನ್‌ಕುಮಾರಿ ಹೇಳಿದರು.



ಮೈಸೂರಿನ ಎಂಜಿಪಿಯಲ್ಲಿ ಭಾನುವಾರ ಸಭೆ ನಡೆಯಿತು.

ಮೈಸೂರಿನ ಯಾದವಗಿರಿಯ ವಿವೇಕಾನಂದ ರಸ್ತೆಯಲ್ಲಿರುವ ಎಂಜಿಪಿ (ಮೈಸೂರು ಗ್ರಾಹಕರ ಪರಿಷತ್) ಕಚೇರಿಯಲ್ಲಿ ಗ್ರಾಹಕ ಸಂರಕ್ಷಣಾ ಕಾಯ್ದೆ ಹಾಗೂ ಗ್ರಾಹಕರ ಕುಂದುಕೊರತೆ ಸಂಬಂಧ ಭಾನುವಾರ ಹಮ್ಮಿಕೊಂಡಿದ್ದ ಸಭೆಯಲ್ಲಿ ಅವರು ಮಾತನಾಡಿದರು.

ಗ್ರಾಹಕರು ತಮಗೆ ಅನ್ಯಾಯವಾದಲ್ಲಿ ಆಯೋಗಕ್ಕೆ ದೂರು ಸಲ್ಲಿಸಬಹುದು. ಆನ್‌ಲೈನ್ ಮೂಲಕವೇ ದೂರು ದಾಖಲಿಸಬೇಕಿದೆ. ಆದರೆ ದೂರು ಸಲ್ಲಿಸಲು ಯಾವುದೇ ನಮೂನೆ ನಿಗದಿಪಡಿಸಿಲ್ಲ. ಆನ್‌ಲೈನ್ ಮೂಲಕ ಖರೀದಿ ಮಾಡಿದ ಸರಕು ಸಂಬಂಧವೂ ದೂರು ಸಲ್ಲಿಸಬಹುದು. ಆನ್‌ಲೈನ್ ಮೂಲಕ ಖರೀದಿಸುವ ಸಾಮಗ್ರಿಗಳನ್ನು ಪ್ಯಾಕ್‌ನಿಂದ ಹೊರತೆಗೆಯುವಾಗ ವಿಡಿಯೋ ಮಾಡಿಕೊಳ್ಳುವುದು ಒಳ್ಳೆಯದು. ಇದರಿಂದ ಗುಣಮಟ್ಟದ ಸಾಮಗ್ರಿ ಬಂದಿಲ್ಲವೆಂದರೆ ಅಥವಾ ಗ್ರಾಹಕರು ಖರೀದಿಸಿದ್ದ ವಸ್ತು ಬದಲು ಬೇರೆ ಬಂದಿದ್ದರೆ, ಖಚಿತ ಸಾಕ್ಷ್ಯ ಹೊಂದಲು ಸಾಧ್ಯವಾಗಲಿದೆ. ಮೊಬೈಲ್ ಮೂಲಕ ವಿಡಿಯೋ ಮಾಡಿಕೊಳ್ಳಬಹುದು ಎಂದು ವಿವರಿಸಿದರು.

ಸೇವೆ ಮತ್ತು ಸರಕು ಸಂಬಂಧ 50 ಲಕ್ಷ ರೂ.ವರೆಗೆ ಜಿಲ್ಲಾ ಗ್ರಾಹಕರ ಆಯೋಗದ ವ್ಯಾಪ್ತಿಗೆ ಬರಲಿದೆ. ಸರಕು ಅಥವಾ ಸೇವೆಯಲ್ಲಿ ದೋಷ ಕಂಡು ಬಂದ ದಿನದಿಂದ ಎರಡು ವರ್ಷದೊಳಗೆ ದೂರು ಸಲ್ಲಿಸಲು ಅವಕಾಶವಿದೆ. ಆಸ್ಪತ್ರೆ, ವಿಮೆ ಸೇರಿದಂತೆ ಸೇವೆಗಳಿಗೆ ಸಂಬಂಧವೂ ದೂರು ನೀಡಬಹುದು. 2022ರಲ್ಲಿ ಆಯೋಗದ ಅಧ್ಯಕ್ಷೆಯಾಗಿ ನಾನು ಅಧಿಕಾರ ವಹಿಸಿಕೊಂಡೆ. ಆಗ ಆಯೋಗದಲ್ಲಿ 840 ಪ್ರಕರಣಗಳು ವಿಲೇವಾರಿ ಆಗದೇ ಬಾಕಿ ಇದ್ದವು. ಈಗ 339 ಪ್ರಕರಣಗಳಿಗೆ ಇಳಿಕೆಯಾಗಿದ್ದು, ತ್ವರಿತಗತಿಯಲ್ಲಿ ಪ್ರಕರಣಗಳನ್ನು ವಿಲೇವಾರಿ ಮಾಡಲು ಪ್ರಯತ್ನ ಮಾಡಿದ್ದೇವೆ ಎಂದು ಸಭಿಕರ ಪ್ರಶ್ನೆಗಳಿಗೆ ಅವರು ಉತ್ತರಿಸಿದರು.

ಗ್ರಾಹಕರ ಜಾಗೃತಿ ಕಾರ್ಯಕ್ರಮ ಅಗತ್ಯ: ಎಂಜಿಪಿ ಮಾಜಿ ಕಾರ್ಯಾಧ್ಯಕ್ಷ ರಾಘವೇಂದ್ರ ಮಾತನಾಡಿ, ಗ್ರಾಹಕರ ಜಾಗೃತಿ ಕಾರ್ಯಕ್ರಮಗಳು ಸಮರ್ಪಕವಾಗಿ ಆಗುತ್ತಿಲ್ಲ. ಗ್ರಾಹಕರು ತಮಗೆ ಆದ ಅನ್ಯಾಯಕ್ಕೆ ನ್ಯಾಯ ಪಡೆಯುವ ಬಗೆ ಬಹುತೇಕರಿಗೆ ಗೊತ್ತಿಲ್ಲ. ಗ್ರಾಹಕರಿಗೆ ನ್ಯಾಯ ದೊರಕಿಸಲು ಆಯೋಗದ ವ್ಯವಸ್ಥೆ ಇದೆ. ಈ ಎಲ್ಲದರ ಬಗ್ಗೆ ಸಾರ್ವಜನಿಕ ವಲಯದಲ್ಲಿ ಜಾಗೃತಿ ಮೂಡಿಸುವ ಅಗತ್ಯವಿದೆ. ಹಾಗಾಗಿ ಜಾಗೃತಿ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಆಯೋಜಿಸುವ ಬಗ್ಗೆ ಆಯೋಗದ ಕಡೆಯಿಂದ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಗೆ ನಿರ್ದೇಶನ ನೀಡಬೇಕು ಎಂದು ಕೋರಿದರು.

ಇದಕ್ಕೆ ಪ್ರತಿಕ್ರಿಯಿಸಿದ ನವೀನ್‌ಕುಮಾರಿ, ಗ್ರಾಹಕರ ಆಯೋಗದ ತೀರ್ಪುಗಳಿಗೆ ಹೆಚ್ಚು ಪ್ರಚಾರ ನೀಡುವ ಅಗತ್ಯವಿದೆ. ಏಕೆಂದರೆ ಇದರಿಂದ ಗ್ರಾಹಕರಿಗೆ ತಮ್ಮ ಹಕ್ಕುಗಳ ಬಗ್ಗೆ ಜಾಗೃತಿ ಮೂಡಲಿದೆ. ಯಾವುದೇ ಉತ್ಪನ್ನ ಸಂಬಂಧ ಪೂರೈಕೆದಾರರಿಗೆ ದಂಡ ವಿಧಿಸಿರುವ ಸುದ್ದಿಗಳು ಪ್ರಕಟಗೊಂಡಾಗ ನ್ಯಾಯ ಪಡೆಯಬಹುದು ಎಂಬ ಅರಿವು ಗ್ರಾಹಕರಲ್ಲಿ ಮೂಡಲಿದೆ. ಒಂದು ಸಾಬೂನು ಖರೀದಿ ಮಾಡಿದರೆ ಅದಕ್ಕೆ ಎಂಆರ್‌ಪಿ ಗಿಂತ ಒಂದು ರೂಪಾಯಿ ಹೆಚ್ಚು ಪಡೆದರೆ, ಇದರ ವಿರುದ್ಧವೂ ದೂರು ದಾಖಲಿಸಬಹುದು. ಆ ಮೂಲಕ ಗ್ರಾಹಕರಿಂದ ಹೆಚ್ಚು ವಸೂಲಿ ಮಾಡಿದ ವ್ಯಾಪಾರಸ್ಥರಿಗೆ ದಂಡ ವಿಧಿಸಲು ಅವಕಾಶವಾಗಲಿದೆ ಎಂದು ತಿಳಿಸಿದರು.

ಮಹಿಳೆಯೊಬ್ಬರು ಮಾತನಾಡಿ, ಮೂರು ವರ್ಷಗಳ ಹಿಂದೆ ಜೀವವಿಮೆ ಸಂಬಂಧ ವೈದ್ಯಕೀಯ ಪಾಲಿಸಿ ಮಾಡಿದ್ದೇವೆ. 29 ವರ್ಷಗಳ ಹಿಂದೆ ಅಪಘಾತದಿಂದ ನನ್ನ ಪತಿಗೆ ಬಲಗೈ ಸ್ವಾಧೀನ ಇಲ್ಲವಾಗಿದೆ. ಕಳೆದ ನವೆಂಬರ್‌ನಲ್ಲಿ ಮಿದುಳಿಗೆ ಸಮಸ್ಯೆಯಾಗಿ, ಇದಕ್ಕೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿ ಶುಲ್ಕ ಪಾವತಿ ಸಹ ಮಾಡಿದ್ದು, ಈ ಸಂಬಂಧ ನಮಗೆ ವಿಮೆ ಕಂಪನಿಯಿಂದ ಮರು ಪಾವತಿ ಮಾಡುತ್ತಿಲ್ಲ. ಮರುಪಾವತಿ ಸಂಬಂಧ ಅರ್ಜಿಯನ್ನು ತಿರಸ್ಕರಿಸಿದ್ದಾರೆ. ಹಾಗಾಗಿ ಪರಿಹಾರವೇನು ಎಂದು ಕೇಳಿದರು.

ಇದಕ್ಕೆ ಪ್ರತಿಕ್ರಿಯಿಸಿದ ನವೀನ್‌ಕುಮಾರಿ, ನಮ್ಮ ಆಯೋಗಕ್ಕೆ ಆನ್‌ಲೈನ್ ಮೂಲಕ ದೂರು ಸಲ್ಲಿಸಿ, ಯಾವ ಕಾರಣಕ್ಕೆ ತಿರಸ್ಕರಿಸಲಾಗಿದೆ ಎಂಬುದನ್ನು ಪರಿಶೀಲಿಸಿ ನೋಡೋಣ ಎಂದು ತಿಳಿಸಿದರು.

ಜೆಎನ್ ನರ್ಮ್‌ಯಡಿ ಸಂಗ್ರಹಿಸಿ ಸಲ್ಲಿಸಿದ ಹಣ ಹಿಂಪಡೆಯಬೇಕು: ಎಂಜಿಪಿ ಸದಸ್ಯ ಡಿ.ವಿ.ದಯಾನಂದ್ ಸಾಗರ್ ಮಾತನಾಡಿ, ಜೆಎನ್ ನರ್ಮ್ (ಜವಾಹರಲಾಲ್ ನೆಹರು ರಾಷ್ಟ್ರೀಯ ಪುನರುಜ್ಜೀವನ ಯೋಜನೆ) ಯೋಜನೆಯಡಿ ಮೈಸೂರಿನ ವಾರ್ಡ್ ನಂ.6ರ (2009ರಲ್ಲಿ ವಾರ್ಡ್ 31) ಗೋಕುಲಂನಲ್ಲಿ ವಾರ್ಡ್ ಅಭಿವೃದ್ಧಿಗೆ 2009ರಲ್ಲಿ ಸಾರ್ವಜನಿಕರ ಸಹಭಾಗಿತ್ವದಡಿ ಹಣ ಸಂಗ್ರಹಿಸಲಾಯಿತು. ಇದರೊಂದಿಗೆ ಹೆಚ್ಚುವರಿ ಹಣ ಸರ್ಕಾರದಿಂದ ಮಂಜೂರು ಆಗಲಿದೆ ಎಂದು ಹೇಳಲಾಗಿತ್ತು. ಆದರೆ ಹೆಚ್ಚುವರಿ ಹಣ ಸರ್ಕಾರದಿಂದ ಮಂಜೂರು ಆದಂತೆ ಇಲ್ಲ ಎಂದರು.

ವಲಯ ಕಚೇರಿ 4ರ ವಲಯ ಆಯುಕ್ತರ ಬ್ಯಾಂಕ್ ಖಾತೆಯಲ್ಲಿ ನಮ್ಮ ವಾರ್ಡ್ ನಾಗರಿಕರಿಂದ ಅಂದು ಸಂಗ್ರಹಿಸಿದ ಹಣ 1,36,114 ರೂ. ಇದೆ. ಇದನ್ನು ಹಿಂಪಡೆದು ವಾರ್ಡ್ ಅಭಿವೃದ್ಧಿಗೆ ವಿನಿಯೋಗಿಸಬೇಕಿದೆ. ಈ ಸಂಬಂಧ ವಾರ್ಡ್‌ನಿಂದ ಅರ್ಜಿ ಸಲ್ಲಿಸಿ, ನಾಗರಿಕರಿಂದ ಸಂಗ್ರಹಿಸಿದ ಹಣ ವಾಪಸ್ ನೀಡುವಂತೆ ಮನವಿ ಮಾಡಿದರೂ ಪ್ರಯೋಜನವಾಗುತ್ತಿಲ್ಲ. ಗ್ರಾಹಕರ ವ್ಯಾಜ್ಯಗಳ ಆಯೋಗದಿಂದ ಪರಿಹಾರ ದೊರೆಯಬಹುದೇ ಎಂದು ಕೇಳಿದರು. ಇದಕ್ಕೆ ಪ್ರತಿಕ್ರಿಯಿಸಿದ ನವೀನ್‌ಕುಮಾರಿ, ಹಾಗಿದ್ದಲ್ಲಿ ಸಂಬಂಧಿಸಿದ ದಾಖಲೆಗಳೊಂದಿಗೆ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗಕ್ಕೆ ದೂರು ಸಲ್ಲಿಸಬಹುದು ಎಂದರು.

ಎಂಜಿಪಿ ಸಂಸ್ಥಾಪಕ ಅಧ್ಯಕ್ಷ ಭಾಮೀ ವಿ.ಶೆಣೈ, ಕಾರ್ಯಾಧ್ಯಕ್ಷೆ ಶೋಭಾನ, ಸದಸ್ಯರಾದ ನಟರಾಜ್, ಭಾನು ಪ್ರಶಾಂತ್, ಪ್ರಭಾ ನಂದೀಶ್, ಎಎಪಿ ಪಕ್ಷದ ಮುಖಂಡರಾದ ಮಾಲವಿಕ ಗುಬ್ಬಿವಾಣಿ ಮತ್ತಿತರರು ಸಭೆಯಲ್ಲಿ ಪಾಲ್ಗೊಂಡಿದ್ದರು.

ಫೆ.16ರಿಂದ ಶ್ರೀ ಜ್ವಾಲಾಮುಖಿ ತ್ರಿಪುರ ಸುಂದರಿ ಅಮ್ಮನವರ ಜಾತ್ರಾ ಮಹೋತ್ಸವ

ಮೈಸೂರು, ಫೆ.9(ಎಸ್‌ಪಿಎನ್)–ಮೈಸೂರು ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಫೆ.16ರಿಂದ ಫೆ.18ರವರೆಗೆ ಶ್ರೀಜ್ವಾಲಾಮುಖಿ ತ್ರಿಪುರ ಸುಂದರಿ ಅಮ್ಮನವರ ಜಾತ್ರಾ ಮಹೋತ್ಸವ ನಡೆಯಲಿದೆ.



ಫೆ.16ರಂದು ಬೆಳಗ್ಗೆ ಅಮ್ಮನವರಿಗೆ ಏಕಾದಶವಾರ, ರುದ್ರಾಭಿಷೇಕ, ಸುವರ್ಣಾಲಂಕಾರ, ಸಹಸ್ರ ನಾಮಾರ್ಚನೆ ಸೇರಿದಂತೆ ವಿವಿಧ ಪೂಜಾ ಕೈಂಕರ್ಯ ನೆರವೇರಲಿದೆ. ಫೆ.17ರಂದು ಪಂಚಮೀ ಚಿತ್ತ ನಕ್ಷತ್ರ ಶ್ರೀಯವರಿಗೆ ಏಕಾದಶವಾರ, ರುದ್ರಾಭಿಷೇಕ ಸಹಸ್ರ ನಾಮಾರ್ಚನೆ ಸೇರಿದಂತೆ ಮಧ್ಯಾಹ್ನ ಪ್ರಸಾದ ವಿನಿಯೋಗ ನಡೆಯಲಿದೆ. ಹಾಗೂ ಫೆ.18ರಂದು ಷಷ್ಠಿ ಸ್ವಾತಿ ನಕ್ಷತ್ರ ಶ್ರೀಯವರಿಗೆ ಏಕಾದಶವಾರ ರುದ್ರಾಭಿಷೇಕ ಸೇರಿದಂತೆ ಇತರೆ ಪೂಜಾ ಕಾರ್ಯಕ್ರಮಗಳು ಜರುಗಲಿವೆ ಎಂದು ಚಾಮುಂಡಿಬೆಟ್ಟದ ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಎಂ.ಜೆ.ರೂಪ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಬ್ರಾಹ್ಮಣ ಯುವ ವೇದಿಕೆಯಿಂದ ಮಧ್ವನವಮಿ ಆಚರಣೆ



ಮೈಸೂರು ಜಿಲ್ಲಾ ಬ್ರಾಹ್ಮಣ ಯುವ ವೇದಿಕೆಯಿಂದ ಶ್ರೀ ಗುರು ರಾಘವೇಂದ್ರ ಸ್ವಾಮಿ ಮಠದಲ್ಲಿ ಮಧ್ವನವಮಿ ಆಚರಿಸಲಾಯಿತು.

ಮೈಸೂರು, ಫೆ. 9–ಮೈಸೂರು ಜಿಲ್ಲಾ ಬ್ರಾಹ್ಮಣ ಯುವ ವೇದಿಕೆಯಿಂದ ಕುವೆಂಪುನಗರದ ಶ್ರೀ ಗುರು ರಾಘವೇಂದ್ರ ಸ್ವಾಮಿ ಮಠದಲ್ಲಿ ಮಧ್ವನವಮಿಯನ್ನು ಸಡಗರದಿಂದ ಆಚರಿಸಲಾಯಿತು.

ಮಧ್ವಾಚಾರ್ಯರ ಭಾವಚಿತ್ರಕ್ಕೆ ಅಲಂಕರಿಸಿ ವಿಶೇಷ ಪೂಜೆ ಸಲ್ಲಿಸಲಾಯಿತು. ನಂತರ ಮಾತನಾಡಿದ ಮುಡಾ ಮಾಜಿ ಅಧ್ಯಕ್ಷ ಎಚ್.ವಿ.ರಾಜೀವ್, ಆಚಾರ್ಯ ಮಧ್ವರ ಸಂದೇಶಗಳು ಸರ್ವಕಾಲಿಕ ಮಾರ್ಗದರ್ಶಕವಾಗಿವೆ. ಅವರ ಗ್ರಂಥಗಳಲ್ಲಿ ಮಾನವೀಯ ಗುಣಗಳ ಉಲ್ಲೇಖವಿದೆ. ಮಧ್ವಮತದ ಪತಾಕೆಯನ್ನು ಬಾನೆತ್ತರಕ್ಕೆ ಹಾರಿಸಿದ ಅಗ್ರಗಣ್ಯರಲ್ಲಿ ಮಧ್ವಾಚಾರ್ಯರು ಒಬ್ಬರಾಗಿದ್ದಾರೆ ಎಂದರು.

ಹಿರಿಯ ಸಮಾಜ ಸೇವಕ ಕೆ.ರಘುರಾಮ್ ವಾಜಪೇಯಿ ಮಾತನಾಡಿ, ಮಧ್ವರನ್ನು ಕೇವಲ ಒಂದು ದಿನ ಆರಾಧಿಸಿದರೆ ಸಾಲದು. ಪ್ರತಿನಿತ್ಯ ಅವರು ಪ್ರತಿಪಾದಿಸಿದ ತತ್ವ, ಸಿದ್ಧಾಂತಗಳ ಆಚರಣೆ ಮಾಡಬೇಕು. ಅವರು ಹಾಕಿಕೊಟ್ಟ ಮಾರ್ಗದಲ್ಲಿ ಜ್ಞಾನಕಾರ್ಯಗಳನ್ನು ಮಾಡಿ ಜೀವನ ಸಾರ್ಥಕಪಡಿಸಿಕೊಳ್ಳಬೇಕು. ವಿಶ್ವಕ್ಕೆ ಪೂರ್ಣಪ್ರಜ್ಞ ದೃಷ್ಟಿಯನ್ನು ನೀಡಿದ ಮಧ್ವರ ಸ್ಮರಣೆ ಪ್ರತಿಕ್ಷಣವೂ ಆಗಬೇಕು ಎಂದು ಅವರು ಹೇಳಿದರು. ಕಾಂಗ್ರೆಸ್ ಮುಖಂಡ ಎನ್.ಎಂ. ನವೀನ್ ಕುಮಾರ್ ಮಾತನಾಡಿ, ಉಡುಪಿ ಜಿಲ್ಲೆಯ ಪಾಜಕ ಗ್ರಾಮದ ಮಧ್ಯಗೇಹ ಭಟ್ಟ ಮತ್ತು ವೇದಾವತಿ ದಂಪತಿಗಳಿಗೆ ಜನಿಸಿದ ಆನಂದತೀರ್ಥರು ಪೂರ್ವಾಶ್ರಮದ ಬಳಿಕ ವಾಸುದೇವ ಮಧ್ವಾಚಾರ್ಯರಾಗಿ 13ನೇ ಶತಮಾನದಲ್ಲಿ ದ್ವೈತ ಮತದ ಸ್ಥಾಪಕರಾಗಿ ತತ್ವಜ್ಞಾನಿಗಳಾದರು. ಪುರಾಣದಲ್ಲಿ ಬರುವ ಹನುಮ ಮತ್ತು ಅವತಾರವೇ ಮಧ್ವಾಚಾರ್ಯರು. 74ನೇ ವಯಸ್ಸಿನಲ್ಲಿ ಬದರಿಕಾಶ್ರಮಕ್ಕೆ ಒಬ್ಬರೇ ಕಾಲ್ನಡಿಗೆಯಲ್ಲಿ ಪ್ರಯಾಣ ಹೋದ ದಿನವೇ ಮಧ್ವನವಮಿ ಎಂದು ಆಚರಿಸಲ್ಪಡುತ್ತದೆ. ಭಕ್ತಿಮಾರ್ಗದ ಪ್ರವರ್ತಕರಾದ ಮಧ್ವಾಚಾರ್ಯರು ಕನ್ನಡದಲ್ಲಿ ದಾಸಪಂಥದ ಮಾರ್ಗ ಸಂಗೀತ ಕಲಾ ಪ್ರಕಾರದೊಡನೆ ಬೆಳೆಯಲು ಸ್ಫೂರ್ತಿಯಾದರು ಎಂದರು.

ಎಸ್.ಬಿ.ವಾಸುದೇವಮೂರ್ತಿ, ಮೈಸೂರು ಜಿಲ್ಲಾ ಬ್ರಾಹ್ಮಣ ಯುವ ವೇದಿಕೆ ಪ್ರಧಾನ ಕಾರ್ಯದರ್ಶಿ ವಿಕ್ರಂ ಅಯ್ಯಂಗಾರ್, ವಿನಯ್ ಕಣಗಾಲ್, ಪುನೀತ್ ಕುಡ್ಲೂರು, ವಿಕಾಸ್ ಶಾಸ್ತ್ರಿ, ರಂಗನಾಥ್, ಸುಚಿಂದ್ರ, ರಘು ಭಾರದ್ವಾಜ್, ಮಿರ್ಲೆ ಪನೀಶ್, ಕಡಕೊಳ ಜಗದೀಶ್, ಗುರುರಾಜ್, ವಿಜಯ್‌ಕುಮಾರ್ ಇನ್ನಿತರರಿದ್ದರು.

ಇಂದಿನಿಂದ ಮಂಡಿ ಮೊಹಲ್ಲಾದ ಶ್ರೀ ಎಲ್ಲಮ್ಮಾಂಬ ದೇವಸ್ಥಾನದಲ್ಲಿ ಜಾತ್ರೆ

ಮೈಸೂರು, ಫೆ9(ಪಿಎಂ)– ಮೈಸೂರಿನ ಮಂಡಿಮೊಹಲ್ಲಾದ ಎಲ್ಲಮ್ಮಾಂಬ ವೃತದಲ್ಲಿರುವ ಶ್ರೀ ಎಲ್ಲಮ್ಮಾಂಬ, ಚಂದ್ರಗುಪ್ತಾಂಬ ದೇವಸ್ಥಾದಲ್ಲಿ ಫೆ.10ರಿಂದ 13ರವರೆಗೆ 78ನೇ ಜಾತ್ರಾ ಮಹೋತ್ಸವ ನಡೆಯಲಿದೆ.

ಫೆ.10ರಂದು ಪ್ರಾತಃಕಾಲ ಪುಣ್ಯಾಹ, ಕಲಶಸ್ಥಾಪನೆ, ಶ್ರೀ ಗಣಪತಿ ನವಗ್ರಹ ಸೇರಿದಂತೆ ವಿವಿಧ ಧಾರ್ಮಿಕ ವಿಧಿ ವಿಧಾನಗಳು ನಡೆಯಲಿವೆ. ಫೆ.11ರಂದು ಸಹ ವಿವಿಧ ಧಾರ್ಮಿಕ ಪೂಜಾ ಕೈಂಕರ್ಯ ನಡೆಯಲಿದೆ. ಫೆ.12ರಂದು ಬೆಳಗ್ಗೆಯಿಂದ ವಿವಿಧ ಧಾರ್ಮಿಕ ವಿಧಿವಿಧಾನಗಳು ನಡೆಯಲಿದ್ದು, ಸಂಜೆ 6ಕ್ಕೆ ಶ್ರೀದೇವಿಯವರ ಉತ್ಸವವು ಪ್ರಮುಖ ಬೀದಿಗಳಲ್ಲಿ ಹೊರಟು ರಾತ್ರಿ 8.30ಕ್ಕೆ ದೇವಸ್ಥಾನಕ್ಕೆ ಹಿಂತಿರುಗಲಿದೆ. ಬಳಿಕ ಉಯ್ಯಾಲೋತ್ಸವ ನಡೆಯಲಿದೆ. ಫೆ.13ರಂದು ರಾತ್ರಿ 7ಕ್ಕೆ ಶ್ರೀದೇವಿಯವರನ್ನು ಉಯ್ಯಾಲೆಯಿಂದ ಇಳಿಸಿ, ನಂತರ ಮಹಾ ಮಂಗಳಾರತಿ ಮತ್ತು ಪ್ರಸಾದ ವಿನಿಯೋಗ ನಡೆಯಲಿದೆ ಎಂದು ಶ್ರೀ ಎಲ್ಲಮ್ಮಾಂಬ ಚಂದ್ರಗುಪ್ತಾಂಬ ಧರ್ಮಸಂಸ್ಥೆ ಟ್ರಸ್ಟ್ ಪ್ರಕಟಣೆ ತಿಳಿಸಿದೆ.

STAR OF MYSORE

SPECIAL ISSUE

Star of Mysore is completing **47** years of service on **16th February 2025** and entering **48th** year of publication. As in the past, this year too we will be publishing a Special Issue.


We request our advertisers and patrons to release their advertisements before **11th February** to facilitate printing as per schedule.

HEAD OFFICE
0821-2496520 (5-LINES)
Ad Dept. - 0821-2496522 / 23
Email : ad@starofmysore.com
Maria G. Fernandes
Advt. Manager: 94485-25060
Joy Anthony Dove
Sr. Executive-Ad Sales
89516-68960
Prema
Sr. Executive Advertising
98805-49879
K.R. Circle Office: 0821-2431774
D.D. Urs Road Office: 0821-2428695
Kodagu Office: 97314-69871
Mandya Office: 87629-60325
Chamarajanagar: 92422-65657
Nanjangud: 98805-09200 / 99016-02226
T.N. Pura: 94483-05750
Bengaluru: 98440-46761

ಮೈಸೂರಿನ ವಾತಾವರಣದಲ್ಲಿ ವಿದ್ಯಾರ್ಥಿಗಳು ಹೆಚ್ಚು ಸುಸಂಸ್ಕೃತರಾಗುತ್ತಾರೆ

- ನಿವೃತ್ತ ಪೊಲೀಸ್ ಅಧಿಕಾರಿ ಬಸವರಾಜ ಮಾಲಗತ್ತಿ ಅಭಿಮತ
- ಪ್ರತಿಭಾವಂತ ನೃತ್ಯಪಟುಗಳಿಗೆ ಪ್ರಮಾಣ ಪತ್ರ ವಿತರಣೆ

ಮೈಸೂರು, ಫೆ.9(ಎಸ್‌ಪಿಎನ್)– ನನ್ನ ವೃತ್ತಿ ಮತ್ತು ಜೀವನ ಅನುಭವದ ಆಧಾರದಲ್ಲಿ ಹೇಳುವುದಾದರೆ ಮೈಸೂರಿನ ಸಾಂಸ್ಕೃತಿಕ ವಾತಾವರಣದಲ್ಲಿ ಬೆಳೆಯುವ ವಿದ್ಯಾರ್ಥಿಗಳು ಹೆಚ್ಚು ವಿನಯವಂತರು, ಸುಸಂಸ್ಕೃತರು ಹಾಗೂ ದೇಶಕ್ಕೆ ಒಳ್ಳೆಯ ಸಂಸ್ಕಾರವುಳ್ಳ ಪ್ರಜೆಗಳಾಗಿ ರೂಪುಗೊಳ್ಳುತ್ತಾರೆ ಎಂದು ನಿವೃತ್ತ ಪೊಲೀಸ್ ಅಧಿಕಾರಿ ಬಸವರಾಜ ಎ.ಮಾಲಗತ್ತಿ ಬಣ್ಣಿಸಿದರು.



ವಿದುಷಿ ಕಲ್ಪಿತ ಪ್ರಶಾಂತ ನೇತೃತ್ವದಲ್ಲಿ ನಡೆದ ಕಲಾದರ್ಪಣ–3 ಕಾರ್ಯಕ್ರಮವನ್ನು ನಿವೃತ್ತ ಪೊಲೀಸ್ ಅಧಿಕಾರಿ ಬಸವರಾಜ ಎ.ಮಾಲಗತ್ತಿ ಉದ್ಘಾಟಿಸಿದರು.

ಮೈಸೂರು ಕಲಾಮಂದಿರದಲ್ಲಿ ನೃತ್ಯ ವರ್ಣಕಲಾ ಸೌರಭ ಸಂಸ್ಥೆ ವತಿಯಿಂದ ಆಯೋಜಿಸಿದ್ದ ವಿದುಷಿ ಕಲ್ಪಿತ ಪ್ರಶಾಂತ ನೇತೃತ್ವದಲ್ಲಿ ನಡೆದ ಕಲಾದರ್ಪಣ–3 ಹಾಗೂ ಸೀನಿಯರ್ ಮತ್ತು ಜೂನಿಯರ್ ವಿಭಾಗದಲ್ಲಿ ಪ್ರತಿಭಾವಂತ ನೃತ್ಯಪಟುಗಳಿಗೆ ಪ್ರಮಾಣಪತ್ರ ವಿತರಿಸುವ ಕಾರ್ಯಕ್ರಮವನ್ನು ಉದ್ಘಾಟಿಸಿ, ಮಾತನಾಡಿದರು. ಉತ್ತರ ಕರ್ನಾಟಕದಲ್ಲಿ ಹುಬ್ಬಳ್ಳಿ–ಧಾರವಾಡ ಹಾಗೂ ದಕ್ಷಿಣ ಕರ್ನಾಟಕದಲ್ಲಿ ಮೈಸೂರನ್ನು ಸಾಂಸ್ಕೃತಿಕ ರಾಜಧಾನಿ ಎಂದು ಕರೆಯುತ್ತೇವೆ. ಆದರೆ, ಈ ವಿಚಾರದಲ್ಲಿ ನನ್ನ ಅನುಭವವೇ ಬೇರೆಯಿದೆ. ಪೊಲೀಸ್ ಇಲಾಖೆ ಕೆಲಸಕ್ಕೆ ಸೇರಿದ ಮೇಲೆ 12 ಜಿಲ್ಲೆಗಳಲ್ಲಿ ಕೆಲಸ ಮಾಡಿದ್ದೇನೆ. ಡಿವೈಎಸ್ಪಿ ಹಾಗೂ ಮೈಸೂರಲ್ಲಿ ಕಾನೂನು ಸುವ್ಯವಸ್ಥೆ ವಿಭಾಗದಲ್ಲಿ 4 ವರ್ಷ ಡಿಸಿಪಿ ಆಗಿ ಕೆಲಸ ಮಾಡಿದ್ದೇನೆ. ಇದರ ಅನುಭವ ಆಧಾರದಲ್ಲಿ ಹೇಳುವುದಾದರೆ, ಹುಬ್ಬಳ್ಳಿ–ಧಾರವಾಡಕ್ಕೆ ಸಾಂಸ್ಕೃತಿಕ ರಾಜಧಾನಿ ಎಂದು ಕರೆದರೂ ಅದಕ್ಕಿಂತ ಹೆಚ್ಚು ಕಲಾ ಚಟುವಟಿಕೆಗಳಲ್ಲಿ ಶ್ರೀಮಂತವಾಗಿರುವ ಮೈಸೂರಿಗೆ ಆ ಹೆಸರು ಸೂಕ್ತವಾಗುತ್ತದೆ ಎಂದು ಕೆಲ ಘಟನೆಗಳನ್ನು ಉಲ್ಲೇಖಿಸಿ ತಿಳಿಸಿದರು.

ಮೈಸೂರಲ್ಲಿ ಜಾನಪದ, ಕಲೆ, ಸಾಹಿತ್ಯ ಚರ್ಚೆ, ವಿಮರ್ಶೆ, ಶಾಸ್ತ್ರೀಯ ಸಂಗೀತ, ನೃತ್ಯ, ಚಿತ್ರಕಲೆ, ಶಿಲ್ಪಕಲೆ ಸೇರಿದಂತೆ ಎಲ್ಲಾ ಕಲಾ ಪ್ರಕಾರಗಳಿಗೂ ವೇದಿಕೆಯಾಗಿದೆ. ಇಲ್ಲಿನ ಎಲ್ಲಾ ಕಲಾ ಪ್ರಕಾರಗಳಿಗೂ ಜನರ ಪ್ರೋತ್ಸಾಹವಿದೆ. ವಿದ್ಯಾರ್ಥಿಗಳು ಯಾವುದನ್ನು ಕಲಿಯಲು ಇಚ್ಛಿಸುತ್ತಾರೋ ಅದಕ್ಕೆ ಕಲಿಯುವ ವಾತಾವರಣವೂ ಇಲ್ಲಿದೆ. ಇಂತಹ ವಾತಾವರಣದಲ್ಲಿ ವಿದ್ಯಾರ್ಥಿಗಳು 5 ವರ್ಷ ಇದ್ದರೆ ಅವರ ವ್ಯಕ್ತಿತ್ವದಲ್ಲಿ ಬದಲಾವಣೆಯಾಗುತ್ತದೆ ಎಂದು ಇಲ್ಲಿನ ಕಲಾ ಚಟುವಟಿಕೆಗಳಿಂದ ವಿದ್ಯಾರ್ಥಿಗಳ ಮೇಲಾಗುವ ಪರಿಣಾಮವನ್ನು ವಿವರಿಸಿದರು.

ಈ ವೇಳೆ ನೃತ್ಯ ಪರೀಕ್ಷೆಯಲ್ಲಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ ವಿದ್ಯಾರ್ಥಿಗಳಾದ ಎನ್.ಪರಿಧಿ, ಕಾಶ್ವಿ ವಿನಯ್, ಯು.ಶ್ರೇಯಶ್ರೀ, ಎನ್.ಎನ್. ಕ್ರಿಷ್ಣ, ಎಸ್.ಸೃಜನ, ಅಕ್ಷರ ಶೆಟ್ಟಿ, ತಾನ್ವಿ ದಯಾಕರ್, ಎಂ.ಪ್ರಣೀಕ, ಬಿ.ನಾಗಶ್ರೀ, ವಿ.ಮಧುರ, ವೈ.ಸನ್ವಿತಾ, ಪಿ.ಶೃತಿಕಶ್ರೀ, ವೈಧೃತಿ, ಮನ್ವಿ ವೇಣುಪ್ರಸಾದ್, ಎಸ್.ಶೃತಿ, ಆರ್.ಪಿ.ಯುಕ್ತ ಎನ್.ನಿಸರ್ಗ, ರಶ್ಮಿ, ಅಭಿಗೈಲ್ ಜಾರ್ಜ್, ಎಂ.ಕನ್ನಿಕಾ, ವೀಕ್ಷಾ ಪಿ.ಕುಮಾರ್, ಆಸ್ತಾ ಅಜಯ್ ಕುಲಕರ್ಣಿ, ಪ್ರತೀಕ್ಷ ಪಟೇಲ್, ಕೆ.ಆರ್. ರುದ್ರಶ್ರೀ, ಎಸ್.ಕೆ.ಧನಿಕ್ಷಾ, ಆರ್.ಮನ್ವಿತಾ, ಉನ್ನತಿ ಪಟೇಲ್, ಬಿ.ಸಾನ್ವಿ ಸುಮಗ ಅವರಿಗೆ ಪ್ರಮಾಣ ಪತ್ರ ವಿತರಿಸಲಾಯಿತು.

ವಿವಿಧ ಸಂಗೀತ ಸ್ಪರ್ಧೆಯಲ್ಲಿ ವಿಜೇತರಾದ ಎಸ್.ಪೂರ್ಣ ಪ್ರಜ್ಞ ಎಂ.ಶ್ರೇಯನ್, ಎಂ.ಜಿ.ಲೋಚನಾ, ಎಂ.ಕುಶಾಲ್, ನಿತ್ಯಾ ಕೋಟ, ರಿಷಬಾ ದೀಪಕ್, ಎಸ್.ಎಂ. ವೇದಿಕ, ಎಸ್.ಎಂ.ಅಚಿಂತ್ ಸೂರ್ಯ, ಎಂ.ಕೆ. ಸಾಯಿ ಸಾತ್ವಿಕ್, ಬಿ.ಅಭಿಜ್ಞಾ ಅವರಿಗೆ ಬಹುಮಾನ ವಿತರಿಸಲಾಯಿತು. ವೇದಿಕೆಯಲ್ಲಿ ಹಿರಿಯ ರಂಗಕರ್ಮಿ ಬಿ.ಎಂ.ರಾಮಚಂದ್ರ, ವಿದುಷಿ ದಿಶಾ ಶರತ್ ಉಪಸ್ಥಿತರಿದ್ದರು. ನಂತರ ನೃತ್ಯ ವರ್ಣಕಲಾ ಸೌರಭದ ನಿರ್ದೇಶಕಿ ಕಲ್ಪಿತ ಪ್ರಶಾಂತ್ ಭರತನಾಟ್ಯ ಪ್ರದರ್ಶಿಸಿದರು.